ಓಂ

ನಮಃ.

ಶ್ರೀ ಭಗವದ್ಗೀತಾ.

ಕನ್ನಡವಾಕ್ಯ ಗ್ರಂಥ.

ಬೆಂಗಳೂರು ಡಿಸ್ಟ್ರಿಕ್ಟ್

ಹೊಸಕೋಟೆ ತಾಲ್ಲೂಕು, ಸಬ್‌ರಿಜಿಸ್ಟ್ರಾರ್

ಎಸ್. ರಾಮಸ್ವಾಮಿಯ್ಯಂಗಾರಿಂದ

ರಚಿಸಲ್ಪಟ್ಟಿ

ಬೆಂಗಳೂರು

ವರಿಷ್ ಮುದ್ರಾಕ್ಷರಶಾಲೆಯಲ್ಲಿ

ಮುದ್ರಿಸಲ್ಪಟ್ಟಿತು.

1910.

ಕ್ರಯ 6 ಕಾಸೆ.

ವಿಷಯಾನುಕ್ರಮಣಿಕೆ. 16.6.38

ವಿಷಯ.		ಪುಟಸಂಖ್ಯೆ.
ಪೀಠಿಕೆ.		೧—೨
೧ನೇ ಅಧ್ಯಾಯ.		೩—೯
೨	,,	೯—೨೫
೩	,,	೨೫—೩೫
೪	,,	೩೫—೪೫
೫	,,	೪೬—೫೨
೬	,,	೫೨—೬೨
೭	,,	೬೨—೬೯
೮	,,	೬೯—೭೫
೯	,,	೭೫—೮೩
೧೦	,,	೩೮—೯೨
೧೧	,,	೯೩-೧೦೭
೧೨	,,	೧೦೭-೧೧೨
೧೩	,,	೧೧೨-೧೨೧
೧೪	,,	೧೨೧-೧೨೮
೧೫	,,	೧೨೮-೧೩೪
೬	,,	೧೩೪-೧೪೦
೧೭	,,	೧೪೦ ೧೪೭
೮	,,	೧೪೮-೧೬೫

ಶ್ರೀ ಗೋಪಾಲಕೃಷ್ಣಾಯನಮಃ.

ಭಗವದ್ಗೀತೆ.

ಪೀಠಿಕೆ.

ಭಗವದ್ಗೀತೆ ಎಂಬುವ ಸಂಸ್ಕೃತ ಶ್ಲೋಕ ರೂಪವಾದ ಗ್ರಂಥವನ್ನ ಇದುವರಿವಿಗೂ ಯಾರೂ ಸುಲಭವಾದ ಕನ್ನಡವಾಕ್ಯಗಳಲ್ಲಿ ತರ್ಜುಮೆಯನ್ನು ಮಾಡಿ, ಪಂಡಿತ ಪಾಮರರಿಗೆಲ್ಲಾ ವ್ಯಕ್ತವಾಗಿತಿಳಿಯು ವಂತೆ ಅಚ್ಚು ಹಾಕಿಲ್ಲವೆಂದು ತಿಳಿದು, ಈ ಗೀತಾಮೃ ತವನ್ನ ಪಾಮರ ಸ್ತ್ರೀ ಪುರುಷರ ಮನಸ್ಸಿಗೆ ಗೋಚ ರಮಾಡದೇನೇ, ವಿದ್ವಜ್ಜನಗಳು ಮಾತ್ರ ಯಥೇಚ್ಛ ವಾಗಿ ಪಾನಮಾಡುತ್ತಲಿರುವುದನ್ನು ಸಹಿಸಲಾರದೆ, ನಮ್ಮ ಸಂಗಡ ಅವರೂಕೂಡ, ಯಥಾಶಕ್ತಿ, ಯಥಾ ಮತಿ, ರಸಾನುಭವವಂ ಮಾಡಬೇಕೆಂದು ಇಚ್ಛೈಸಿ, ಈ ಸಾರತಮವಾದ ಗ್ರಂಥವನ್ನ ಕನ್ನಡ ವಾಕ್ಯಗ ಳಲ್ಲಿ ಸ್ತ್ರೀ, ಬಾಲ, ಶೂದ್ರರಿಗೆಲ್ಲಾ, ಸುಲಭವಾಗಿತಿ ಳಿಯುವಂತೆ ಬರಿಯಲು ಆರಂಭಿಸಿರುವೆನು.

ಗ್ರಂಥ ಪೂರ್ತಿಬಗ್ಯೂ, ಪರಿಷ್ಕಾರದಬಗ್ಯೂ, ಪ್ರಾಚುರ್ಯದಬಗ್ಯೂ, ಪ್ರಯೋಜನದಬಗ್ಯೂ, ಭಗ

ವಂತನನ್ನೇ ಸಹಾಯಕ್ಕಾಗಿ ಪ್ರಾರ್ಥಿಸುತ್ತೇನೆ. ಇದರಲ್ಲಿ ಎಷ್ಟು ನ್ಯೂನಾಧಿಕ್ಯತೆ ಇದ್ದಾಗ್ಯೂ ದಾಸನ ಮನಸ್ಸಿನಲ್ಲಿ ದೃಷ್ಟಿಯನ್ನಿಟ್ಟು, ಸಮಸ್ತ ಅಪರಾಧಗಳನ್ನೂ ಕ್ಷಮಿಸಿ, ಲಾಲಿಸ ಬೇಕೆಂದು ಬೇಡುವ,

ತಮ್ಮ ವಿಧೇಯ

ಯಸ್. ರಾಮಸ್ವಾಮ್ಯೆಯಂಗಾರ್.

ಸಬ್‌ರಿಜಿಸ್ಟ್ರಾರ್, ಹೊಸಕೋಟೆ.

ಬೆಂಗಳೂರ್ ಡಿಸ್ಟ್ರಿಕಟ್.

16.8.38.

ಶ್ರೀ ಭಗವದ್ಗೀತಾ ಪ್ರಾರಂಭಃ.

೧ನೇ ಅಧ್ಯಾಯಂ, ಅರ್ಜುನ ವಿಷಾದಯೋಗ.

ಧೃತರಾಷ್ಟ್ರ :- "ಹೇ ಸಂಜಯ ! ಕುರು ಕ್ಷೇತ್ರವಾದ ಧರ್ಮಕ್ಷೇತ್ರದಲ್ಲಿ ಯುದ್ಧಕ್ಕಾಗಿ ಬಂದು ಸೇರಿರುವ ನಮ್ಮವರೂ ಪಾಂಡವರೂ ಏನು ಮಾಡುತ್ತಲಿದ್ದಾರೆ ?"

ಸಂಜಯ :- "ಅಯ್ಯಾ ಧೃತರಾಷ್ಟ್ರರಾಜನೆ ! ದುರ್ಯೋಧನನು, ಪಾಂಡವರಸೈನ್ಯವು ಚಮತ್ಕಾರವಾಗಿ ಸೇರಿರುವದನ್ನು ಕಂಡು, ದ್ರೋಣಾಚಾರ್ಯರಹತ್ತಿರಕ್ಕೆಹೋಗಿ ಈ ಮುಂದೆ ಹೇಳುವ ವಾಕ್ಯವನ್ನು ಹೇಳಿದನು."

ದುರ್ಯೋಧನ :- "ಓ ಆಚಾರ್ಯರೆ ! ಈ ಪಾಂಡುಪುತ್ರರ ಮಹತ್ತಾದ ಸೈನ್ಯವು ನಿಮ್ಮ ಶಿಷ್ಯನಾಗಿಯೂ, ದೃಪದಪುತ್ರನಾಗಿಯೂ, ಬುದ್ಧಿವಂತನಾಗಿಯೂ, ಇರುವ ದೃಷ್ಟದ್ಯುಮ್ನನಿಂದಾ ಎಷ್ಟು ಚಮತ್ಕಾರವಾಗಿ ಸೇರಿಸಲ್ ಪಟ್ಟಿಧೆಯೋ ನೋಡಿ. ಇಲ್ಲಿ ಬಹುಶೂರರಾಗಿಯೂ, ಶ್ರೇಷ್ಟವಾದ ಧನುಸ್ಸುಗಳನ್ನುಳ್ಳವರಾಗಿಯೂ, ಭೀಮಸೇನು, ಅರ್ಜುನನೇನು, ಇವರಿಗೆಲ್ಲಾ ಯುದ್ಧದಲ್ಲಿ ಸಮಾನನಾದಂಥಾ ಯುಯು

ಧಾನನು, ವಿರಾಟನು, ದೃಪದನು, ದೃಷ್ಟಕೇತನು, ಚೇಕಿತಾನನು, ಕಾಶೀರಾಜರೇ ಮೊದಲಾದ, ಮಹಾರಥಗಳನ್ನುಳ್ಳಂಥಾ ಶೂರರೂ, ವೀರರೂ, ಇದ್ಧಾರೆ. ನಮ್ಮ ಸೈನ್ಯದಲ್ಲಿ ನಾಯಕರಾಗಿರುವಂಥಾವರನ್ನ ತಿಳಿಸುವೆನು, ಚಿತ್ತಕ್ಕೆತೆಗದುಕೊಳ್ಳಬೇಕು. ತಾವು, ಭೀಷ್ಮಾಚಾರ್ಯರು, ಕರ್ನನು, ಕೃಪಾಚಾರ್ಯರು, ಅಶ್ವಥ್ಥಾಮನೇ ಮೊದಲಾಗಿ ಅನೇಕ ಶೂರರು ನನಗಾಗಿ ಪ್ರಾಣವನ್ನು ಬಿಡಲು ಸಿದ್ಧವಾಗಿದ್ಧಾರೆ. ಇವರೆಲ್ಲರೂ ಶಸ್ತ್ರಪ್ರಯೋಗದಲ್ಲಿ ಸಮರ್ಥರಾಗಿಯೂ, ಯುದ್ಧದಲ್ಲಿ ಬಹಳ ಚತುರರಾಗಿಯೂ, ಇದ್ಧಾರೆ. ಆದರೆ ನಮ್ಮಗಳಲ್ಲಿ ಭೀಷ್ಮನು ಮುಖ್ಯಸ್ಥನಾಗಿಯೂ, ಅವರುಗಳಿಗೆ ಭೀಮನು ಮುಖ್ಯಸ್ಥನಾಗಿಯೂ, ಇಧ್ಧಾನೆ. ಆದುದರಿಂದ ನಮ್ಮ ಪಕ್ಕದಬಲ ಸಾಲದ್ದಾಗಿಯೂ, ಅವರಪಕ್ಕದ್ದು ಸರಿಯಾದ್ದಾಗಿಯೂ ಇಧೆ. ಅದಕ್ಕಾಗಿ ನೀವೆಲ್ಲರೂ ಬಹಳ ಎಚ್ಚರಿಕೆಯಿಂದಾ ಭೀಷ್ಮನನ್ನು ಕಾಪಾಡಿಕೊಳ್ಳಬೇಕು.”

“ಆಗ, ಆ ದುರ್ಯೋಧನನಿಗೆ ಹರುಷವನ್ನುಂಟುಮಾಡಲು, ಕುರುಶ್ರೇಷ್ಟನಾದ ಭೀಷ್ಮನು ಸಂಹ್ಮನಾದವನ್ನೂ, ಶಂಖನಾದವನ್ನೂ, ಮಾಡಿದನು. ಕೂಡಲೆ ಸೈನ್ಯವೆಲ್ಲಾ ಶಂಖನಾದವನ್ನೂ, ಭೇರೀನಾದವನ್ನೂ, ಗೋಮುಖನಾದವೇ ಮೊದಲಾದವುಗಳನ್ನೆಲ್ಲಾ ಮಾಡಿ, ಘೂಳಿಯನ್ನ ಧ್ವನಿಗಳಿಂದ ತುಂ

ಬಿದರು. ಅನಂತರ ಶ್ರೀ ಕೃಷ್ಣನೂ ಅರ್ಜುನನೂ ಬಿಳೀ ಕುದುರೆಗಳಿಂದ ಕೂಡಿದ ಉನ್ನತವಾದ ರಥ ದಲ್ಲಿ ಕುಳಿತುಕೊಂಡು ದಿವ್ಯವಾದ ಶಂಖಧ್ವನಿಯನ್ನು ಮಾಡಿದರು. ಶ್ರೀಕೃಷ್ಣನು ಪಾಂಚಜನ್ಯವನ್ನೂ, ಅರ್ಜುನನು ದೇವದತ್ತವನ್ನೂ, ಭಯಂಕರ ವ್ಯಾಪಾರ ವುಳ್ಳ ಭೀಮಸೇನನು ಪೌಂಡ್ರವನ್ನೂ, ಯುಧಿಷ್ಠಿರನು ಅನಂತ ವಿಜಯವನ್ನೂ, ಇದೇ ಮೇರೆಗೆ ಅನೇಕಬಲ ಶಾಲಿಗಳು ಅನೇಕವಿಧವಾದ ಆಯುಧಗಳಿಂದಾ ಧ್ವನಿ ಗಳನ್ನು ಮಾಡಿದರು. ಈ ಧ್ವನಿಗಳ ಘೋಷವು ಧೃತ ರಾಷ್ಟ್ರರ ಹೃದಯಗಳನ್ನು ಭೇದಿಸಿತು. ಭೂಮಿ ಯೂ ಆಕಾಶವೂ ಈ ಧ್ವನಿಗಳಿಂದ ತುಂಬಿಹೋದವು. ಈ ಸಮಯದಲ್ಲಿ ಹನುಮಧ್ವಜನಾದಂಥಾ ಅರ್ಜು ನನು, ಯುದ್ಧಾಸಕ್ತರಾದಂಥಾ ದುರ್ಯೋಧನಾದಿಗಳನ್ನು ನೋಡಿ, ಗಾಂಡೀವವನ್ನುಮೇಲಕ್ಕೆ ಎತ್ತಿಕೊಂಡು, ಆ ಸಮಯದಲ್ಲಿ ಶ್ರೀ ಕೃಷ್ಣನನ್ನುಕುರಿತು ಈಮಾತನ್ನು ಹೇಳಿದನು.”

ಅರ್ಜುನ:-ಓ ಅಚ್ಯುತನೆ! ಈ ಎರಡುಸೈನ್ಯ ಗಳ ಮಧ್ಯೆ ನನ್ನ ರಥವನ್ನು ನಿಲ್ಲಿಸು. ಯಾರುಯಾರು ಯುದ್ಧಕ್ಕಾಗಿ ಬಂದಿದ್ದಾರೆಯೋ ನೋಡೋಣ. ದು ರ್ಯೋಧನನಿಗೆ ಪ್ರೀತಿಯನ್ನುಂಟುಮಾಡಲು ಯಾರು ಬಂದಿರುವರೋ, ಯಾರಸಂಗಡ ನಾನು ಯುದ್ಧಮಾಡ ಬೇಕಾಗಿಧೆಯೋ, ಎಲ್ಲವನ್ನೂ ತಿಳಿದುಕೊಳ್ಳುವೆನು.”

"ಇದನ್ನು ಹೇಳಿದಕೂಡಲೇ ಶ್ರೀ ಕೃಷ್ಣನು ಅದೇ ಮೇರೆಗೆ ಭೀಷ್ಮದ್ರೋಣರ ಮುಂದೆ ರಥ ವನ್ನು ನಿಲ್ಲಿಸಿ, ಓ ಅರ್ಜುನನೆ! ಇಲ್ಲಿ ಸೇರಿರುವ ಕು ರುಸೈನ್ಯವನ್ನೆಲ್ಲಾ ನೋಡು ಎಂದನು. ಆಗ ಅದೇ ಮೇರೆಗೆ ಅರ್ಜುನನು ಅಲ್ಲಿ ಸೇರಿದ್ದಂಥಾ ತಂದೆಗಳ ನ್ನೂ, ತಾತಂದರುಗಳನ್ನೂ, ಆಚಾರ್ಯರುಗಳನ್ನೂ; ಮಾವಂದರುಗಳನ್ನೂ, ಅಣ್ಣಂದರುಗಳನ್ನೂ; ಪುತ್ರರ ನ್ನೂ, ಪೌತ್ರರನ್ನೂ, ಸ್ನೇಹಿತರುಗಳನ್ನೂ, ಅನೇಕ ಬಂಧು ಜನಗಳನ್ನೂ, ನೋಡಿ, ಬಹಳದಯೆಯಿಂದ ದುಃಖಿತನಾಗಿ, ಹೇಳಿದ್ದೇನಂದರೆ."

ಅರ್ಜುನ:- ಅಯ್ಯಾ ಶ್ರೀಕೃಷ್ಣನೆ! ಯುದ್ಧ ಕ್ಕಾಗಿ ಬಂದಿರುವಈನಮ್ಮ ಬಂಧುಜನಗಳನ್ನು ಕಂ ಡು ನನ್ನ ಅವಯುವಗಳೆಲ್ಲಾ ಕೃಶವಾಗುತ್ತವೆ, ಮು ಖವು ಬಾಡಿ ಹೋಗುತ್ತದೆ, ಶರೀರವೆಲ್ಲಾ ನಡಗುತ್ತ ಲಿಥೆ, ರೋಮಾಂಚವುಂಟಾಗುತ್ತದೆ, ಗಾಂಢೀವವು ಕೈಯಿಂದಾ ಬಿದ್ದುಬಿಡುತ್ತದೆ, ಮೈಯಲ್ಲಾ ಬೆಂಕಿ ಬೆಂಕಿಯಾಗಿ ಸುಡುತ್ತಲಿಥೆ, ಸುಮ್ಮನೆ ನಿಲ್ಲಲೂಕೂಡ ಶಕ್ತಿಯಿಲ್ಲದವನಾಗಿದ್ಧೇನೆ, ಮನಸ್ಸು ಭ್ರಮೆಗೊಂಡು ಹೋಗುತ್ತದೆ, ಅಪಶಕುನಗಳು ಅನೇಕವಾಗಿ ಆಗು ತ್ತಲಿವೆ, ಯುದ್ಧದಲ್ಲಿ ಬಂಧುಜನವನ್ನು ಕೊಂದು ಯಾ ವ ಶ್ರೇಯಸ್ಸೂ ಉಂಟಾಗುವಂತೆ ಕಾಣಿಸುವುದಿಲ್ಲಾ. ಅಯ್ಯೊ ಕೃಷ್ಣನೆ! ನಾನು ಜಯುವನ್ನೇ ಆಗಲಿ, ರಾಜ್ಯ

ವನ್ನೇ ಆಗಲಿ, ಸುಖವನ್ನೇ ಆಗಲಿ, ಯಾವದನ್ನೂ ಅಪೇಕ್ಷಿಸುವುದಿಲ್ಲಾ. ಓ ಗೋವಿಂದ ! ರಾಜ್ಯದಿಂದಲೇ ಆಗಲಿ, ಭೋಗದಿಂದಲೇ ಆಗಲಿ, ಜೀವಿಸುವುದರಿಂದಲೇ ಆಗಲಿ, ನಮಗೆ ಆಗತಕ್ಕದ್ದೇನು ? ಯಾರಿಗಾಗಿ ರಾಜ್ಯವನ್ನೂ, ಭೋಗವನ್ನೂ, ಸುಖವನ್ನೂ, ಅಪೇಕ್ಷಿಸುವೆವೋ ಅವರೆಲ್ಲರೂ ಪ್ರಾಣವನ್ನೂ, ಧನವನ್ನೂ, ಭೂಷದನ್ನೂ, ಲಕ್ಷ್ಯಮಾಡದೆ ಈ ಯುದ್ಧಕ್ಕೆಬಂದು ನಿಂತಿರುವರು. ಪಿತೃಗಳು, ಪುತ್ರರು, ಆಚಾರ್ಯರು, ಅನೇಕ ವಿಧವಾದ ಬಂಧುಗಳು, ಎಲ್ಲರೂ ಬಂದು ನಿಂತಿಧಾರೆ. ಅವರುಗಳಿಂದಾ ನಾನು ಹತವಾದರೂ ಚಿಂತೆಇಲ್ಲಾ. ನಾನು ಅವರುಗಳನ್ನು ಕೊಲ್ಲಲು ಯಿಚ್ಛಿಸಲಾರೆನು. ತ್ರಿಲೋಕಾಧಿಪತ್ಯವು ಬರುವುದಾಗಿದ್ದರೂ ನಾನು ಈ ಕೆಲಸವನ್ನು ಮಾಡಲು ಅಪೇಕ್ಷಿಸುವುದಿಲ್ಲಾ. ಇಂಥಾದ್ದರಲ್ಲಿ ಕೇವಲ ಈ ರಾಜ್ಯಾಧಿಪತ್ಯಕ್ಕಾಗಿ ನಾನು ಇಚ್ಛಿಸಲಾರೆನು. ದುರ್ಯೋಧನಾದಿಗಳನ್ನು ಕೊಂದದ್ದರಿಂದ ನನಗೇನು ಸಂತೋಷ ಉಂಟಾದೀತು. ಅವರು ಎಂಥಾ ಶತ್ರುಗಳಾಗಿ ಇದ್ದಾಗ್ಯೂ ಅವರನ್ನು ಕೊಂದರೆ ನಮಗೆ ಪಾಪ ಸುತ್ತಿಕೊಳ್ಳುವುದೇ ಹೊರತು ಮತ್ತು ಬೇರೆ ಇಲ್ಲಾ. ಆದುದರಿಂದ ನಾವು ನಮ್ಮ ಸ್ವಂತ ಬಂಧುಗಳನ್ನು ಕೊಲ್ಲುವುದು ನಮಗೆ ಧರ್ಮವಲ್ಲಾ. ಬಂಧುಗಳನ್ನು ಕೊಂದು ಹ್ಯಾಗೆ ಸುಖವಾಗಿರಬಹುದು ?

ಅವರಿಗೆ ರಾಜ್ಯಸಂಪಾದಿಸುವ ಆಶೆಯಿಂದಾ ಇಷ್ಟು
ತೋರದಿದ್ದರೂ ಕೂಡ, ವಂಶನಾಶ ಮಾಡುವದೂ,
ಮಿತ್ರರಿಗೆ ದ್ರೋಹಮಾಡುವುದೂ,ತಪ್ಪೆಂದು ನಮಿಗೂ
ತೋರದಹಾಗೆ ನಾವು ಆ ಪಾಪವನ್ನು ಮಾಡಬಹುದೆ?
ವಂಶವು ನಾಶವಾದರೆ ಆ ವಂಶದ ಕುಲಧರ್ಮವೆಲ್ಲಾ
ನಾಶವಾಗಿ ಹೋಗುವುದು. ಧರ್ಮವು ನಾಶವಾದಲ್ಲಿ
ಅಧರ್ಮವು ಬಂದು ಸೇರುವದು. ಅಧರ್ಮ ಪ್ರವೇಶ
ದಿಂದ ಕುಲಾಂಗನೆಗಳೆಲ್ಲಾ ದೂಷಿಸಲ್ಪಡುವರು.
ಸ್ತ್ರೀಯರುದೋಷಕ್ಕೆ ಆಸ್ಪದರಾದಾಗ ಜಾತಿಸಂಕ
ರವುಂಟಾಗುವದು. ಈ ವರ್ಣಸಂಕರದಿಂದ ಆ ವಂಶ
ವು ನರಕಕ್ಕೆ ಗುರಿಯಾಗುವುದಲ್ಲದೆ ಆ ವಂಶವನ್ನು ನಾ
ಶಮಾಡಿದವರ ಕುಲವೂ ಕೂಡಾ ನರಕಕ್ಕೆ ಗುರಿಯಾ
ಗುವುದು. ಇವರ ಪಿತೃಗಳು ಶ್ರಾದ್ಧಾದಿಗಳನ್ನು ಮಾ
ಡಲು ಅರ್ಹತೆ ಯಿಲ್ಲದ ಸಂತತಿಗಳಿಂದಾ ಕೂಡಿದವ
ರಾಗಿ, ಸ್ವರ್ಗಾದಿ ಲೋಕಗಳಿಂದಾ ಕೆಳಗೆ ಬೀಳು
ವರು. ಇಂಥಾ ಬೆರಿಕೇ ಜಾತಿಯನ್ನು ಉಂಟುಮಾಡು
ವಂಥಾ ವಂಶನಾಶದಿಂದ ಜಾತಿ ಕ್ರಮಗಳೂ, ಕುಲ
ಕ್ರಮಗಳೂ, ಎಲ್ಲವೂ ಹಾಳಾಗುವವು. ಹೀಗೆ ಕುಲ
ಧರ್ಮವನ್ನೆಲ್ಲಾ ಹಾಳುಮಾಡಿಕ್ಕೊಂಡ ಜನಗಳಿಗೆ ವಾ
ಸಸ್ಥಾನವು ಯಾವಾಗ್ಯೂ ನರಕವಾಗಿಯೇ ಇರುವ
ದಾಗಿ ನಾವು ಕೇಳಿಬಲ್ಲೆವಷ್ಟೆ. ಆದುದರಿಂದಾ ಹಾ !
ಹಾ ! ಏನು ಅನ್ಯಾಯಕಾರ್ಯವನ್ನು ಯತ್ನಿಸಿದೆವು ?

ಕೇವಲ ರಾಜ್ಯ ಸಂಪಾದನೆಗಾಗಿ ಬಂಧು ಜನಗಳನ್ನ ನಾಶವಮಾಡಲು ಉದ್ಯುಕ್ತರಾದೆವಲ್ಲಾ. ದುರ್ಯೋಧನಾದಿಗಳು ಆಯುಧ ರಹಿತನಾಗಿಯೂ ಪ್ರತಿಕ್ರಿಯೆಯಿಲ್ಲದವನಾಗಿಯು ಇರುವಂಥಾ ನನ್ನನ್ನು, ಆಯುಧಪಾಣಿಗಳಾಗಿ ಯುದ್ಧದಲ್ಲಿ ಕೊಂದರೂಕೂಡಾ ಅದೇನನಿಗೆ ಅತ್ಯಂತ ಹಿತಕರವಾಗಿ ಇರುವದು."

ಸಂಜಯ:- "ಅರ್ಜುನನು ಈ ಪ್ರಕಾರ ಯುದ್ಧರಂಗದಲ್ಲಿ ಹೇಳಿ, ಬಹಳ ದುಃಖಾ ಕ್ರಾಂತನಾಗಿ, ಆಯುಧಗಳನ್ನೆಲ್ಲಾ ಬಿಸಾಟು, ರಥದ ಕೆಳಭಾಗದಲ್ಲಿ ಕೂತನು."

ಈಪ್ರಕಾರ ಅರ್ಜುನವಿಷಾಧಯೋಗವೆಂಬ
ಪ್ರಥಮಅಧ್ಯಾಯವುಸಮಾಪ್ತ ಮಾದುದು.

ಸಾಂಖ್ಯ ಯೋಗವೆಂಬ ಎರಡನೆಯ
ಅಧ್ಯಾಯ ಪ್ರಾರಂಭ.

ಸಂಜಯ:- "ಕಣ್ಣುಗಳಲ್ಲಿ ನೀರು ತುಂಬಿಕ್ಕೊಂಡು, ಬಹಳ ದುಃಖಿತನಾದಂಥಾ, ದಯಾಪೂರಿತನಾದ ಅರ್ಜುನನನ್ನು ಕುರಿತು,ಮಧುಸೂಧನನು ಹೇಳಿದ್ದೇನಂದರೆ."

ಶ್ರೀ ಭಗವಾನ್ :-" ಓ ಅರ್ಜುನನೇ ! ಮೂ ಢರಿಗೇನೆತರವಾಗಿಯೂ, ಪರಲೋಕಕ್ಕೆ ವಿರೋಧ ವಾಗಿಯೂ, ಅಯಶಸ್ಕರವಾಗಿಯೂ, ಇರುವ ಈ ಕ ಶ್ಮಲವಾದಂಥಾ ದುಃಖವು ನಿನಿಗೆ ಇಂಥಾ ಸಂಕಟ ಪ್ರಾಪ್ತವಾಗಿರುವ ಸಮಯದಲ್ಲಿ ಯಾಕೆ ಉಂಟಾ ಯಿತು ? ಓ ಪಾರ್ಥನೇ ! ದೈನ್ಯವನ್ನು ಹೊಂದಬೇಡ.' ಶತ್ರು ಸಂತಾಪಿಯಾದಂಥಾ ನಿನಗೆ ಇದು ತರವ ಲ್ಲಾ. ಆದ್ದರಿಂದ ಈ ತುಚ್ಛವಾದಂಥಾ ಮನೋ ದೈನ್ಯವನ್ನು ಬಿಟ್ಟು ಏಳು."

ಅರ್ಜುನ :-" ಓ ಮಧುಸೂದನನೇ ! ನಾನು ಯುದ್ಧದಲ್ಲಿ ಪೂಜಾರ್ಹರಾದಂಥಾ ಭೀಷ್ಮಾಚಾರ್ಯರ ನ್ನೂ, ದ್ರೋಣಾಚಾರ್ಯರನ್ನೂ,ಬಾಣಗಳಿಂದ ಹ್ಯಾಗೆ ಹೋಡೆಯಲಿ ? ಮಹಾನುಭಾವರಾದಂಥಾ ಗುರುಗ ಳನ್ನು ಕೊಲ್ಲುವುದಕ್ಕಿಂತಲೂ ಈ ಭೂಮಿಯಲ್ಲಿ ಬಿಕ್ಷ ವನ್ನಾದರೂ ಎತ್ತಿಕ್ಕೊಂಡು ತಿನ್ನುವುದು ಮೇಲು. ಹಾಗಿಲ್ಲದೆ,ಹಣದಆಸೆಯುಳ್ಳ ಅವರುಗಳನ್ನು ಕೊಂದ ದ್ದೇ ಆದರೆ ಅವರರಕ್ತದಲ್ಲಿ ನೆನಸಲ್ಪಟ್ಟ ಭೋಗಗಳ ನ್ನು ಅನುಭವಿಸಬೇಕಾಗಿರುವದಷ್ಟೆ. ಅವರು ನಮ್ಮ ನ್ನು ಜಯಿಸುವರೋ, ನಾವು ಅವರನ್ನು ಜಯಿಸುವೆ ವೋ, ಇದು ತಿಳದದ್ದಲ್ಲ. ಅದೂ ಅಲ್ಲದೆ ಯಾರು ಯಾರನ್ನು ಜಯಿಸುವದು ವಳ್ಳೆಯದಾಗಿರುವುದು, ಎಂಬುವುದೂಕೂಡ ತಿಳಿದದ್ದಲ್ಲಾ. ಆದರೆ ಯಾರನ್ನು

ಕೊಂದು ನಾವು ಜೀವಿಸಲಾರೆವೋ ಅಂಥಾವರೆಲ್ಲರೂ ಯುದ್ಧಸನ್ನದ್ಧರಾಗಿ ಎದುರಿಗೆ ನಿಂತಿದ್ದಾರೆ. ಬಂಧುಗಳನ್ನು ಹ್ಯಾಗೆ ಕೊಲ್ಲುವುದು ಎಂಬುವದೈನ್ಯ ಸ್ವಭಾವದಿಂದ ಧೈರ್ಯಕೆಟ್ಟವನಾಗಿ, ಹ್ಯಾಗೆನಡೆದುಕೊಳ್ಳುವುದು ಧರ್ಮವೆಂಬುವ ಸಂದೇಹದಿಂದ ಕೂಡಿದವನಾಗಿ, ನಿನ್ನನ್ನು ಆಚಾರ್ಯನನ್ನಾಗಿಭಾವಿಸಿ ಕೇಳಿಕೊಳ್ಳುವೆನು. ಆದುದರಿಂದ ನೀನು ನನಗೆ, ಹ್ಯಾಗೆ ನಡೆದುಕೊಳ್ಳುವುದು ಶ್ರೇಯಸ್ಕರವಾಗಿರುವುದೋ, ಅದನ್ನು ನಿಶ್ಚೈಸಿ ಹೇಳಬೇಕು. ನಿನ್ನನ್ನು ಶರಣಾಗತನಾಗಿ ಹೊಂದಿದ್ದೇನೆ. ನೀನು ನನ್ನನ್ನು ಶಿಕ್ಷಿಸಬೇಕು. ರಾಜ್ಯವನ್ನು ಹೊಂದಿಯೇ ಆಗಲಿ, ಇಂದ್ರಾಧಿಪತ್ಯವನ್ನು ಹೊಂದಿಯೇ ಆಗಲಿ, ನನ್ನ ಈ ದುಃಖವು ಶಮನ ಹೊಂದುವುದೆಂದು ನಾನು ಅರಿಯಲಾರೆನು"

ಸಂಜಯ :- " ಈ ಪ್ರಕಾರ ಅರ್ಜುನನು ಶ್ರೀಕೃಷ್ಣನಿಗೆಹೇಳಿ, ತಾನು ಯುದ್ಧಮಾಡುವದಿಲ್ಲವೆಂದು ತಿಳಿಸಿ, ತಟಸ್ಥನಾಗಿ ನಿಂತನು. ಆಗ ಆ ಶ್ರೀಕೃಷ್ಣನು ಯುದ್ಧರಂಗದಲ್ಲಿ ದುಃಖಿಸಿಕೊಂಡುನಿಂತಂಥಾ ಆ ಅರ್ಜುನನನ್ನು ಪರಿಹಾಸ್ಯ ಮಾಡಿದವನಂತೆ ನಕ್ಕೊಂಡು ಹೇಳಿದ್ದೇನಂದರೆ."

ಶ್ರೀ ಭಗವಾನ್ :- " ಓ ಅರ್ಜುನನೇ ! ನೀನು

ದುಃಖಿಸತಕ್ಕ ವಿಷಯವಲ್ಲದ ಬಂಧುಗಳ ವಿಷಯ
ದಲ್ಲಿ ವ್ಯಥೆಪಡುತ್ತೀಯೆ. ಬಹಳ ತಿಳಿದವನಂತೆ
ಯೂ ಮಾತನಾಡುತ್ತಿ. ಆದರೆ ಪಂಡಿತರಾದಂಥಾ
ಆತ್ಮಜ್ಞಾನಿಗಳು ನಶ್ವರವಾದಂಥಾ ದೇಹ ವನ್ನು ಕು
ರಿತೇ, ಆಗಲಿ, ನಿತ್ಯವಾದಂಥಾ ಆತ್ಮನನ್ನು ಕುರಿತೇ
ಆಗಲಿ, ಎಂದಿಗೂ ದುಃಖಿಸುವುದಿಲ್ಲ. ನಾನು ಇ
ದಕ್ಕೆ ಪೂರ್ವದಲ್ಲಿ ಇಲ್ಲದೇ ಇರಲಿಲ್ಲ. ನೀನೂ
ಹಾಗೆಯೇ ಇದ್ದುಕೊಂಡೇಇದ್ದಿ. ಈ ರಾಜರೂ
ಕೂಡ ಹಾಗೆಯೇ ಇದ್ದುಕೊಂಡೇಇದ್ದರು. ಇದೇ
ಪ್ರಕಾರ ಮುಂದೆಯೂ ನಾವೆಲ್ಲರೂ ಇದ್ದುಕೊಂಡೇ
ಇರುವೆವು; ಶರೀರವುಳ್ಳಂಥ ಆತ್ಮನಿಗೆ ಹ್ಯಾಗೆ ಬಾಲ್ಯ,
ಯವ್ವನ, ವಾರ್ಧಿಕ್ಯವೆಂಬ ಅವಸ್ಥೆಗಳು ಉಂಟಾಗು
ತ್ತವೆಯೋ ಹಾಗೆಯೇ ಈದೇಹವು ಹೋಗಿ ಬೇರೆ
ದೇಹವು ಬರುತ್ತದಷ್ಟೆ. ಆದ್ದರಿಂದ ಜ್ಞಾನಿಯು ಈ
ವಿಷಯದಲ್ಲಿ ವಿಚಾರಪಡುವದಿಲ್ಲ. ಓ ಅರ್ಜುನನೇ !
ವಿಷಯಗಳ ಅನುಭವವು ಶೀತ, ಉಷ್ಣ, ಸುಖ,
ದುಃಖ,ಎಂಬ ಅವಸ್ಥೆಗಳನ್ನು ಕೊಡತಕ್ಕಂಥಾವುಗಳು.
ಈ ಅವಸ್ಥೆಗಳೂಕೂಡ ಬಂದು ಹೋಗತಕ್ಕವೇಹೊ
ರತು ಯಾವದೂ ನೆಲೆಯಾಗಿರತಕ್ಕದ್ದಲ್ಲವಾದ್ದರಿಂದ
ಅವುಗಳನ್ನು ಆಯಾಯಸಮಯಗಳಲ್ಲಿ ಸಹಿಸಿಕೊಂ
ಡುಇರಬೇಕು. ಯಾವ ಮಹಾ ಪುರುಷನನ್ನು ಈ
ಅವಸ್ಥೆಗಳು ದುಃಖಪಡಿಸುವುದಿಲ್ಲವೋ, ಯಾರಿಗೆ

ಸುಖವೂ, ದುಃಖವೂ, ಒಂದೇಸಮವಾಗಿ ಕಾಣುವುದೊ, ಅಂಥಾ ಮಹಾನುಭಾವನು ಮೋಕ್ಷಕ್ಕೆ ಅರ್ಹನಾಗುವನು. ನಶ್ವರವಾದ ದೇಹವು ಎಂದಿಗೂ ನಿತ್ಯವಲ್ಲಾ. ನಿತ್ಯವಾದ ಆತ್ಮನು ಎಂದಿಗೂ ನಾಶ ಹೊಂದತಕ್ಕದ್ದಲ್ಲಾ. ನಿಜಸ್ಥಿತಿಯನ್ನು ತಿಳಿದವರಿಗೆಲ್ಲಾ ಇವೆರೆಡು ವಿಷಯಗಳೂ ಇಂಥಾದ್ದೆಂದು ಚನ್ನಾಗಿ ಗೊತ್ತಾಗಿಧೆಯಷ್ಟೆ. ಈ ಅಚೇತನವಾದ ಶರೀರಗಳೆಲ್ಲಾ ಯಾವ ಆತ್ಮಾವಿನಿಂದಾ ತುಂಬಿರುವದೊ, ಆ ಆತ್ಮವಾದದ್ದು ಎಂದಿಗೂ ನಾಶಹೊಂದ ತಕ್ಕದಲ್ಲವೆಂದು ತಿಳಿ. ಆದ್ದರಿಂದ ನಾಶವಿಲ್ಲದಂಥಾ ಈ ಆತ್ಮಾವನ್ನ ಯಾರೂ ನಾಶಮಾಡಲಾರರು. ಉತ್ಪತ್ತಿಯೂ ನಾಶವೂ ಇಲ್ಲದಂಥಾ ಈ ಆತ್ಮನು ಹೊಕ್ಕಿರುವ ಶರೀರಗಳು ಎಂದಿಗಾದರೂ ನಾಶ ಹೊಂದತಕ್ಕವುಗಳೇ ಹೊರತು, ಆತ್ಮಾವಿನಂತೆ ನಿತ್ಯವಿಲ್ಲವೆಂದು ತಿಳಿದು ಯುದ್ಧಸನ್ನದ್ಧನಾಗು. ಯಾವ ಮನುಷ್ಯನು ಈ ಆತ್ಮಾವನ್ನ ಕೊಂದು ಹಾಕುವನೆಂದು ತಿಳಿಯುತ್ತಾನೆಯೊ, ಯಾವನು ಈ ಆತ್ಮ ನಾಶಹೊಂದುತ್ತೆಂತಲೂ ಎಣಿಸುತ್ತಾನೆಯೊ, ಅಂಥವನು ನಿಜಸ್ಥಿತಿಯನ್ನು ತಿಳಿದವನಲ್ಲಾ. ಯಾಕಂದರೆ, ಅವನು ಈ ಆತ್ಮಾವನ್ನ ಕೊಲ್ಲುವುದೂ ಇಲ್ಲ, ಈ ಆತ್ಮಾವು ಅವನಿಂದ ಕೊಲ್ಲಲ್ಪಡುವುದೂ ಇಲ್ಲ. ಈ ಆತ್ಮಾವು ಎಂದಿಗೂ ಉಂಟಾಗುವುದೂ ಇಲ್ಲ, ಸಾಯುವುದೂಇಲ್ಲ, ಇದು ವುಂಟಾಗಿ ಇಲ್ಲದೆ ಇರು

ವುದೂ ಇಲ್ಲ. ಈ ಆತ್ಮಾವು ಜನ್ಮರಹಿತವಾದದ್ದು, ನಾಶರಹಿತವಾದದ್ದು, ಸ್ಥಿರವಾದದ್ದು, ವಿಕಾರಭಾವವಿಲ್ಲದ್ದು, ಶರೀರನಾಶ ಹೊಂದಿದಾಗ್ಯೂ ಇದು ಎಂದಿಗೂ ನಾಶಹೊಂದುವುದಿಲ್ಲಾ. ಯಾರು ಈ ಆತ್ಮಾವನ್ನ ನಾಶವಿಲ್ಲದಂಥಾದ್ದೆಂತಲೂ, ನಿತ್ಯವಾದದ್ದೆಂತಲೂ, ಜನ್ಮರಹಿತವಾದದ್ದೆಂತಲೂ, ನಾಶರಹಿತ ವಾದದ್ದೆಂತಲೂ, ತಿಳಿಯುತ್ತಾರೆಯೊ, ಅವರು ಈ ಅತ್ಮಾವನ್ನು ಹ್ಯಾಗೆ ಇತರರಿಂದಾ ಕೊಲ್ಲಿಸುವರು, ಅವರೇತಾನೆ ಹ್ಯಾಗೆ ಕೊಲ್ಲಬಲ್ಲರು ? ಮನುಷ್ಯರು ಹ್ಯಾಗೆ ಹಳೇ ಬಟ್ಟೆಗಳನ್ನ ಬಿಸಾಟು, ಹೊಸವಸ್ತ್ರಗಳನ್ನ ಧರಿಸಿಕೊಳ್ಳುವರೋ, ಹಾಗೆಯೆ ಈ ದೇಹದಲ್ಲಿ ಸೇರಿಕೊಂಡಿರುವ ಅತ್ಮವೂಕೂಡ ಹಳೇಶರೀರ ಗಳನ್ನವಗದು ಬಿಟ್ಟು, ಹೊಸದಾದ ಬೇರೆಬೇರೆ ಶರೀರಗಳನ್ನ ಸುಲಭವಾಗಿಯೆ ತೆಗೆದುಕೊಳ್ಳುವುದು. ಈ ಆತ್ಮಾವನ್ನ ಖಡ್ಗಗಳು ಕಡಿಯಲಾರವು, ಬೆಂಕಿಯು ದಹಿಸಲಾರದು, ನೀರು ನೆನಿಸಲಾರದು, ಘಾಳಿಯು ವಣಗಿಸಲಾರದು; ಆದುದರಿಂದಾ ಈ ಆತ್ಮಾವು ಕಡಿದುಹಾಕತಕ್ಕದ್ದೂ ಅಲ್ಲ, ಸುಟ್ಟುಹಾಕತಕ್ಕದ್ದೂ ಅಲ್ಲ, ನೆನಿಸಿಹಾಕತಕ್ಕದ್ದೂ ಅಲ್ಲ, ವಣಗಿಸಿಬಿಡತಕ್ಕದ್ದೂ ಅಲ್ಲ; ಇದೂ ಅಲ್ಲದೆ ಈ ಆತ್ಮಾವು ನಿತ್ಯವಾದದ್ದು, ಸ್ಥಿರಸ್ವಭಾವವುಳ್ಳದ್ದು, ಕದಲಿಸಕೂಡದ್ದು, ಬಹುಪುರಾತನವಾದದ್ದು. ಮತ್ತೇನಂದರೆ ಇದು ಕಣ್ಣಿಗೆ ಗೋಚರ

ವಾಗದ್ದು, ಚಿಂತಿಸಲೂ ಕೂಡ ಅಸಾಧ್ಯವಾದದ್ದು, ವಿಕಾರವಮಾಡಲಾಗದ್ದು, ಎಂದು ಈ ಆತ್ಮಾವನ್ನ ಶಾಸ್ತ್ರಗಾರರು ಹೇಳಿದ್ದಾರೆ. ಆದ್ದರಿಂದಾ ಇದರ ಸ್ವರೂಪವು ಈ ಪ್ರಕಾರವಾದುದೆಂದು ತಿಳಿದು, ನೀನು ದುಃಖಿಸಲಾಗದು. ಒಂದುವೇಳೆ ಈ ಆತ್ಮವನ್ನ ಇಂಥಾದ್ದೆಂದು ತಿಳಿಯದೆ, ನೀನು ಅದನ್ನ ನಿತ್ಯವೂ ಹುಟ್ಟತಕ್ಕದ್ದು, ಹಾಗೆಯೇ ನಿತ್ಯವೂ ಹೋಗತಕ್ಕದ್ದು, ಎಂದು ಎಣಿಸುವ ಪಕ್ಷದಲ್ಲೂ ಕೂಡ, ನೀನು ಅಂಥಾದ್ದಕ್ಕಾಗಿ ಚಿಂತಿಸತಕ್ಕದಲ್ಲವಷ್ಟೆ. ಯಾಕಂದರೆ, ಹುಟ್ಟಿದಂಥಾ ಪಧಾರ್ಥಗಳಿಗೆಲ್ಲಾ ಸಾವುಸಿದ್ಧವಲ್ಲವೆ ? ಅವುಗಳಿಗೆಲ್ಲಾ ಪುನರ್ಜನ್ಮವೂ ನಿಶ್ಚಯವಲ್ಲವೆ ? ಹೀಗಿರುವಲ್ಲಿ, ನೀನು ಪರಿಹರಿಸಕೂಡದಂಥಾ ಈ ವಿಷಯುವನ್ನು ಕುರಿತು ನೀನು ಚಿಂತಿಸುವುದು ವ್ಯರ್ಥ. ಈ ಆತ್ಮಾವಿನಪೂರ್ವಾಪರ ಸಂದರ್ಭಗಳು ನಮುಗೇನೂ ತಿಳಿದಿಲ್ಲ. ಈ ಮಧ್ಯಾವಸ್ಥೆಯನ್ನುಮಾತ್ರ ನೋಡುವ ನಮುಗೆ ಇದರ ವಿಷಯದಲ್ಲಿ ಚಿಂತೆಯಾತಕ್ಕೆ? ಯಾರೋಒಬ್ಬ ಸುಕೃತಶಾಲಿಯು ಈ ಅತ್ಯದ್ಭುತವಾಗಿಯೂ, ಅತಿವಿಲಕ್ಷಣವಾಗಿಯೂ, ಇರುವ ಈ ಆತ್ಮವನ್ನು ಕಾಣುವನು, ಮತ್ತೊಬ್ಬನು ಈ ಆತ್ಮಾವಾದದ್ದು ಇಂಥಾದ್ದೆಂದು ಹೇಳುವನು, ಬೇರೊಬ್ಬನು ಈ ಆತ್ಮಾ ಇಂಥಾವಿಲಕ್ಷಣವಾದ್ದೆಂದು ಕೇಳುವನು. ಹೀಗೆಕೇಳಿಯೂ ಕೂಡ ಅದು ಇಂಥಾದ್ದೆಂದ ಅವ

ನು ಅರಿಯಲಾರನು. ಈ ದೇಹಕ್ಕೆ ಯಜಮಾನನಾದ ಈ ಆತ್ಮಾವು ನಿತ್ಯವಾದದ್ದಾಗಿ ಕೊಲ್ಲಲ್ಪಡತಕ್ಕದಲ್ಲವಾದ್ದರಿಂದ, ಓ ಅರ್ಜುನನೇ ! ನೀನು ಯಾವಪ್ರಾಣಿಯನ್ನು ಕುರಿತೂ ಕೂಡ ದುಃಖಿಸತಕ್ಕದಲ್ಲವಷ್ಟೆ. ಇದೂ ಅಲ್ಲದೆ, ಈ ನಿನ್ನಕ್ಷತ್ರಿಯ ಧರ್ಮವನ್ನುಬಿಟ್ಟು ಚಲಿಸುವದು ನಿನಗೆ ದರ್ಮವಲ್ಲ. ಕ್ಷತ್ರಿಯನಿಗೆ ಧರ್ಮಯುದ್ಧಕ್ಕಿಂತಲೂ ಹೆಚ್ಚಾಗಿ ಶ್ರೇಯಸ್ಕರವಾದದ್ದು ಮತ್ತ್ಯಾವದೂ ಇಲ್ಲ. ಇದೂಅಲ್ಲದೆ ಈ ಯುದ್ಧವು ನಿನಿಗೆ ತಾನಾಗಿಯೆ ಪ್ರಾಪ್ತವಾಗಿಧೆ. ಅಲ್ಲದೆ, ಹೀಗೆ ಸ್ವರ್ಗದಬಾಗಲನ್ನ ತೆರೆದು ಹಾಕಿರುವಂತೆ ಇರುವ ಇಂಥಾ ಯುದ್ಧವು ಭಾಗ್ಯವಂತರಾದ ಕ್ಷತ್ರಿಯರಿಗೆ ಲಭಿಸುವುದೇಹೊರತು ಮತ್ತ್ಯಾರಿಗೂ ಲಭಿಸಲಾರದು. ಈ ನ್ಯಾಯವಾದಯುದ್ಧವನ್ನ ನೀನು ಮಾಡುವದಿಲ್ಲವೆಂಬುವುದಾದರೆ ನಿನ್ನ ಕ್ಷತ್ರಿಯ ಧರ್ಮವನ್ನೂ, ಕೀರ್ತಿಯನ್ನೂ,ಕಳೆದುಕ್ಕೊಂಡು ಪಾಪವನ್ನು ಹೊಂದುವಿ. ಎಲ್ಲಾಪ್ರಾಣಿಗಳೂ, ಎಲ್ಲಾದೇಶಗಳಲ್ಲಿಯೂ, ಯಾವಾಗಲೂ, ನಿನ್ನ ಅಪಯಶಸ್ಸನ್ನು ಹೇಳಿಕ್ಕೊಂಡು ಇರುವರು. ಪರಾಕ್ರಮ ಶಾಲಿಯಾದ ನಿನ್ನಂಥಾಸಂಭಾವಿತನಿಗೆ ಇಂಥಾ ಅಪಕೀರ್ತಿಯು ಮರಣಕ್ಕಿಂತಲೂ ಅಧಿಕವಾದದ್ದಲ್ಲವೆ ? ಭಯದಿಂದಾ ನೀನು ಯುದ್ಧದಿಂದಾ ಹಿಂತೆಗೆದೆ ಎಂದು ಮಹಾರಥಿಗಳುನೆಸಿಸುವರು. ಈ ಕರ್ನಾದಿಗಳಿಗೆ ನೀನು ಎಷ್ಟೋ

ಗೌರವವಾಗಿದ್ದು, ಈಗ ಅಷ್ಟಕ್ಕೂ ಅಷ್ಟುಲಘುತ್ವ
ವನ್ನು ಹೊಂದುವಿಯಲ್ಲವೆ? ಇದೂ ಅಲ್ಲದೆ ನಿನಿಗೆ
ದ್ವೇಷಿಗಳಾದವರು ಇದೇ ಸಮಯವೆಂದುಕೊಂ
ಡು ಹೇಳಲಾಗದ್ದನ್ನೆಲ್ಲಾ ಹೇಳುವರು. ನಿನ್ನ ಸಾಮ
ರ್ಥ್ಯವನ್ನು ದೂಷಿಸುವರು. ಇದಕ್ಕಿಂತಲೂ ಹೆಚ್ಚಾ
ದ ದುಃಖವಿಷಯವು ಯಾವದುನೋಡು. ಒಂದು
ವೇಳೆ ನೀನು ಈ ಯುದ್ಧದಲ್ಲಿ ಕೊಲ್ಲಲ್ಪಟ್ಟರೆ ಸ್ವ
ರ್ಗವನ್ನು ಹೊಂದುವಿ; ಹಾಗಿಲ್ಲದೆ ಜಯಿಸಿದರೆ ರಾ
ಜ್ಯವನ್ನು ಅನುಭವಿಸುವಿ; ಆದುದರಿಂದಾ ನೀನು
ಯುದ್ಧಸನ್ನದ್ಧನಾಗಿ ಯೇಳು. ಸುಖವನ್ನೂ, ದುಃಖ
ವನ್ನೂ, ಲಾಭವನ್ನೂ, ನಷ್ಟವನ್ನೂ, ಜಯವನ್ನೂ,
ಅಪಜಯವನ್ನೂ, ಸಮನಾಗಿ ಭಾವಿಸಿ, ಯುದ್ಧ
ಕ್ಕೆ ಆರಂಭಿಸು. ಆಗನಿನಿಗೆ ಯಾವಕಷ್ಟವೂ ಉಂಟಾ
ಗುವುದಿಲ್ಲಾ, ಎಂದು ಆತ್ಮಜ್ಞಾನವಿಷಯದಲ್ಲಿ ಹೇಳ
ಲ್ಪಟ್ಟಥೆ. ಕರ್ಮಯೋಗದಲ್ಲಿ ಹೇಳಿರುವ ನೀತಿಯ
ನ್ನು ಹೇಳುವೆನು ಕೇಳು. ಆ ಪ್ರಕಾರ ನೀನು ಬು
ದ್ಧಿಯುಳ್ಳವನಾಗಿ, ನೀನು ಯಾವಕೆಲಸಮಾಡಿದರೂ
ಕೂಡ, ತತ್ಪ್ರಯುಕ್ತವಾದ ಸಂಸಾರ ಸಂಬಂಧವು
ನಿನ್ನನ್ನು ಭಾಧಿಸಲಾರದು. ಈ ಕರ್ಮಯೋಗದಲ್ಲಿ
ಕೇವಲ ಆರಂಭಮಾತ್ರಕ್ಕೂ ಕೂಡ ಫಲವುಂಟು. ಕ
ರ್ಮವನ್ನು ಮುಗಿಸಲು ಆಗದೇ ಹೋದರೂ, ಅದರಿಂ
ದಾ ಏನೂ ಬಾಧಕವುಂಟಾಗುವುದಿಲ್ಲಾ. ಈ ಕರ್ಮದ

ಕೆಲವು ಭಾಗವೂ ಕೂಡ ಮನುಷ್ಯನನ್ನು ಅನೇಕ ವಿಪತ್ತುಗಳಿಂದಾ ರಕ್ಷಿಸುವದು. ಓ ಅರ್ಜುನನೆ ! ಈ ಕರ್ಮಯೋಗದಲ್ಲಿಯೂ ಆತ್ಮಸ್ವರೂಪವು ಇಂಥಾದ್ದೆಂದು ತಿಳಿದುಕೊಳ್ಳುವ ಮೋಕ್ಷಸಾಧನವಾದಂಥಾ ಮಾರ್ಗವು, ವಂದೇ ಆಗಿಧೆ. ಈ ಜ್ಞಾನವಿಲ್ಲದಂಥಾವರಿಗೆ ಫಲಗಳು ಅನೇಕ ವಿಧವಾಗಿ ಇವೆ. ಅವುಗಳು ಸ್ವರ್ಗಾದಿರೂಪ ಫಲಪ್ರಧಾನ ವ್ಯಾದವ್ಗುಗಳು. ಇವುಗಳು ಶ್ಲಾಘ್ಯವಾದವುಗಳಲ್ಲ. ಅಲ್ಪಜ್ಞಾನಿಗಳಾಗಿಯೂ, ವೇದವಾದದಲ್ಲಿ ಆಸಕ್ತಿಯುಳ್ಳಂಥಾವರಾಗಿಯೂ, ಸ್ವರ್ಗಾದಿ ಭೋಗಗಳಿಗೆ ಮಿಂಚಿದ್ದಿಲ್ಲವೆಂದು ಹೇಳುವಂಥಾವರಾಗಿಯೂ,ಇರುವರು; ವೇದದಲ್ಲಿಹೇಳಿರುವ ಸ್ವರ್ಗಾದಿಭೋಗ ಫಲವುಳ್ಳ, ಫಲವಲ್ಲದ ಪುಷ್ಪಕ್ಕೆ ಮಾತ್ರ ಸಮಾನವಾಗಿರುವ, ವಾಕ್ಯಗಳನ್ನು ವಿಶೇಷವಾದ್ದಾಗಿ ಹೇಳಿಕೊಂಡಿರುವರು. ಇಂಥವರು ಕಾಮ್ಯಾರ್ಥ ಫಲಾಸಕ್ತರೇಹೊರತು ಮೋಕ್ಷಫಲವನ್ನು ಅರಿಯರು. ಇವರಿಗೆ ಪುನಃ ಜನ್ಮಎಂದಿಗೂ ತಪ್ಪದು. ಕಾಮ್ಯಫಲ ವಿಷಯುಕವಾದ ವಾಕ್ಯಗಳಿಂದಾ ಮನಸ್ಸು ಭ್ರಮೆಗೊಂಡು ಹೋದವರಿಗೆ ಆತ್ಮಜ್ಞಾನವಿಷಯುಕವಾದ ಬುದ್ಧಿಯು ವುಂಟಾಗುವುದೇ ಇಲ್ಲಾ. ವೇದಗಳು ಸತ್ವರಜಸ್ತಮೊ ಗುಣಗಳಿಂದಾ ಮಿಶ್ರುವಾದಂಥಾ ಮನುಷ್ಯರ ವಿಷಯುಕವಾದದ್ದು. ಆದರೆ ನೀನು ಈ ಗುಣತ್ರಯಗಳ ಸಾಂಕರ್ಯ

ವಿಲ್ಲದಂಥಾವನಾಗಿಯೂ, ಶೀತ,ಉಷ್ಣ,ಸುಖ,ದುಃಖ ವೆಂಬ ಭೇದವಿಲ್ಲದಂಥಾವನಾಗಿಯೂ, ಯಾವಾಗಲೂ ಸತ್ವಗುಣವನ್ನು ಮಾತ್ರ ಪ್ರಧಾನವಾಗಿ ಉಳ್ಳವನಾಗಿಯೂ, ಸಂಪಾದಿಸುವ, ರಕ್ಷಿಸುವ, ವಿಚಾರಪ್ರಧಾನನಲ್ಲದ,ಆತ್ಮಸ್ವರೂಪವನ್ನೇ ತಿಳಿದುಕೊಳ್ಳುವ ಆಸಕ್ತಿಯುಳ್ಳವನಾಗಿಯೂ ಇರು. ಇದು ಹ್ಯಾಗೆಂದರೆ, ಒಂದು ಕೆರೆಯು ಎಷ್ಟು ಪೂರ್ಣವಾಗಿ ತುಂಬಿದ್ದರೂ ಕೂಡ, ದಾಹಿತನಾದವನು ತನ್ನ ದಾಹವು ಅಡಗುವಷ್ಟು ನೀರು ಕುಡಿಯುವನೇ ಹೊರತು ಅದೆಲ್ಲವನ್ನೂ ಪಾನಮಾಡುವದಿಲ್ಲವಷ್ಟೆ. ಹಾಗೆಯೆ, ಜ್ಞಾನಿಯಾದವನೂ ಕೂಡ ತನ್ನ ಮೋಕ್ಷಸಾಧನೆಗೆ ಎಷ್ಟು ಬೇಕೊ ಅಷ್ಟೇ ವೇದದಿಂದಲೂ ಗ್ರಹಿಸತಕ್ಕದ್ದು. ಮೋಕ್ಷಾಪೇಕ್ಷೆಯುಳ್ಳ ನಿನಗೆ, ನಿನ್ನ ನಿತ್ಯ ನೈಮಿತ್ತಿಕ ಕರ್ಮಗಳಲ್ಲಿ ಮಾತ್ರ ಅಧಿಕಾರವೇ ಹೊರತು ಅದರಿಂದ ಉಂಟಾಗುವ ಫಲಗಳಲ್ಲಿ ಅಧಿಕಾರವು ಎಂದಿಗೂ ಬ್ಯಾಡ. ನೀನು ಕರ್ಮಕ್ಕೂ ಅದರ ಫಲಕ್ಕೂ ಅಧಿಕಾರಿ ಎಂದು ಎಣಿಸಲಾಗದು. ಅಲ್ಲದೆ ನಿನ್ನ ಕರ್ಮಾನುಷ್ಠಾನವನ್ನ ಮಾಡದೇಲೂ ಸುಮ್ಮನೆ ಇರಕೂಡದು. ನೀನು ನಿನ್ನ ನಿತ್ಯ ನೈಮಿತ್ತಿಕ ಕರ್ಮಗಳಲ್ಲೆಲ್ಲಾ ಯೋಗನಿಷ್ಠನಾಗಿಯೂ, ಅಂದರೆ, ಸಿದ್ಧಿ, ಅಸಿದ್ಧಿ, ಇವೆರಡರಲ್ಲಿಯೂ ಸಮಬುದ್ಧಿಯುಳ್ಳವನಾಗಿಯೂ, ವಿಕಾರ ವಿಲ್ಲದವನಾಗಿಯೂ, ನೀನು ಮಾಡುವ ಕೆಲಸಗಳಲ್ಲಿ ಸಂಬಂಧವನ್ನ ಬಿಟ್ಟವ

ನಾಗಿಯೂ, ಮಾಡಬೇಕು. ಕಾಮ್ಯಫಲದಾಯಿಯಾದ
ಕರ್ಮಯೋಗವು ಮೋಕ್ಷಫಲಪ್ರದವಾದ ಜ್ಞಾನಯೋಗ
ಕ್ಕಿಂತಲೂ ಬಹಳ ನಿಕೃಷ್ಟವಾದದ್ದು. ಆದ್ದರಿಂದಾ
ನೀನು ಯಾವಾಗ್ಯೂ ಜ್ಞಾನಮಾರ್ಗದಲ್ಲಿಯೆ ಇದ್ದು
ಕೊಂಡು ಇರು. ಸ್ವರ್ಗಾದಿ ಫಲಾಪೇಕ್ಷೆಯಿಂದಾ
ಕರ್ಮಾಚರಣೆಯನ್ನು ಮಾಡುವರು ಕೇವಲಸಂಸಾರಿ
ಗಳಾಗುವರು. ಈ ಮೇಲೆ ಹೇಳಿದಜ್ಞಾನದಿಂದಾ ಕೂ
ಡಿದವನು ಈ ಜನ್ಮದಲ್ಲಿಯೇ ಸುಕೃತ, ದುಷ್ಕೃತ,
ವೆಂಬ ಎರಡು ವಿಧವಾದ ಫಲವನ್ನು ಬಿಟ್ಟುಬಿಡುವನು.
ಆದ್ದರಿಂದಾ ಜ್ಞಾನಯೊಗಕ್ಕೆ ಯತ್ನಿಸು. ಈ ಜ್ಞಾನ
ಯೋಗವೇ ಕರ್ಮಯೋಗಕ್ಕಿಂತಲೂ ಬಹಳ ಶ್ಲಾಘ್ಯ
ವಾದದ್ದು. ಜ್ಞಾನಿಗಳು ಕರ್ಮಸಾಧ್ಯವಾದ ಫಲವನ್ನು
ಬಿಟ್ಟು, ಕರ್ಮರೂಪವಾದ ಬಂಧದಿಂದಲೂ ಬಿಡಲ್ಪಟ್ಟು,
ನಿರುಪದ್ರವವಾದ ಸ್ಥಾನವನ್ನ ಹೊಂದುವರು. ಯಾ
ವಾಗನಿನ್ನ ಯಿಂಥಾಜ್ಞಾನವು ಮೋಹರೂಪವಾದ ಕಲು
ಷವನ್ನ ದಾಟುತ್ತದೆಯೊ, ಆಗ ನೀನು, ಈಗ ಕೇಳಿ
ರುವ ವಿಷಯಗಳಿಗಾಗಿಯೂ, ಮುಂದೆ ಇನ್ನೂ ಕೇಳ
ತಕ್ಕ ವಿಷಯಗಳಿಗಾಗಿಯೂ, ವೈರಾಗ್ಯವನ್ನು ಹೊಂ
ದುವಿ. ನಿನ್ನ ಬುದ್ಧಿಯು, ಯಾವಾಗ ನನ್ನ ಈಜ್ಞಾ
ನೋಪದೇಶದಲ್ಲಿ ಭಕ್ತಿಯುಂಟಾಗಿ, ಒಂದೇರೀತಿ
ಯಾಗಿಯೂ, ನಿಶ್ಚಲವಾಗಿಯೂ, ನಿಲ್ಲುವುದೊ, ಆಗ
ಜ್ಞಾನವು ನಿನಗೆ ಉಂಟಾಗುವದು.''

ಅರ್ಜುನ:-"ಓ ಕೃಷ್ಣನೆ! ಸಮಾಧಿನಿಷ್ಠನಾಗಿರುವ ನಿಶ್ಚಲಪ್ರಜ್ಞನೆಂದರೆ ಏನು? ಇವನು ಏನು ಹೇಳುವನು? ಹ್ಯಾಗೆಕೂಡುವನು? ಮತ್ತು ಏನು ಮಾಡುವನು?"

ಶ್ರೀಭಗವಾನ್! "ಓ ಅರ್ಜುನನೇ! ಯಾವಾಗ ಮನುಷ್ಯನು ತನ್ನ ಮನಸ್ಸಿನಿಂದಲೆ ಮನಸ್ಸಿನಲ್ಲಿ ಸಂತೋಷವನ್ನು ಹೊಂದಿ, ಸಮಸ್ತ ಕಾರ್ಯಾರ್ಥಗಳನ್ನು ಶುದ್ಧಾಂಗವಾಗಿ ಬಿಟ್ಟು ಬಿಡುತ್ತಾನೆಯೊ, ಆಗಲೇ ಅವನು ಸ್ಥಿರಪ್ರಜ್ಞನೆನಿಸಿಕೊಳ್ಳುವನು. ತನಿಗೆ ಪ್ರತಿಕೂಲವಾದಾಗ ದುಃಖಿಸದೇಲೂ, ಅನುಕೂಲವಾದಾಗ ಹಿಗ್ಗದೇಲೂ, ವಿಶ್ವಾಸವೂ ಭಯವೂ ದ್ವೇಷವೂ ಇಲ್ಲದಂತೆ, ಪರಮಾತ್ಮನನ್ನ ಧ್ಯಾನಿಸಿಕೊಂಡು ಮೌನವ್ರತವನ್ನು ತಾಳಿರುವನು. ಯಾರು ಸಮಸ್ತವಸ್ತುವಿನಲ್ಲಿಯೂ ಸ್ನೇಹಶೂನ್ಯರಾಗಿಯೂ, ಶುಭಾಶುಭಗಳನ್ನ ಹೊಂದಿದಾಗ ಶುಭವನ್ನ ಕೊಂಡಾಡದೇಲೂ, ಅಶುಭವನ್ನ ನಿಂದಿಸದೇಲೂ, ಯಾವದಕ್ಕೂ ಉದಾಸೀನವಾಗಿ ಇರುವರೋ, ಅಂಥಾವರ ಪ್ರಜ್ಞೆಯು ಶ್ರೇಷ್ಠವಾದದ್ದು. ಯಾವದಕ್ಕೂ ಏನೂ ಹೇಳದೆ, ಮೌನವಾಗಿರುವದೇ ಅವರ ಮಾತಾಗಿರುವುದು. ಯಾವಾಗ ಯೋಗಿಯು ತನ್ನ ಪಂಚೇಂದ್ರಿಯಗಳನ್ನ, ಕೂರ್ಮವು ಅದರ ಅಂಗಗಳನ್ನ ತನ್ನಲ್ಲಿಗೆ ಎಳೆದುಕೊಳ್ಳುವಂತೆ, ಅಡಗಿಸಿಕೊಳ್ಳುವನೋ ಆಗ ಅವನ ಪ್ರಜ್ಞೆ

ಯು ಶ್ಲಾಘ್ಯವಾದದ್ದು. ವಿಷಯಾನುಭವವನ್ನ ಮಾಡದೆ ಇಂದ್ರಿಯಗಳನ್ನ ಅಡಿಗಿಸಿಕ್ಕೊಂಡಿರುವ ಮನುಷ್ಯನಿಗೆ ರಸವು ನಿವರ್ತಿಸಿ ಹೋಗದಿದ್ದರೂ ವಿಷಯನಿವೃತ್ತಿ ಆಗುತ್ತೆ. ಇವನ ಈ ಅನುರಾಗವೂ ಕೂಡ ಶ್ರೇಷ್ಠವಾದ ಸುಖವನ್ನ ಉಂಟುಮಾಡುವಂಥಾ ಆತ್ಮಸ್ವರೂಪವನ್ನು ಕಂಡು ತೊಲಗಿ ಹೋಗುವುದು. ಓ ಅರ್ಜುನನೆ! ಆತ್ಮಾವಲೋಕನವನ್ನುಮಾಡಲು ಯತ್ನಿಸಿಕ್ಕೊಂಡು ಇರುವಾಗಲೂ ಕೂಡ, ಜ್ಞಾನಿಗಳಮನಸ್ಸನ್ನ ಬಲಾತ್ಕಾರದಿಂದಾ ಬಲವತ್ತಾದ ಇಂದ್ರಿಯಾದಿಗಳು ಅಪಹರಿಸಿಕ್ಕೊಂಡು ಹೋಗುತ್ತವೆ. ಅಂಥಾ, ಜಯಿಸಲು ಅಸಾಧ್ಯವಾದಂಥಾ, ಇಂದ್ರಿಯಗಳನ್ನೆಲ್ಲಾ ಚನ್ನಾಗಿಅಡಗಿಸಿಕ್ಕೊಂಡು, ನನ್ನನ್ನೇ ಧ್ಯಾನಿಸುತ್ತಾ, ಸಮತ್ವರೂಪಯೋಗನಿಷ್ಠನಾಗಿರಬೇಕು. ಹೀಗೆ ಅವನು ಪ್ರತಿಜ್ಞೆ ಮಾಡಿಕ್ಕೊಂಡು ಕೂಡುವನು. ಯಾವಯೋಗಿಯ ಇಂದ್ರಿಯಗಳು ತನ್ನ ವಶವಾಗಿರುವವೊ ಅಂಥವನ ಪ್ರಜ್ಞೆಯು ಶ್ರೇಷ್ಠವಾದದ್ದು. ಶಬ್ದಾದಿ ವಿಷಯಗಳನ್ನ ಯಾವಾಗಲೂ ಧ್ಯಾನಿಸಿಕ್ಕೊಂಡಿರುವ ಪುರುಷನಿಗೆ ಆ ವಿಷಯಗಳಲ್ಲಿ ಪ್ರೀತಿಯುಂಟಾಗುತ್ತದೆ. ಆ ಪ್ರೀತಿಯಿಂದಾ ಆಸೆಯುಂಟಾಗುವುದು, ಆಸೆಯಿಂದ ಕೋಪವೂ, ಕೋಪದಿಂದಾ ಕೃತ್ಯಾಕೃತ್ಯವಿವೇಕನಾಶವೂ, ವಿವೇಕನಾಶದಿಂದ ಬುದ್ಧಿಭ್ರಂಶವೂ, ಬುದ್ಧಿ

ಭ್ರಂಶದಿಂದ ಬುದ್ಧಿನಾಶವೂ, ಈ ಬುದ್ಧಿನಾಶದಿಂದಾ ಆತ್ಮನಾಶವೂ ಉಂಟಾಗುವುದು. ನಂತರ ಪುನರ್ಜನ್ಮವನ್ನು ಹೊಂದಬೇಕಾಗುತ್ತೆ. ಆದರೆ ಈ ಪ್ರೀತಿದ್ವೇಷ ಇವುಗಳಿಂದಾ ಬಿಡಲ್ಪಟ್ಟು ಮನಸ್ಸನ್ನು ಜಯಿಸಿರುವಂಥವರ ಇಂದ್ರಿಯಗಳಿಂದ ವಿಷಯಾಚರಣೆ ಮಾಡಲ್ಪಟ್ಟಾಗ್ಯೂ, ಅಂಥಾಮನಸ್ಸನ್ನ ಜಯಿಸಿದ ಪುರುಷರುನಿರ್ಮಲಚಿತ್ತರಾಗಿಯೇ ಇರುವರು. ಇದೇ ಅವರು ಮಾಡುವ ಕೆಲಸವಾಗಿರುವದು. ಯಾವಾಗ ಇವರು ಇಂಥಾ ನಿರ್ಮಲಚಿತ್ತರಾಗಿ ಇರುವರೋ ಆಗ ಅವರಿಗೆ ಸಮಸ್ತವಾದ ದುಃಖವೂ ನಾಶವಾಗುವುದು. ಇಂಥಾ ನಿರ್ಮಲಾಂತಃಕರಣವುಳ್ಳವರಿಗೆ ಶೀಘ್ರದಲ್ಲಿಯೆ ಶ್ರೇಷ್ಠವಾದ ಜ್ಞಾನವೂ ಉಂಟಾಗುವುದು. ನನ್ನಲ್ಲಿ ಮನಸ್ಸ ಮಾಡದೆ, ಇರುವವನಿಗೆ ಪ್ರಜ್ಞೆ ಎಂಬುವುದೇ ಇಲ್ಲ. ಆದುದರಿಂದಾ ಆತನಿಗೆ ಪರಮಾತ್ಮನ ವಿಷಯಕವಾದ ಚಿಂತೆಯೂ ಇಲ್ಲಾ. ಇಂಥಾಪರಮಾತ್ಮ ವಿಷಯಕ ಚಿಂತೆಯು ಇಲ್ಲದಂಥಾವನಿಗೆ ಶಾಂತಿಯೂ ಇಲ್ಲ. ಅಂಥಾಶಾಂತಿಇಲ್ಲದವನಿಗೆ ನಿರತಿಶಯವಾದಂಥ ಸುಖಪ್ರಾಪ್ತಿಯು ಹ್ಯಾಗೆ ಉಂಟಾದೀತು ? ಎಂದಿಗೂ ಅವನಿಗೆ ಸುಖವಿಲ್ಲವಷ್ಟೆ. ಯಾವಅಡ್ಡಿಯೂ ಇಲ್ಲದೆ, ಯಥೇಚ್ಛವಾಗಿ ಚಕ್ಷುರಾದಿ ಇಂದ್ರಿಯಗಳಲ್ಲಿ ಸಂಚರಿಸುವಂಥಾ ಮನಸ್ಸು, ಅದು ಹೋದದಾರಿಯಲ್ಲಿಯೇ ಹೋಗಿ, ಆ ಮನುಷ್ಯನ ಬುದ್ಧಿಯನ್ನು, ಪ್ರತಿಕೂಲವಾದ ಘಾಳಿಯು

ನೀರಿನಲ್ಲಿ ಹಡಗನ್ನ ಹ್ಯಾಗೆ ತಳ್ಳಿಕೊಂಡು ಹೋಗುವ್ರದೋ ಹಾಗೆ, ಅಪಹರಿಸಿ ಬಿಡುವುದು. ಆದ್ಧರಿಂದಾ ಯಾವ ಮನುಷ್ಯನ ಸಕಲ ಇಂದ್ರಿಯಂಗಳೂ ವಿಷಯಾಸಕ್ತಿಗೆ ಬಿಡದೆ ನಿಗ್ರಹಿಸಿ ಹಿಡಿಯಲ್ಪಡುತ್ತವೆಯೋ ಅಂಥವನ ಪ್ರಜ್ಞೆಯೇ ಶ್ರೇಷ್ಠವಾದದ್ದು. ಯಾವ ಆತ್ಮವಿಷಯಕವಾದ ಜ್ಞಾನವು ಸಮಸ್ತಪ್ರಾಣಿಗಳಿಗೂ ರಾತ್ರಿಯೋಪಾದಿಯಲ್ಲಿ ತಿಳಿಯದೆ ಇಧೆಯೊ, ಅಂಥಾ ಆತ್ಮಜ್ಞಾನದಲ್ಲಿ ಯೋಗಿಯಾದವನು ಆತ್ಮಾವಲೋಕನವನ್ನಮಾಡಿಕ್ಕೊಂಡು ಎಚ್ಚರವಾಗಿರುವನು. ಯಾವಶಬ್ದಾದಿ ವಿಷಯಂಗಳಲ್ಲಿ ಸಮಸ್ತಪ್ರಾಣಿಗಳೂ ಪ್ರಬುದ್ಧರಾಗಿಧಾರೆಯೊ,ಅಂಥಾಶಬ್ದಾದಿವಿಷಯಂಗಳ ಬುದ್ಧಿಯು ಆತ್ಮಾವಲೋಕನವನ್ನಮಾಡುತ್ತಿರುವ ಮನನಶೀಲನಾದ ಮುನಿಗೆ ರಾತ್ರಿಯಂತೆ ಅಪ್ರಕಾಶವಾಗಿರುವದು. ಯಾವಪ್ರಕಾರ ತಾನಾಗಿಯೆ ಪೂರ್ಣವಾಗಿಯೂ, ಒಂದೆಮಾದರಿಯಾಗಿಯೂ,ಇರುವಂಥಾ ಸಮುದ್ರವನ್ನ ನದೀಜಲವು ಪ್ರವೇಶಿಸುತ್ತದೆಯೊ, ಅದೇಮೋರೆಗೆ ಸಮಸ್ತ ಶಬ್ದಾದಿ ವಿಷಯಂಗಳೂ ಈ ಯೋಗಿಯ ಇಂದ್ರಿಯಂಗಳಿಗೆ ಗೋಚರವಾಗುತ್ತವೆ: ಆದಾಗ್ಯೂ ಅವನು ಶಾಂತನಾಗಿಯೇ ಇರುವನು. ಆದರೆ ಚಿತ್ತವಿಕಾರವುಳ್ಳಂಥಾ ಪುರುಷನು ಎಂದಿಗೂ ಶಾಂತಿಯನ್ನು ಹೊಂದಲಾರನು. ಯಾವ ಪುರುಷನು ಎಲ್ಲಾ ಆಶೆಗಳನ್ನುಬಿಟ್ಟು, ನಿಸ್ಪೃಹನಾಗಿ

ಯೂ, ಮಮತಾರಹಿತನಾಗಿಯೂ, ಅಹಂಕಾರವಿಲ್ಲ ದೆಯೂ, ಸಂಚರಿಸುವನೋ ಅವನೇ ಶಾಂತಿಯನ್ನು ಹೊಂದುವನು. ಇದೇ ಆತ್ಮಜ್ಞಾನಪೂರ್ವಕವಾದ ಬ್ರಹ್ಮಪ್ರಾಪ್ತಿಯನ್ನುಂಟುಮಾಡುವ ಜ್ಞಾನ ನಿಷ್ಠೆ ಯೆಂಬುವುದು. ಈ ನಿಷ್ಠೆಯನ್ನು ಹೊಂದಿದಪುರು ಷನು, ಪುನರ್ಜನ್ಮವನ್ನು ಹೊಂದುವದಿಲ್ಲ. ಈ ನಿ ಷ್ಠೆಯಲ್ಲಿ ಕಳೇವರಿವಿಗೂ ಇದ್ದಪಕ್ಷದಲ್ಲಿ ಪರಮಾ ತ್ಮನನ್ನೇ ಹೊಂದುವನು.

ಇತಿಸಾಂಖ್ಯಯೋಗವೆಂಬ ಎರಡನೇ ಅಧ್ಯಾಯವು ಸಂಪೂರ್ಣವಾಯಿತು.

ಮೂರನೇ ಅಧ್ಯಾಯ. ಕರ್ಮಯೋಗವಿಚಾರ.

ಅರ್ಜುನ— "ಓ ಜನಾರ್ದನ ! ಕರ್ಮನಿಷ್ಠೆ ಗಿಂತಲೂ ಜ್ಞಾನನಿಷ್ಠೆಯೇ ಶ್ರೇಷ್ಠವಾದುದೆಂದು ನಿನ್ನ ಅಭಿಪ್ರಾಯವಿದ್ದಪಕ್ಷದಲ್ಲಿ,ಈ ಭಯಂಕರವಾದ ಯು ದ್ಧರೂಪವಾದಂಥಾ ಕರ್ಮದಲ್ಲಿ ನನ್ನನ್ನು ಯಾಕೆ ಪ್ರ ವರ್ತಿಸೆಂದು ಹೇಳುವಿ? ಅಯ್ಯ ಕೃಷ್ಣ ! ನೀನು ಒಂದುಕ್ಷಣದಲ್ಲಿ ಕರ್ಮವನ್ನುಕೊಂಡಾಡಿ, ಮತ್ತೊಂದು ಕ್ಷಣದಲ್ಲಿ ಜ್ಞಾನವನ್ನುಕೊಂಡಾಡುತ್ತಾ, ಪರಸ್ಪರ ವಿ ರುದ್ಧವಾದ ವಾಕ್ಯಗಳನ್ನು ಹೇಳುತ್ತಾ, ನನ್ನ ಬುದ್ಧಿ ಯಲ್ಲಿ ಭ್ರಮೆಯುಂಟಾಗುವಹಾಗೆ ಮಾಡುತ್ತೀಯೆ. ಆ ದುದರಿಂದಾ ಪರಮಪುರುಷಾರ್ಥವನ್ನ ನಾನುಹೊಂದ

ಲು ಯಾವವಂದು ಕೆಲಸವು ಸಾಧನವಾಗಿ ಇರುವದೊ ಅದನ್ನ ನೀನು ನಿಶ್ಚಯಿಸಿ, ನನಗೆ ಪರಸ್ಪರ ವಿರೋಧ ವಿಲ್ಲದಂತೆ ತಿಳಿಸಬೇಕು."

ಶ್ರೀ ಭಗವಾನ್:-"ಓ ಪಾಪರಹಿತನಾದ ಅರ್ಜುನನೆ! ಇಹಲೋಕದಲ್ಲಿ ಆಪ್ತತಮನಾದ ನನ್ನಿಂದ ಈ ಎರಡು ಪ್ರಕಾರವಾದ ನಿಷ್ಠೆಯು ಪೂರ್ವದಲ್ಲಿಯೆ ಹೇಳಲ್ಪಟ್ಟಿತು. ಜ್ಞಾನ ಯೋಗಾಧಿಕಾರಿಗಳಿಗೆ ಜ್ಞಾನನಿಷ್ಠೆಯೂ, ಕರ್ಮಯೋಗಾಧಿ ಕಾರಿಗಳಿಗೆ ಕರ್ಮನಿಷ್ಠೆಯೂ, ಏರ್ಪಡಿಸಲ್ಪಟ್ಟಿದೆ. ಪುರುಷನು ತನ್ನ ನಿತ್ಯ ನಯಿಮಿತ್ತಿಕ ಕರ್ಮಗಳನ್ನು ಮಾಡಲು ಆರಂಭಿಸದೇ ಇರುವಮಾತ್ರದಿಂದಲೇ ಜ್ಞಾನ ನಿಷ್ಠೆಯನ್ನು ಹೊಂದಲಾರನು. ಆದರೆ ಆರಂಭಿಸಿದ ಕಾರ್ಯಗಳ ತ್ಯಾಗದಿಂದಾ ಆ ನಿಷ್ಠೆಯನ್ನು ಹೊಂದಬಲ್ಲನು. ಯಾವ ಪುರುಷನೂ ಒಂದು ಕ್ಷಣವೂ ಕರ್ಮ ಮಾಡದಂತೆ ಇರಲಾರನು. ಎಲ್ಲರೂ ಅವರವರ ಪ್ರಕೃತಿ ಸಮ್ಮಂಧವಾದ ಸತ್ವರಜಸ್ತಮೋಗುಣಗಳಿಂದ ಪರವಶರಾಗಿ, ಕಾರ್ಯಾಸಕ್ತರಾಗಿ ಮಾಡಲ್ಪಡುತ್ತಾರಷ್ಟೆ. ಯಾವ ಜ್ಞಾನಯೋಗ ಪ್ರವರ್ತಕನಾದ ಪುರುಷನು ಕರ್ಮೇಂದ್ರಿಯಗಳನ್ನನಿಗ್ರಹಿಸಿಕೊಂಡೂಕೂಡ, ಆತ್ಮಸ್ವರೂಪವನ್ನ ಅರಿತುಕೊಳ್ಳದೆ, ಮನಸ್ಸಿನಲ್ಲಿಯೇ ವಿಷಯಾಸಕ್ತನಾಗಿರುವನೊ, ಅಂಥವನು ಮಿಥ್ಯಾಚಾರಉಳ್ಳವನೆಂದು ಹೇಳಲ್ಪಡುತ್ತದೆ. ಆದರೆ, ಯಾವ ಪುರುಷನು

ಮನಸ್ಸಿನಿಂದಾ ಇಂದ್ರಿಯಗಳನ್ನೆಲ್ಲಾ ಅಡಗಿಸಿಕೊಂಡು, ಕರ್ಮೇಂದ್ರಿಯಗಳಲ್ಲಿ ಫಲಾಭಿಸಂಧಿ ಇಲ್ಲದೇನೇ, ಕರ್ಮಯೊಗವನ್ನ ಆರಂಭಿಸುವನೊ ಅವನು ಶ್ರೇಷ್ಠನಾದವನು. ನಿನಗೆ ಕ್ಲುಪ್ತವಾದ ಕರ್ಮಗಳನ್ನ ನೀನು ನಿತ್ಯವೂ ಮಾಡಿಕೊಂಡು ಇರು. ಯಾಕಂದರೆ, ಜ್ಞಾನಯೋಗಕ್ಕಿಂತಲೂ ಫಲೋದ್ದೇಶ್ಯವಿಲ್ಲದಂಥಾ ಕರ್ಮಯೋಗವೇ ಶ್ರೇಷ್ಠವಾದದ್ದು. ಇದೂ ಅಲ್ಲದೆ, ಕರ್ಮ ಬಿಟ್ಟವನಿಗೆ ಜ್ಞಾನ ಸಂಪಾದನೆ ಮಾಡಬೇಕಾದ ದೇಹಧಾರಣೆ ಸಿದ್ಧಿಸಲಾರದು. ಯಜ್ಞ ನಿಮಿತ್ತವಾದ ಕರ್ಮವಲ್ಲದೆ, ಸ್ವಪ್ರಯೋಜನಕ್ಕಾಗಿ ಮಾಡುವ ಕರ್ಮಗಳನ್ನು ಮಾಡುತ್ತಾ, ಮನುಷ್ಯನು ಕರ್ಮಬದ್ಧನಾಗುವನು. ಆದುದರಿಂದ, ಎಲೈ ಅರ್ಜುನ! ಯಜ್ಞೋಪಯೋಗವಾದಂಥಾ ಕರ್ಮಗಳನ್ನೇ, ಅವುಗಳಲ್ಲಿ ಸಂಬಂಧಗಳನ್ನು ಬಿಟ್ಟು, ಮಾಡುತ್ತಾ ಬಾ. ಭಗವಂತನು ಪೂರ್ವದಲ್ಲಿ ಪ್ರಜೆಗಳನ್ನು ಸೃಷ್ಟಿಸುವ ಕಾಲದಲ್ಲಿಯೇ ಯಜ್ಞಸಹಿತರಾಗಿ ಅವರುಗಳನ್ನ ಸೃಷ್ಟಿಸಿ ಹೇಳಿದ್ದೇನಂದರೆ,—'ಓ ಪ್ರಜೆಗಳಿರಾ! ಈ ಯಜ್ಞಗಳಿಂದ ನೀವು ವುತ್ತರೋತ್ತರ ವೃದ್ಧಿಯನ್ನು ಹೊಂದಿರಿ. ಇವುಗಳು ನಿಮಗೆ ಇಷ್ಟ ಕಾಮ್ಯಾರ್ಥಗಳನ್ನೆಲ್ಲಾ ಕೊಡುವಂಥಾವುಗಳಾಗಲಿ. ಈ ಯಜ್ಞಗಳಿಂದ ನೀವು ಇಂದ್ರಾದಿ ದೇವತೆಗಳನ್ನ ಆರಾಧಿಸಿರಿ. ಆ ದೇವತೆಗಳು ನಿಮ್ಮನ್ನ ಅಭಿವೃದ್ಧಿ ಹೊಂದಿಸಲಿ. ಹೀಗೆ

ನೀವು ಒಬ್ಬರಿಗೊಬ್ಬರು ಅನುಕೂಲರಾಗಿ ಇದ್ದುಕೊಂಡು, ಶ್ರೇಷ್ಠತಮವಾದ ಮೋಕ್ಷವನ್ನು ಹೊಂದಿರಿ. ಈ ಯಜ್ಞಗಳಿಂದ ಆರಾಧಿತರಾದ ದೇವತೆಗಳು ನಿಮಗೆ ಕಾಮ್ಯಾರ್ಥಗಳನ್ನೆಲ್ಲಾ ಕೊಡುವರು. ಅವರು ಕೊಟ್ಟಂಥಾ ಭೋಗ್ಯ ಪದಾರ್ಥಗಳನ್ನ ಆ ದೇವತೆಗಳಿಗೆ ಸಮರ್ಪಿಸದೇನೆ ಯಾರು ಭುಜಿಸುವರೊ, ಅವರನ್ನ ಕಳ್ಳರೆಂದು ತಿಳಿಯತಕ್ಕದ್ದು. ಪರಮಪುರುಷನ ಆರಾಧನವಾದಯಜ್ಞದ ಶೇಷಭೂತವಾದಂಥಾ ಪದಾರ್ಥಗಳನ್ನಸ್ವೀಕರಿಸುವ ಸತ್ಪುರುಷರು, ಪ್ರಾಪ್ತಿ ಪ್ರತಿಬಂಧಕವಾದಂಥಾ ಸಮಸ್ತ ಪಾಪಗಳಿಂದಲೂ ಬಿಡಲ್ಪಡುವರು. ಆದರೆ ಯಾರು ಕೇವಲ ತಮಗಾಗಿಯೇ ಪಾಕಗಳನ್ನುಮಾಡಿಸುವರೊ, ಅವರುಶುದ್ಧಪಾಪಾತ್ಮರಾಗಿ, ಪಾಪವನ್ನ ಭುಜಿಸುವರು. ಅನ್ನದಿಂದ ಸಮಸ್ತ ಪ್ರಾಣಿಗಳೂ ಉಂಟಾಗುವುವು. ಅನ್ನವು ಮಳೆಯಿಂದ ಉಂಟಾಗುವದು. ಮಳೆಯು ಯಜ್ಞದಿಂದಉಂಟಾಗುವದು. ಈಯಜ್ಞವು ದ್ರವ್ಯಾರ್ಜನಾದಿ ರೂಪಕರ್ಮದಿಂದಉಂಟಾಗುವದು. ಕರ್ಮವು ಶರೀರ ಸಂಮಂಧವಾದದ್ದು. ಶರೀರವು ಜೀವಸಂಮಂಧವಾದದ್ದು ಆದುದರಿಂದ ಸಮಸ್ತ ಪುರುಷಾರ್ಥಗಳನ್ನೂ ಸಾಧಿಸುವಂಥಾ ಶರೀರವು ಯಾವಾಗಲೂ ಯಜ್ಞಮೂಲಕವಾದದ್ದು. ಈ ಪ್ರಕಾರವಾಗಿ ಪರಮಾತ್ಮನಿಂದಲೇ ಏರ್ಪಡಿಸಲ್ಪಟ್ಟ ಚಕ್ರವನ್ನ ಯಾರು ಅನುವರ್ತಿಸುವದಿಲ್ಲವೊ, ಅಂ

ಥವರು ಪಾಪದಿಂದ ತುಂಬಿದ ಆಯುಸ್ಸು ಉಳ್ಳವರಾಗಿ, ಕೇವಲ ವಿಷಯಾಸಕ್ತರಾಗಿಯೂ, ವ್ಯರ್ಥವಾಗಿಯೂ, ಜೀವಿಸುವರು. ಯಾವ ಮನುಷ್ಯನು ಆತ್ಮನಲ್ಲಿಯೇ ಪ್ರೀತಿಯನ್ನಿಟ್ಟುಕೊಂಡು, ಆತ್ಮನಲ್ಲಿಯೇ ನಿವರ್ತನಾಗಿ,ಆತ್ಮನಲ್ಲಿಯೇ ಸಂತುಷ್ಟಿಯನ್ನು ಹೊಂದುವನೋ, ಅಂಥಾ ಮನುಷ್ಯನಿಗೆ ಮಾಡತಕ್ಕ ಕರ್ಮವು ಯಾವದೂ ಇರುವುದಿಲ್ಲ. ಅವನು ಏನು ಮಾಡಿದರೂ ಅದರಿಂದ ಹೊಂದತಕ್ಕ ಪ್ರಯೋಜನವೇನೂ ಇರುವುದಿಲ್ಲ. ಏನು ಮಾಡದೇಬಿಟ್ಟರೂ ಯಾವ ಅನರ್ಥವೂ ಬರುವುದಿಲ್ಲ. ಈ ಲೋಕದಲ್ಲಿ ಅವನು ಪ್ರಯೋಜನವನ್ನು ಉಂಟುಮಾಡುವಂಥಾ ಯಾವ ಕೆಲಸವನ್ನೂ ಮಾಡತಕ್ಕ ಅವಶ್ಯಕವಿಲ್ಲ. ಆದ್ದರಿಂದ ಯಾವಾಗಲೂ ಆತ್ಮ ಪ್ರಾಪ್ತಿ ಉಂಟಾಗುವವರಿವಿಗೂ, ಅವಶ್ಯಕವಾಗಿ ಮಾಡತಕ್ಕ ಕರ್ಮಗಳನ್ನೆಲ್ಲಾ, ಸಂಗವಿಲ್ಲದಂತೆ, ಮಾಡು. ಹೀಗೆ ಸಂಗರಹಿತನಾಗಿ ಕರ್ಮ ಮಾಡುವನು ಪರಮಾತ್ಮನನ್ನು ಹೊಂದುವನು. ಜನಕಮಹಾರಾಜರೇ ಮೊದಲಾದವರೆಲ್ಲಾ ಕರ್ಮಯೋಗದಿಂದಲೇ ಮೋಕ್ಷವನ್ನ ಹೊಂದಿದರಷ್ಟೆ. ಪ್ರಪಂಚದವರಿಗೆಲ್ಲಾ ಅನುಷ್ಠಾನ ಕ್ರಮವನ್ನ ತಿಳಿಸಿ, ಅವರನ್ನ ತಮ್ಮ ವಶಮಾಡಿಕೊಳ್ಳುವದಕ್ಕಾದರೂ, ಕರ್ಮವನ್ನು ಮಾಡುವದೇಯುಕ್ತವಲ್ಲವೆ? ಪ್ರಸಿದ್ಧರಾದ ಪುರುಷರು ಯಾವಯಾವಕರ್ಮಗಳನ್ನುಮಾಡುವರೋ,ಆಯಾಕರ್ಮಗಳನ್ನೇ,

ಸಾಮಾನ್ಯರೆಲ್ಲರೂ ಮಾಡುವರು. ಅವರು ಯಾವ ಕೆಲಸವನ್ನ ಎಷ್ಟುಮಟ್ಟಿಗೆ ಮಾಡುವರೊ, ಲೋಕವೂ ಅದನ್ನ ಅಷ್ಟುಮಟ್ಟಿಗೇನೇ ಮಾಡುವದು. ಪಾರ್ಥನೆ! ಸರ್ವೇಶ್ವರನಾದ ನನಿಗೆ ಮೂರು ಲೋಕದಲ್ಲಿಯೂ ಅವಶ್ಯಕವಾಗಿ ಮಾಡತಕ್ಕಂಥಾ ಕೆಲಸವೆಂಬುವದು ಒಂದೂ ಇಲ್ಲ. ನಾನು ಇದುವರಿವಿಗೂ ಹೊಂದದ್ದೇಲೂ, ಮುಂದೆ ಹೊಂದತಕ್ಕಂಥಾದ್ದಾಗಿಯೂ, ಇರುವದು ಯಾವದೂ ಇಲ್ಲ. ಹಾಗಿದ್ದಾಗ್ಯೂ ನನ್ನ ವರ್ಣಾಶ್ರಮ ಧರ್ಮಕ್ಕೆ ಅನುಸಾರವಾದ ನಿತ್ಯನಯಿಮಿತ್ತಿಕಾದಿ ಕರ್ಮಗಳನ್ನುಮಾಡುತ್ತಲೆ ಇರುವೆನು. ಓ ಪಾರ್ಥ! ನಾನು ಈ ಪ್ರಕಾರ ಮಾಡದೆ, ಯಾವಾಗಲಾದರೂ ಕೊಂಚ ಪಾಲುಮಾರಿಕೆಯಿಂದ ಇದ್ದದ್ದೇ ಆದರೆ, ಸಮಸ್ತ ಮನುಷ್ಯರೂ ನನ್ನ ಮಾರ್ಗವನ್ನೇ ಅನುಸರಿಸುವರಲ್ಲವೆ ? ನಾನು ಕರ್ಮ ಮಾಡದೆಹೋದ ಪಕ್ಷದಲ್ಲಿ ಈ ಲೋಕದವರೆಲ್ಲಾ ಕರ್ಮಭ್ರಷ್ಟರಾಗಿ ಹೋಗುವರು. ಈ ಅವಸ್ಥೆಗಳಿಗೆಲ್ಲಾ ನಾನೇ ಕಾರಣನಾಗುವೆನು. ಈ ಪ್ರಜೆಗಳನ್ನೆಲ್ಲಾ ನಾನೇ ನಷ್ಟಪಡಿಸಿದಂತಾದೀತು. ಅಲ್ಪಜ್ಞರು ಕರ್ಮಾಸಕ್ತರಾಗಿ ಹ್ಯಾಗೆ ಕರ್ಮವನ್ನ ಮಾಡುವರೊ, ಅದೇಪ್ರಕಾರವೆ ಎಲ್ಲವನ್ನೂ ತಿಳಿದವರೂಕೂಡ, ಕರ್ಮದಲ್ಲಿ ಸಂಗರಹಿತರಾಗಿ, ಲೋಕಸಂಗ್ರಹಕ್ಕೋಸ್ಕರ, ಕರ್ಮವನ್ನ ಮಾಡಿಯೇ ತೀರಬೇಕು. ಆತ್ಮಜ್ಞಾನವಿಲ್ಲದೆ ಕೇವಲ ಕ

ರ್ಮಾಧಿಕಾರಿಗಳಾದವರಿಗೆ ಬುದ್ಧಿಭ್ರಂಶವನ್ನು ಉಂಟು ಮಾಡದೆ, ಆ ಕಾರ್ಯಗಳನ್ನೆಲ್ಲಾ ಅವಶ್ಯಕವಾಗಿ ಮಾಡ ತಕ್ಕದ್ದೆಂದು ಎಣಿಸಿರುವಂತೆಯೆ,ಕರ್ಮಗಳನ್ನೆಲ್ಲಾ ಸರಿಯಾಗಿಮಾಡಿ, ಅವರುಗಳಿಗೆ ಅವುಗಳಲ್ಲಿ ಪ್ರೀತಿಯನ್ನು ಉಂಟುಮಾಡಬೇಕು. ಅಹಂಕಾರದಿಂದ ಬುದ್ಧಿಕೆಟ್ಟ ಮನುಷ್ಯನು, ತನ್ನ ಪ್ರಕೃತಿ ಸಂಬಂಧವಾದ ಸತ್ವರಜಸ್ತಮೋಗುಣಗಳಿಂದ ಮಾಡಲ್ಪಟ್ಟಂಥಾಸಮಸ್ತ ಕರ್ಮವನ್ನೂ, ತಾನೆ ಮಾಡಿದಹಾಗೆ ಎಣಿಸುವನು. ಆದರೆಜ್ಞಾನಿಯಾದವನುಆ ಸತ್ವರಜಸ್ತಮೋಗುಣಗಳು ಅವುಗಳಿಗೆ ಅನುರೂಪವಾದ ಕರ್ಮಗಳನ್ನು ಮಾಡುತ್ತವೆ ಎಂದು ತಿಳಿದು,ಆ ಕರ್ಮಗಳಲ್ಲಿ ತಾನು ಸಂಬಂಧಿಸುವುದಿಲ್ಲ. ಈ ಶರೀರದ ಸತ್ವರಜಸ್ತಮೋಗುಣಗಳಿಂದಕೂಡಿದ ಸ್ವರೂಪಗಳನ್ನು ತಿಳಿಯದಂಥವರು, ಆಗುಣಗಳಿಂದ ಕೂಡಲ್ಪಟ್ಟ ಕರ್ಮಗಳಲ್ಲಿ ಆಸಕ್ತರಾಗುತ್ತಾರೆ. ಆದ್ದರಿಂದಾ ಅಂಥಾ ಮಂದಮತಿಗಳಾದ ಅಜ್ಞಾನಿಗಳನ್ನ, ಸಕಲವನ್ನೂ ತಿಳಿವಂಥಾವರು, ಕರ್ಮಯೋಗದಿಂದಾ ಚಲಿಸುವಂತೆ ಮಾಡಲಾಗದು.ಆತ್ಮೈಕವಿಷಯವಾದ ಮನಸ್ಸಿನಿಂದ ಸಕಲ ಕರ್ಮಗಳನ್ನೂ ನನ್ನಲ್ಲಿ ಸಮರ್ಪಿಸಿಬಿಟ್ಟು, ನಿಷ್ಕಾಮನಾಗಿಯೂ, ಮಮತಾರಹಿತನಾಗಿಯೂ, ವಿಷಯಸಂಬಂಧದಿಂದ ಸಂತಾಪವಿಲ್ಲದವನಾಗಿಯೂ, ಯುದ್ಧವನ್ನುಮಾಡು. ಯಾವ ಜನಗಳು ಈ ನನ್ನ ಸಿದ್ಧಾಂತವನ್ನು ಅನುಸರಿಸಿ ನಿತ್ಯ

ವೂನಡೆಯುತ್ತಾರೆಯೋ, ಹೀಗೆ ನಡಿಯುದೇ ಇದ್ದಾ
ಗ್ಯೂ ಈ ಅಭಿಪ್ರಾಯದಲ್ಲಿ ಆಸ್ತಿಕ್ಯ ಬುದ್ಧಿಯುಳ್ಳ
ವರಾಗಿದ್ಧಾರೆಯೋ, ಆಸ್ತಿಕ್ಯ ಬುದ್ಧಿ ಇಲ್ಲದಿದ್ದರೂ
ದೋಷಹೇಳದೆ ಇರುತ್ತಾರೆಯೋ, ಅಂಥವರೆಲ್ಲರೂ ಸ
ಮಸ್ತವಾದ ಸಂಸ್ಕಾರಕ್ಕೆ ಕಾರಣಭೂತವಾದ ಪುಣ್ಯ
ಪಾಪ ಕರ್ಮಗಳಿಂದಾ ಬಿಡಲ್ಪಡುತ್ತಾರೆ. ಯಾರು
ಈ ನನ್ನ ಅಭಿಮತಾರ್ಥವನ್ನು ಅನುಸರಿಸಿ ,ನಡಿಯು
ವದಿಲ್ಲವ್ರೋ, ನಡಿಯುದೇ ಇದ್ದಾಗ್ಯೂ ದೋಷಾರೂಪ
ವನ್ನಾದರೂ ಮಾಡದೇ, ಇರುವುದಿಲ್ಲವ್ರೋ, ಅಂಥವರ
ನ್ನು ಸರ್ವ್ವಜ್ಞಾನ ಶೂನ್ಯರನ್ನಾಗಿಯೂ, ಭ್ರಾಂತರನ್ನಾ
ಗಿಯೂ, ಅಮನಸ್ಕರನ್ನಾಗಿಯೂ, ತಿಳಿಯಬೇಕು·
ಜ್ಞಾನವಂತನೂಕೂಡ ತನ್ನ ಸ್ವಾಂತವಾಸನಾ ಸಮಂಥ
ಕ್ಕೆಅನುಗುಣವಾಗಿಯೇ ನಡಿಯುವನು. ಯಾಕಂದರೆ
ದೇವಮನುಷ್ಯರೇ ಮೊದಲಾದ ಪ್ರಕೃತಿ ಮಂಡಲವೆ
ಲ್ಲಾ ಪ್ರಾಚೀನವಾಸನಾ ಸಂಮಂಧವಾಗಿಯೇ ನಡಿ
ಯುವದು. ಶಾಸ್ತ್ರದಲ್ಲಿ ಹೇಳಿರುವನಿಗ್ರಹವು ಏನು
ಮಾಡೀತು ? ಜ್ಞಾನೇಂದ್ರಿಯ ವಿಷಯಧಲ್ಲೂ, ಕರ್ಮೇಂ
ದ್ರಿಯ ವಿಷಯದಲ್ಲೂ, ಕಾಮಕ್ರೋಧಗಳು ನಿಶ್ಚಯ
ವಾಗಿವೆ. ಆದ್ದರಿಂದ ಈ ರಾಗದ್ವೇಷದಕ್ಕೆ ಅಧೀನ
ರಾಗಬಾರದು. ಇವೆರಡೂ ಜ್ಞಾನಿಯಾದವನಿಗೆ ದ್ವೇಷಿ
ಯಾದವುಗಳು. ಅಂಗವಿಕಲವಾಗಿದ್ದಾಗ್ಯೂ, ಸ್ವಧ
ರ್ಮವಾದ ಕರ್ಮ ಯೋಗವೇ, ಸಾಂಗವಾಗಿ ಅನು

ಷ್ಠಾನ ಮಾಡಲ್ಪಟ್ಟಂಥಾ ಜ್ಞಾನ ಯೋಗವೆಂಬ ಪರಧರ್ಮಕ್ಕಿಂತಲೂ ಶ್ರೇಷ್ಟವಾದದ್ದು. ಕರ್ಮಯೋಗವಲ್ಲಿ ಫಲವನ್ನು ಹೊಂದುವುದಕ್ಕೆ ಮುಂಚಿತವಾಗಿಯೇ ಮರಣವನ್ನು ಹೊಂದಿದರೂ ಬಾಧಕ ವಿರುವುದಿಲ್ಲಾ. ಆದರೆ ಪರಧರ್ಮವಾದ ಜ್ಞಾನಯೋಗವು ಪ್ರಮಾದದಿಂದಾ ಕೂಡಿದಂಥಾದ್ದಾದ್ದರಿಂದ, ಎಂದಿಗೂ ಅದು ಭಯಹೇತುವಾದದ್ದು."

ಅರ್ಜುನ:—"ಹೇ ವಾರ್ಷ್ಣೇಯ! ಈ ಜ್ಞಾನಯೋಗದಲ್ಲಿ ಪ್ರವೇಶಮಾಡಿದ ಪುರುಷನು, ಸ್ವಲ್ಪವೂ, ಅಪೇಕ್ಷಿಸದೇನೆ, ಯಾವ ಕಾರ್ಯದಿಂದ ಪ್ರೇರಿತನಾಗಿ, ಬಲಾತ್ಕಾರದಿಂದ ಆಜ್ಞಾಪಿಸಲ್ಪಟ್ಟವನಂತೆ, ವಿಷಯಾನುಭವರೂಪವಾದ ಅನರ್ಥವನ್ನು ಹೊಂದುವನು ?"

ಶ್ರೀಭಗವಾನ್:—"ಇದಕ್ಕೆ ಕಾರಣಭೂತವಾದದ್ದು ರಜೋಗುಣದಿಂದುಂಟಾದ ಕಾಮವೇ ಹೊರತು ಮತ್ತು ಬೇರೆ ಅಲ್ಲ. ಈ ಕಾಮವೆಂಬುದೇ ಕಡೆಗೆ ಕ್ರೋಧವಾಗಿ ಪರಿಣಮಿಸುವದು. ಇಷ್ಟೇ ಅಲ್ಲದೆ, ಕೊಂಚ ವಿಷಯಾನುಭವದಿಂದ ಸಮಾಧಾನವನ್ನು ಹೊಂದತಕ್ಕದ್ದಲ್ಲವಾದಂಥಾ, ಅತಿ ಕ್ರೂರವಾದ ಜ್ಞಾನಯೋಗವೈರಿ, ಯೆಂದು ಇದನ್ನು ತಿಳಿಯತಕ್ಕದ್ದು. ಹ್ಯಾಗೆ ಅಗ್ನಿಯು ಹೊಗೆಯಿಂದ ಸುತ್ತಿಕೊಂಡು ಇರುತ್ತದೆಯೋ, ಹ್ಯಾಗೆ ಕನ್ನಡಿಯು ಕೊಳೆಯಿಂದ ಕೂಡಿರುವದೋ, ಹ್ಯಾಗೆ ಗರ್ಭವು ಜರಾಯು, ಅಥ

ವಾ, ಕಸದಿಂದ ಮುಚ್ಚಲ್ಪಟ್ಟು ಇರುತ್ತದೆಯೋ, ಅದೇ ಪ್ರಕಾರ ಈ ಜೀವಕೋಟಿಯೆಲ್ಲಾ ಕಾಮದಿಂದ ಮುಚ್ಚಲ್ಪಟ್ಟಿದೆ. ಅರ್ಜುನನೇ ! ಜ್ಞಾನವುಳ್ಳವನ ಆತ್ಮಜ್ಞಾನವೂಕೂಡ, ತೃಪ್ತಿಪಡಿಸಲು ಅಶಕ್ಯವಾಗಿಯೂ, ಏಂದಿಗೂ ತುಂಬ ಲಾಗದಂಥಾದ್ದಾಗಿಯೂ, ನಿರಂತರ ವಿರೋಧಿಯಾಗಿಯೂ, ಇರುವಂಥಾ ಕಾಮರೂಪಿಯಿಂದ ಮುಚ್ಚಲ್ಪಟ್ಟಿದೆ. ಈ ಕಾಮಕ್ಕೆ ಚಕ್ಷುರಾದಿ ಇಂದ್ರಿಯಗಳು, ಮನಸ್ಸು, ಬುದ್ಧಿ, ಇವೆಲ್ಲಾ ಅಧಿಷ್ಠಾನವೆಂದು ಹೇಳಲ್ಪಡುತ್ತೆ. ಈ ಕಾಮವು ಈ ಇಂದ್ರಿಯಾದಿ ಉಪಕರಣಗಳಿಂದ ಆತ್ಮವಿಷಯಕವಾದ ಜ್ಞಾನವನ್ನು ಸುತ್ತಿಕೊಂಡು, ಈ ದೇಹವುಳ್ಳವನನ್ನು ಮೋಹಗೊಳಿಸುತ್ತದೆ. ಆದ್ದರಿಂದ ನೀನು ಮೊದಲಿನಲ್ಲಿಯೇ ಈ ಇಂದ್ರಿಯಗಳನ್ನು ನಿಗ್ರಹಿಸಿಕೊಂಡು, ಆತ್ಮಸ್ವರೂಪ ಜ್ಞಾನವನ್ನೂ, ಅದರ ವಿವೇಕವಾದಂಥಾ ವಿಜ್ಞಾನವನ್ನೂ, ನಾಶಪಡಿಸುವಂಥಾ ಈ ಕಾಮರೂಪವಾದ ದ್ವೇಷಿಯನ್ನುಪೂರ್ತಿಯಾಗಿ ತೊಲಗಿಸಿ ಬಿಡು. ಇಂದ್ರಿಯಗಳನ್ನ ಜ್ಞಾನವಿರೋಧಿಗಳಲ್ಲಿ ಪ್ರಧಾನವಾಗಿ ಹೇಳುವರು. ಈ ಇಂದ್ರಿಯಗಳಿಗಿಂತ ಮನಸ್ಸು ಹೆಚ್ಚಾದದ್ದೆಂದು ತಿಳಿಯಬೇಕು. ಬುದ್ಧಿಯು ಮನಸ್ಸಿಗೆ ಮಿಂಚಿದ್ದು. ಅಧ್ಯವಸಾಯ ರೂಪವಾದ ಬುದ್ಧಿಗಿಂತಲೂ ಪ್ರಧಾನಭೂತವಾದದ್ದು ಕಾಮವೇ ಹೊರತು ಮತ್ತು ಬ್ಯಾರೆ ಅಲ್ಲ. ಓ ಮಹಾಬಾಹು

ವೇ ! ಈ ಪ್ರಕಾರ ಬುದ್ಧಿಗಿಂತಲೂ ಹೆಚ್ಚಾದ ದ್ವೇಷಿಯು ಕಾಮವೇ ಹೌದೆಂದು ತಿಳಿದು, ಮನಸ್ಸನ್ನು ಅಧ್ಯವಸಾಯದಿಂದ ನಿಶ್ಚಲವಾಗಿ ಮಾಡಿಕೊಂಡು, ಜೈಸಲು ಅಸಾಧ್ಯವಾದಂಥ ಕಾಮರೂಪವಾದ ವೈರಿಯನ್ನು ಸಂಹರಿಸು."

ಈಪ್ರಕಾರಕರ್ಮ ಯೋಗವೆಂಬ ಮೂರನೇ
ಅಧ್ಯಾಯವು ಸಮಾಪ್ತವಾಯಿತು.

ನಾಲ್ಕನೆಯಅಧ್ಯಾಯ. ಕರ್ಮಬ್ರಹ್ಮಾರ್ಪಣಯೋಗ.

ಶ್ರೀ ಭಗವಾನ್:—"ಎಲೈಶತ್ರುಸಂತಾಪಿಯಾದ ಅರ್ಜುನನೆ ! ಈ ಮೇಲೆ ಹೇಳಿದ ಅಪಾಯ ರಹಿತ್ವವಾದ ಕರ್ಮಯೋಗವನ್ನ ಪರಮಕಾರುಣಿಕನಾದ ನಾನೇ ಸೂರ್ಯನಿಗೆ ಉಪದೇಶಿಸಿದೆನು. ಸೂರ್ಯನು ವೈವಸ್ವತಮನುವಿಗೆ ಉಪದೇಶಮಾಡಿದನು. ಆ ಮನುವು ತನ್ನಪುತ್ರನಾದ ಯಿಕ್ಷ್ವಾಕುವಿಗೆ ಉಪದೇಶಿಸಿದನು. ಈ ಪ್ರಕಾರ ಸಂಪ್ರದಾಯ ಕ್ರಮವಾಗಿ ಬಂದಿರುವಂಥಾ ಈ ಕರ್ಮಯೋಗವನ್ನ ಜನಕಾದಿಗಳು ತಿಳಿದಿರುವರು. ಅಂಥಾ ಯೋಗವು ಈ ಲೋಕದಲ್ಲಿ ಬಹುಕಾಲದಿಂದಾ ನಷ್ಟವಾಗಿ ಹೋಗಿತ್ತು. ಈ ಪುರಾತನವಾಗಿಯೂ,ಸಂಪ್ರದಾಯಕ್ರಮವಾಗಿಯೂ, ಬಂದಿರುವಂಥಾ ಯೋಗವನ್ನೆ ಈಗ ನಿನಗೆ ,ನನ್ನ ಭ

ಕ್ತನಾಗಿಯೂ ಸ್ನೇಹಿತನಾಗಿಯೂ ಇದ್ದೀಯೆಂದು ತಿಳಿದು, ಆತ್ಮತಮನಾದ ನನ್ನಿಂದಾ, ಉಪದೇಶವಾಡ ಲ್ಪಟ್ಟಿತು."

ಅರ್ಜುನ:—"ಓ ಕೃಷ್ಣನೆ! ನೀನು ಜನ್ಮ ಎತ್ತಿದ್ದು ಈಗ ನನ್ನ ಜೊತೆಯಲ್ಲಿ, ಸೂರ್ಯನ ಜನ್ಮವು ಬಹು ಕಾಲವುಂ ಚಿತವಾದದ್ದು. ಹೀಗಿರುವಲ್ಲಿ ಈಉ ಪದೇಶವನ್ನ ನೀನೇ ಮೊದಲು ಸೂರ್ಯನಿಗೆ ಮಾಡಿದೆ ಎಂದು ಹ್ಯಾಗೆ ತಿಳಿಯುತಕ್ಕದ್ದು?".

ಶ್ರೀ ಭಗವಾನ್:-"ಅಯ್ಯಾ ಅರ್ಜುನ! ನಿನಗೂ ನನಿಗೂ ಇದುವರಿವಿಗೆ ಅನೇಕ ಜನ್ಮಗಳಾಗಿವೆ. ಅ ದನ್ನೆಲ್ಲಾ ಸರ್ವಜ್ಞನಾದ ನಾನು ಬಲ್ಲೆನು. ಆದರೆ ಕರ್ಮವಶದಿಂದಾ ಸಂಕುಚಿತಜ್ಞಾನ ವುಳ್ಳಂಥಾ ನೀನು ಅರಿಯೆ. ಉತ್ಪತ್ತಿರಹಿತನಾಗಿಯೂ, ನಾಶರಹಿತವಾ ದ ಸ್ವರೂಪ ಉಳ್ಳವನಾಗಿಯೂ, ಸರ್ವಪ್ರಾಣಿಗಳಿ ಗೂ ನಿಯಾಮಕನಾಗಿಯೂ, ಇದ್ದಾಗ್ಯೂ, ನನ್ನ ಸ್ವ ಕೀಯವಾದ ಪ್ರಕೃತಿಯನ್ನ ಹೊಂದಿ, ಸ್ವಸಂಕಲ್ಪದಿಂ ದಲೆ ದೇವಮನುಷ್ಯಾದಿ ಸ್ವರೂಪಗಳನ್ನ ಎತ್ತಿಕೊಂ ಡು, ಅವತಾರವನ್ನು ಮಾಡುವೆನು. ಓ ಅರ್ಜುನ! ಯಾವಾಗ ವರ್ಣಾಶ್ರಮ ಧರ್ಮಗಳಿಗೆ ಹಾನಿ ಉಂ ಟಾಗುತ್ತದೆಯೊ, ಯಾವಾಗ ಅಧರ್ಮಗಳಿಗೆ ಪ್ರಾಬ ಲ್ಯ ಹೆಚ್ಚುವುದೊ, ಆವಾಗ ಕರ್ಮಾಧೀನವಲ್ಲದ, ನನ್ನ ಸ್ವಂತ ಸಂಕಲ್ಪದಿಂದಲೇ, ಅವತರಿಸುವೆನು. ಸಾಧು

ಜನಗಳನ್ನು ರಕ್ಷಿಸುವುದಕ್ಕಾಗಿಯೂ, ದುಷ್ಟಜನ ಗಳನ್ನು ಶಿಕ್ಷಿಸುವುದಕ್ಕಾಗಿಯೂ, ವೈದಿಕಧರ್ಮಗ ಳನ್ನು ಚನ್ನಾಗಿ ಸ್ಥಾಪಿಸುವುದಕ್ಕಾಗಿಯೂ, ಪ್ರತಿ ಯುಗದಲ್ಲಿಯೂ ಅವತರಿಸುವೆನು. ಈ ಪ್ರಕಾರವಾಗಿ ನನ್ನಜನ್ಮವು ಕರ್ಮಬದ್ಧವಲ್ಲವೆಂದೂನ್ನೂ, ನನ್ನ ಕ ರ್ಮವೂ ಕೂಡ ಪೂರ್ವವಾಸನಾ ಸಂಬಂಧವಾದ್ದಲ್ಲ ವೆಂದೆನ್ನೂ, ಕೇವಲ ಪರಮಾನುಗ್ರಹ ರೂಪವಾದದ್ದು ಎಂದು ಯಾವ ಪುರುಷನು ತಿಳಿಯುವನೋ, ಅಂಥಾ ಪುರುಷನು ಈ ದೇಹವನ್ನು ಬಿಟ್ಟುಹೋದನಂತರ ಪುನರ್ಜನ್ಮವನ್ನು ಹೊಂದದೆ, ಪರಮಪ್ರಾಪ್ಯನಾದ ನನ್ನನ್ನೇ ಹೊಂದುವನು. ಈ ನನ್ನ ಅವತಾರರಹಸ್ಯ ವಿಷಯಕವಾದ ತಪಸ್ಸಿನಿಂದ ಪರಿಶುದ್ಧವಾದಂಥಾ ಅನೇಕ ಪುರುಷರು ಸರ್ವೇಶ್ವರನಾದ ನನ್ನನ್ನು ಚ ನ್ನಾಗಿ ಆಶ್ರಯಿಸಿ, ಆದುದರಿಂದಲೆ ರಾಗದ್ವೇಷ ಭ ಯರಹಿತರಾಗಿ, ಯಾವಾಗಲೂ ನನ್ನನ್ನೇ ಧ್ಯಾನಿ ಸಿಕೊಂಡು, ನನ್ನ ಸಾಯುಜ್ಯವನ್ನೇ ಹೊಂದುವ ರು. ಯಾವ ಮನುಷ್ಯನು ಯಾವ ಪ್ರಕಾರ ನ ನ್ನನ್ನು ಆಶ್ರಯಿಸುವನೊ, ನಾನು ಅವನಿಗೆ ಅದೇ ಪ್ರಕಾರವಾಗಿ ಕಾಣಿಸಿಕೊಂಡು ಅನುಗ್ರಹಿಸುವೆ ನು. ಆದ್ದರಿಂದಾ ಎಲೈಪಾರ್ಥ! ನನ್ನನ್ನೇ ಅನುಸ ರಿಸಿ ನಡಿಯುವ ಮನುಷ್ಯರು ಸರ್ವಪ್ರಕಾರದಲ್ಲಿ ಯೂ ನನ್ನನ್ನೇ ಅನುಭವಿಸುವರು. ಈ ಲೋಕದಲ್ಲಿ,

ಸಮಸ್ತ ಪುರುಷರೂ ಕರ್ಮಫಲವನ್ನ ಅಪೇಕ್ಷಿಸಿ ಅಲ್ಲವೆ ಯಿಂದ್ರಾದಿ ದೇವತೆಗಳನ್ನ ಆರಾಧಿಸುವರು. ಯಾಕಂದರೆ, ಈ ಭೂಲೋಕದಲ್ಲಿ ಪುತ್ರ, ಪಶು, ಅನ್ನಾದಿ ರೂಪಕರ್ಮ ಫಲವು ಶೀಘ್ರದಲ್ಲಿಯೆ ಉಂಟಾಗುತ್ತದೆ. ಆದ್ದರಿಂದಾ ಮೋಕ್ಷಾ ಪೇಕ್ಷೆಯಿಂದ ನನ್ನನ್ನೇ ಆರಾಧಿಸುವಂಥಾ ಕರ್ಮಯೋಗವನ್ನು ಯಾರೂ ಆರಂಭಿಸುವದಿಲ್ಲಾ. ಸತ್ವರಜಸ್ತ ಮೋಗುಣಾನುಸಾರವಾದ ಕರ್ಮ ವಿಭಾಗದಿಂದಾ ಕೂಡಿ ನಾಲ್ಕು ವರ್ಣಗಳು ಸರ್ವೇಶ್ವರನಾದ ನನ್ನಿಂದಲೇ ಸೃಷ್ಟಿಸಲ್ಪಟ್ಟವು. ಜಗತ್ ಸೃಷ್ಟ್ಯಾದಿಗಳ ಕರ್ತಾ ವಿಕಾರರಹಿತನಾದಂಥಾ, ಅತಏವಫಲಾಪೇಕ್ಷೆ ಇಲ್ಲದ್ದರಿಂದಾ ಕರ್ತೃತ್ವವಿಲ್ಲದಂಥಾ, ನಾನೆ ಎಂದು ತಿಳಿ. ಸೃಷ್ಟ್ಯಾಯೆ ಮೊದಲಾದ ಕರ್ಮಗಳು ನನ್ನನ್ನು ನಿರ್ಬಂಧಿಸುವದಿಲ್ಲ. ಅವಾಪ್ತ ಸಮಸ್ತ ಕಾಮನಾದಂಥಾ ನನಿಗೆ ಕರ್ಮ ಫಲದಲ್ಲಿ ಆಸೆಯೂ ಇಲ್ಲ. ಎಂಬ ಈ ಪ್ರಕಾರವಾಗಿ ನನ್ನನ್ನು ಯಾರು ಚನ್ನಾಗಿ ತಿಳಿಯುವರೋ ಅವರು ಪುಣ್ಯಪಾಪ ರೂಪವಾದ ಕರ್ಮಗಳಿಂದಾ ಬಾಧಿಸಲ್ಪಡುವದಿಲ್ಲ. ಪ್ರಾಚೀನರಾದಂಥ, ಮೋಕ್ಷಾಪೇಕ್ಷೆಯುಳ್ಳ ಇಕ್ಷ್ವಾಕು ಪ್ರಭೃತಿಗಳಿಂದಾ ಈ ಪ್ರಕಾರವಾದ ಜ್ಞಾನದಿಂದಾ ಕರ್ಮಯೋಗವು ಆಚರಿಸಲ್ಪಟ್ಟಿತು. ಆದ್ದರಿಂದಾ ನೀನೂಕೂಡ ಪ್ರಾಚೀನರುಗಳಿಂದ ಅನುಷ್ಟಿಸಲ್ಪಟ್ಟ ಪುರಾತನವಾದ ಕರ್ಮಯೋಗವ

ನ್ನೇ ಅನುಸರಿಸು. ಮೋಕ್ಷಾಪೇಕ್ಷೆಯುಳ್ಳವನಿಂದ ಮಾಡತಕ್ಕ ಕಾರ್ಯವು ಯಾವದು, ಕರ್ಮವಲ್ಲದ ಜ್ಞಾನವು ಯಾವುದು, ಎಂಬ ಈ ವಿಷಯವನ್ನ ಅರಿಯದೆ, ಮಹಾಪಂಡಿತರೂ ಕೂಡ ಮೋಹಗೊಳ್ಳುತ್ತಾರೆ. ಆದ್ದರಿಂದಾ ಈಗ ನಾನು ನಿನಗೆ ಆ ಕರ್ಮ, ಜ್ಞಾನಗಳನ್ನು ಉಪದೇಶಿಸುವೆನು. ಈ ಉಪದೇಶವನ್ನ ನೀನು ಚನ್ನಾಗಿ ತಿಳಿದುಕೊಂಡು, ಆರೀತಿ ಆಚರಿಸಿದ್ದೇ ಆದರೆ, ಶೀಘ್ರದಲ್ಲಿಯೆ ಸಂಸಾರ ಭಂದದಿಂದಾ ಬಿಡಲ್ಪಡುವಿ. ಮೋಕ್ಷಕಾಮಿಯು ಯಾವ ಕರ್ಮವನ್ನ ಅನುಷ್ಠಿಸಬೇಕೆಂದು ತಿಳಿದುಕೊಳ್ಳುವುದು ಬಹಳ ಕಷ್ಟವಾದ್ದರಿಂದಾ, ಮೋಕ್ಷಸಾಧನವಾದ ಸತ್ಕರ್ಮದ ಸ್ವರೂಪವನ್ನೂ, ಅಲ್ಪ ಫಲಪ್ರದವಾದ ನಿತ್ಯನಯಿಮಿತ್ತಿಕ ಕಾಮ್ಯಕರ್ಮಗಳ ಸ್ವರೂಪವನ್ನೂ, ಕರ್ಮಕ್ಕಿಂತಲೂ ಬೇರೆಯಾದ ಆತ್ಮಸ್ವರೂಪ ಜ್ಞಾನವನ್ನೂ, ಚನ್ನಾಗಿ ತಿಳಿದುಕೊಳ್ಳಬೇಕು. ಯಾವ ಮನುಷ್ಯನು ಕರ್ಮದಲ್ಲಿ ಆತ್ಮಜ್ಞಾನವನ್ನು ಮಾಡುವನೊ, ಆತ್ಮಜ್ಞಾನದಲ್ಲಿ ಕರ್ಮಭಾವನೆಯನ್ನು ಮಾಡುವನೊ, ಅಂಥವನೆ ಬುದ್ಧಿವಂತನೂ ಅಲ್ಲದೆ, ಮನಸ್ಸಮಾಧಾನವುಳ್ಳಂಥಾ ಯೋಗಿಯೂ ಹೌದೆಂದು ತಿಳಿಯತಕ್ಕದ್ದು. ಇಂಥವನೆ ಸಮಸ್ಥ ಕರ್ಮವನ್ನು ಅನುಷ್ಠಿಸಿದವನೆಂದು ತಿಳಿಯಬೇಕು. ಯಾವ ಪುರುಷನು ತಾನು ಮಾಡುವ ಸಮಸ್ತ ಕಾರ್ಯವನ್ನೂ ಫಲಾಪೇಕ್ಷೆಯಿ

ಲ್ಲದೆಯೂ, ತಾನು ಮಾಡಿದ್ದೆಂಬ ಅಹಂಕಾರವಿಲ್ಲದೆ ಯೂ, ಸತ್ವರಜಸ್ತಮೋಗುಣಗಳಿಂದಾ ಉಂಟಾದ್ದೆಂದು ಎಣಿಸುವನೋ, ಅಂಥಾಪುರುಷನ ಪರಮಾತ್ಮಜ್ಞಾನವೆಂಬ ಈಅಗ್ನಿಯಿಂದಾ ಸುಟ್ಟು, ನಷ್ಟವಾಗಿ ಹೋದಂಥಾ ಪ್ರಾಚೀನಕರ್ಮವನ್ನು ಉಳ್ಳವನೆಂತಲೂ, ಜ್ಞಾನಿಯೆಂತಲೂ, ವಿವೇಕಿಗಳು ಹೇಳುವರು. ಕರ್ಮದಲ್ಲಿ ಫಲಾಪೇಕ್ಷೆಯನ್ನು ಬಿಟ್ಟು, ಆತ್ಮಜ್ಞಾನದಿಂದಾ ಸದಾ ಸಂತುಷ್ಟಚಿತ್ತನಾಗಿ, ಯಾರನ್ನೂ ಆಶ್ರಯಿಸದೆ, ಯಾವನು ಇರುವನೊ ಅವನು ಯಾವ ಕರ್ಮದಲ್ಲಿ ಪ್ರವರ್ತಿಶಿದಾಗ್ಯೂ, ಯಾವದನ್ನೂ ಅಂಟಸಿಕೊಳ್ಳದಂತೆ, ಯಾವ ಕರ್ಮ ಫಲಕ್ಕೂ ಗುರಿಯಾಗುವುದಿಲ್ಲಾ. ಯಾವ ಆಶೆಯೂ ಇಲ್ಲದಂತೆ ಇಂದ್ರಿಯಂಗಳನ್ನ ಸ್ವಾಧೀನ ಮಾಡಿಕ್ಕೊಂಡು, ಯಾವನಶ್ವರವಾದವಸ್ತುವಿನಲ್ಲಿಯೂ ಅಭಿಮಾನವನ್ನಿಡದೆ, ಶರೀರಧಾರಣಮಾತ್ರ ಪ್ರಯೋಜನವಾದ ಕರ್ಮವನ್ನು ಮಾಡಿಕ್ಕೊಂಡು, ಯಾವನಿರುವನೊ ಅವನು ಯಾವಪಾಪಕ್ಕೂ ಗುರಿಯಾಗುವುದಿಲ್ಲಾ. ತನಗೆ ತಾನಾಗಿ ಲಭಿಸಿದಂಥಾ ಪದಾರ್ಥದಲ್ಲಿಯೇ ತೃಪ್ತಿಹೊಂದಿ, ಶೀತ, ಉಷ್ಣ, ಸುಖ, ದುಃಖವೆಂಬ ಭೇದವನ್ನ ಗಣನೆಯಲ್ಲಿಡದೆ, ಅದನ್ನ ಜಯಿಸಿದವನಾಗಿ, ಹೊಟ್ಟೇಕಿಚ್ಚು ಇಲ್ಲದಂಥಾ, ಕಾರ್ಯ ಫಲಸಿದ್ಧಿಸಿದರೂ ಸಿದ್ಧಿಸದಿದ್ದರೂ ಹರುಷ ಶೋಕರಹಿತನಾಗಿರುವ ಮನುಷ್ಯನು, ಸಮ

ಚಿತ್ತನಾಗಿ ಇರುವನು. ಯಾವಕರ್ಮವನ್ನು ಮಾಡಿದ ರೂ ಅವನು ಆ ಕರ್ಮಕ್ಕೆ ಬದ್ಧಪಡುವುದಿಲ್ಲಾ. ಕರ್ಮ ಸಂಮಂಧವನ್ನು ಬಿಟ್ಟು, ಫಲಾಪೇಕ್ಷೆಯೂ ದೇಹಾಭಿ ಮಾನವೂ ಇಲ್ಲದ ಮುಕ್ತನಿಗೂ, ಆತ್ಮಜ್ಞಾನದಲ್ಲಿ ಸ್ಥಿ ರೀಕರಿಸಿರುವ ಮನಸ್ಸುಳ್ಳವನಿಗೂ, ಯಾವ ಕರ್ಮವ ನ್ನೂ ಭಗವತ್ಪ್ರೀತ್ಯರ್ಥವಾಗಿಮಾಡುವ ಜ್ಞಾನಿಗೂ, ಪ್ರಾಚೀನ ಕರ್ಮ ಯಾವದೂ ಇರುವುದಿಲ್ಲಾ. ಬ್ರಹ್ಮ ಮಯವಾ ದಹೋಮಸಾಧನವಾದಂಥಾ ಪಾತ್ರಗಳಿಂ ದಿ ಕೂಡಿರುವ, ಬ್ರಹ್ಮಮಯವಾದ ಹೋಮಮಾಡಲ್ ಪಡುವವಸ್ತುವಾದ ಹವಿಸ್ಸು, ಬ್ರಹ್ಮ ಸ್ವರೂಪವಾದ ಅಗ್ನಿಯಲ್ಲಿ. ಅದೇ ಬ್ರಹ್ಮಸ್ವರೂಪನಾದ ಕರ್ತನಾ ಗಿರ್ರುವ ಮನುಷ್ಯನಿಂದ, ಹೋಮಮಾಡಲ್ ಪಟ್ಟ ದ್ದೆಂದು ಯಾವ ಮನುಷ್ಯನು ತಿಳಿಯುವನೋ, ಆ ಪುರುಷನು ಸಕಲವನ್ನೂ ಬ್ರಹ್ಮಸ್ವರೂಪವನ್ನಾಗಿ ಯೇ ತಿಳಿಯುವದರಿಂದ, ಪರಮಾತ್ಮನನ್ನೇ ಹೊಂದುವ ನು. ಕೆಲವು ಕರ್ಮಠರಾದ ಯೋಗಿಗಳು ದೇವತಾರಾ ಧನ ಸ್ವರೂಪವಾದ ಯಜ್ಞವನ್ನು ಮಾಡುವರು. ಮ ತ್ತು ಕೆಲವರು ಯಜ್ಞಸಾಧನವಾದ ಹವಿಸ್ಸನ್ನು, ಯ ಜ್ಞೋಪಕರಣವಾದ ಪಾತ್ರವಿಶೇಷದಿಂದ, ಬ್ರಹ್ಮಸ್ವ ರೂಪವಾದ ಅಗ್ನಿಯಲ್ಲಿ ಹೋಮಮಾಡುವರು. ಇ ನ್ನೂ ಕೆಲವರು ಕರ್ಣೇಂದ್ರಿಯವೇ ಮೊದಲಾದವುಗಳ ವಾನ್ನು ಸ್ತಗಿಬ ನಿಲ್ಲಿಸಿಕೊಳ್ಳುವಿಕೆ ಎಂಬ ಅಗ್ನಿಯ

ಲ್ಲಿ ಹೋಮ ಮಾಡುತ್ತಾರೆ. ಅನ್ಯರುಶಬ್ದವೆ ಮೊದಲಾದ ವಿಷಯುಗಳನ್ನ ಇಂದ್ರಿಯುಗಳೆಂಬ ಅಗ್ನಿಯಲ್ಲಿ ಹೋಮ ಮಾಡುತ್ತಾರೆ. (ಅಂದರೆ ಶಬ್ದಾದಿ ವಿಷಯುಗಳಲ್ಲಿ ಇಂದ್ರಿಯುಗಳನ್ನ ಯಥೇಚ್ಛವಾಗಿ ಬಿಡರು ಎಂಬ ತಾತ್ಪರ್ಯ.) ಜ್ಞಾನಿಗಳಾದ ಯೋಗಿಗಳು ಸಮಸ್ತವಾದ ಕರ್ಮೇಂದ್ರಿಯಜ್ಞಾನೇಂದ್ರಿಯ ವ್ಯಾಪಾರಗಳನ್ನೂ, ಪ್ರಾಣಕರ್ಮವಾದ ವಾಯುವ್ಯಾಪಾರಗಳನ್ನೂ, ಜ್ಞಾನದಿಂದ ಪ್ರಕಾಶಿಸುವ, ಮನಸ್ಥಿರೀಕರಣ ಮಾಡುವುದು ಎಂಬ ಯೋಗಾಗ್ನಿಯಲ್ಲಿ ಹೋಮ ಮಾಡುವರು. ಮತ್ತು ಕೆಲವರು ಹಣವನ್ನಯಾಚಿಸುವರಿಗೆ ಕೊಡುತ್ತಾ,ದ್ರವ್ಯದಾನವೆಂಬಯಜ್ಞವನ್ನೇ ಮಾಡುವರು. ಇನ್ನೂ ಕೆಲವರು ತಪಸ್ಸು ಮಾಡಿಕೊಂಡು, ಅದನ್ನು ಭಗವಂತನಿಗೆ ಅರ್ಪಿಸಿ, ಅದೇಯಜ್ಞವೆಂದು ಎಣಿಸಿಕೊಂಡು ಇರುವರು. ಮತ್ತು ಇತರರು ಯೋಗನಿಷ್ಠೆಯಲ್ಲಿ ಇರುವನಿ ಯಜ್ಞವನ್ನಾಗಿ ಭಾವಿಸುವರು. ಕೆಲವರುವೇದಾಧ್ಯಯನ ಮೊದಲಾದ ಜ್ಞಾನವಿಚಾರವನ್ನ ಯಜ್ಞವನ್ನಾಗಿ ಭಾವಿಸುವರು. ಈಮೇಲೆ ಹೇಳಿದವರೆಲ್ಲಾ ದೃಢಪ್ರತಿಜ್ಞೆಯನ್ನು ಉಳ್ಳಂಥವರು. ಕೆಲವರು ಪ್ರಾಣಾಯಾಮಮಾಡುವದರಲ್ಲಿ ಆಸಕ್ತರಾಗಿದ್ದುಕೊಂಡು, ಪ್ರಾಣವೇನು, ಅಪಾನವೇನು, ಇವೇ ಮೊದಲಾದವುಗಳ ಸಂಚಾರವನ್ನೆ ತಡೆಮಾಡಿ, ಪ್ರಾಣವಾಯುವನ್ನ ಅಪಾನವಾಯುವಿನಲ್ಲಿ ಹೋ

ಮಮಾಡುವರು. ಅಪಾನವಾಯುವನ್ನು ಪ್ರಾಣವಾಯುವಿನಲ್ಲಿ ಹೋಮಮಾಡುವರು. ಆಹಾರ ನೇಮವುಳ್ಳಂಥಾ ಕೆಲವರು ಪ್ರಾಣವಾಯುವಿನಲ್ಲೆ ಹೋಮ ಮಾಡವರು. ಮೇಲೆ ವಿವರಿಸಿದ ಇವರೆಲ್ಲರೂ ಯಜ್ಞವು ಯಿಂಥಾದ್ದೆಂದು ಅರಿತು, ಆ ಯಜ್ಞದಿಂದ ಅವರ ಸಮಸ್ತ ಪಾಪವನ್ನೂ ಹೋಗಲಾಡಿಸಿಕೊಂಡಂಥವರು. ಇವರು ಯಜ್ಞಶೇಷವಾದಂಥಾ ಪರಿಶುದ್ಧವಾದ ಅನ್ನವನ್ನುತಿಂದು, ಸಾಕ್ಷಾತ್ತಾದ ಪರಬ್ರಹ್ಮನನ್ನೇ ಹೊಂದುವರು. ಹೀಗೆ ಯಜ್ಞವನ್ನು ಮಾಡದೆ ಇರುವನಿಗೆ ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ. ಈ ಪ್ರಕಾರವಾಗಿ ಬಹುವಿಧವಾದ ಯಜ್ಞಗಳು ಬ್ರಹ್ಮನಿಂದಲೇ ವೇದದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟವೆ. ಅವುಗಳನ್ನೆಲ್ಲಾ ಕರ್ಮಸಂಮಂಧವಾದದ್ದೆಂದು ತಿಳಿ. ಈ ಪ್ರಕಾರ ತಿಳಿದು ಅನುಷ್ಠಿಸಿದ್ದೇ ಆದರೆ ಕರ್ಮದಿಂದ ಬಿಡಲ್ಪಡುವಿ. ಎಲೈ ಶತ್ರು ಸಂತಾಪಿಯಾದ ಅರ್ಜುನನೆ! ಹಣಪ್ರಧಾನವಾದ ಈ ಯಜ್ಞಗಳಿಗಿಂತಲೂ ಜ್ಞಾನಯಜ್ಞವೇ ಶ್ರೇಷ್ಠವಾದದ್ದು. ಸಮಸ್ತವಾದ ಕರ್ಮವೂ ಜ್ಞಾನದಲ್ಲಿ ಪೂರ್ತಿಯನ್ನು ಹೊಂದುವುದು. ತತ್ವಾರ್ಥವನ್ನು ಅರಿತ ಜ್ಞಾನವಂತರು ಆ ಪರಮಾತ್ಮಕ ವಿಷಯವಾದ ಜ್ಞಾನವನ್ನು ಸಾಷ್ಟಾಂಗವಾಗಿ ನಮಸ್ಕರಿಸುವಂಥವರಿಗೂ, ಶೋಧಿಸಿ ಪ್ರಶ್ನೆಮಾಡುವಂಥವರಿಗೂ, ಅಕ್ಕರೆಇಂದ ಉ

ಪಚಾರಗಳನ್ನು ಮಾಡುವಂಥವರಿಗೂ, ಉಪದೇಶ ಮಾಡುವರು. ಅವರಿಂದ ಜ್ಞಾನಸಂಪಾದನೆಯನ್ನು ಮಾಡಿದ ನಂತರ, ಈ ಪ್ರಕಾರಮೋಹವನ್ನು ಹೊಂದಲಾರೆ. ಈ ಜ್ಞಾನದಿಂದ ಸಮಸ್ತಪ್ರಾಣಿಗಳನ್ನೂ ನಿನ್ನಲ್ಲಿನೋಡುವಿ. ನಂತರ ಅವುಗಳನ್ನೆಲ್ಲಾ ನನ್ನಲ್ಲಿಯೂ ನೋಡುವಿ. ಒಂದುವೇಳೆ ನೀನು ಬಹುಪಾಪಿಯಾಗಿ ಕೆಟ್ಟತಪ್ಪಿತಗಳನ್ನೆಲ್ಲಾ ಮಾಡಿದ್ದಾಗ್ಯೂ, ಈ ಪಾಪವೆಂಬ ಜಲರಾಶಿಯನ್ನು, ಜ್ಞಾನವೆಂಬ ನಾವದ ಸಹಾಯದಿಂದ, ದಾಟಕೊಂಡು ಹೋಗುವಿ. ಒಂದೇ ಸಿಧಾನವಾಗಿ ಜ್ವಲಿಸುವ ಅಗ್ನಿಯು ಕಟ್ಟಿಗೆಗಳನ್ನು ಹ್ಯಾಗೆ ಭಸ್ಮಮಾಡುವದೋ ಹಾಗೆಯೇ, ಜ್ಞಾನಾಗ್ನಿಯೂ ಕೂಡ ಸಮಸ್ತ ಕರ್ಮಗಳನ್ನೂ ನಾಶಮಾಡುವದು. ಈ ಲೋಕದಲ್ಲಿ ಜ್ಞಾನದಷ್ಟು ಪರಿಶುದ್ಧವಾದಂಥಾದ್ದು ಯಾವದೂ ಇಲ್ಲ. ಆದುದರಿಂದ ಯೋಗಾಭ್ಯಾಸದಲ್ಲಿ ಶುದ್ಧಿಯನ್ನು ಹೊಂದಿದವನು ಬಹುಕಾಲಾನಂತರವೇ ಆತ್ಮಸ್ವರೂಪಜ್ಞಾನವನ್ನು ಹೊಂದುವನು. ಅಕ್ಕರೆಯುಳ್ಳ ಪುರುಷನು ಜ್ಞಾನವನ್ನು ಸಂಪಾದಿಸುವುದರಲ್ಲಿ ಆಸಕ್ತಿಯುಳ್ಳವನು. ಇಂದ್ರಿಯ ನಿಗ್ರಹ ಮಾಡಿಕೊಂಡಿರುವ ಪುರುಷನು ಪರಮಾತ್ಮಜ್ಞಾನವನ್ನು ಹೊಂದುವನು.

ಈ ಜ್ಞಾನವನ್ನು ಹೊಂದಿದನಂತರ ಶ್ಲಾಘ್ಯವಾದ ಮೋಕ್ಷವನ್ನು ಶೀಘ್ರದಲ್ಲಿಲ್ಲಿಯೆ ಹೊಂದುವನು.

ಜ್ಞಾನಸಂಪಾದನೆಯನ್ನು ಮಾಡದವನೂ, ಜ್ಞಾನೋಪದೇಶವಾಗಿ ಇದ್ದರೂ ಅದರಲ್ಲಿ ಶ್ರದ್ಧೆ ಇಲ್ಲದವನೂ, ಸಂಶಯ ಸ್ವಭಾವವನ್ನು ಉಳ್ಳವನೂ, ಇವರೆಲ್ಲರೂ ನಾಶವನ್ನು ಹೊಂದುವರು. ದೃಢವಾದ ನಂಬಿಕೆಯಿಲ್ಲದೆ, ಎಲ್ಲಾ ವಿಷಯಗಳಲ್ಲಿಯೂ ಸಂದೇಹಪಡುವಂಥವನಿಗೆ, ಇಹಲೋಕವೂ ಇಲ್ಲ, ಪರಲೋಕವೂ ಇಲ್ಲ, ಯಾವಸುಖವೂ ಅವನಿಗೆ ಇಲ್ಲ. ಎಲೈ ಅರ್ಜುನ! ಕರ್ಮದಲ್ಲಿ ಜ್ಞಾನಬುದ್ಧಿಯನ್ನು ಮಾಡಿ, ಕರ್ಮಬುದ್ಧಿಯನ್ನು ಬಿಟ್ಟು, ಜ್ಞಾನೋಪದೇಶದಿಂದ ಕತ್ತರಿಸಲ್ಪಟ್ಟ ಸಂಶಯವನ್ನು ಉಳ್ಳವನಾಗಿ, ಪರಮಾತ್ಮನಲ್ಲಿ ವಿಶ್ವಾಸವನ್ನುಳ್ಳ ಮನುಷ್ಯನನ್ನು ಕರ್ಮವು ಬಾಧಿಸಲಾರದು. ಆದ್ದರಿಂದ ಭಾರತ ವಂಶೋದ್ಭವನಾದ ಅರ್ಜುನನೇ! ಅಜ್ಞಾನದಿಂದುಂಟಾಗಿ, ನಿನ್ನ ಹೃದಯದಲ್ಲಿ ನಾಟಿರುವ ಈ ಸಂಶಯವನ್ನು, ಜ್ಞಾನವೆಂಬುವ ಖಡ್ಗದಿಂದ ಛೇದಿಸಿ, ನಾನು ನಿನಗೆ ಇದುವರಿವಿಗೂ ಉಪದೇಶಿಸಿದ ಕರ್ಮ ಯೋಗವನ್ನು ಅನುಸರಿಸು. ಅದಕ್ಕಾಗಿ ಯುದ್ಧಸನ್ನದ್ಧನಾಗಿ ಏಳು.

ಈ ಪ್ರಕಾರವಾಗಿ ಜ್ಞಾನಯೋಗವೆಂಬ ನಾಲ್ಕನೆಯಅಧ್ಯಾಯವು ಸಮಾಪ್ತವಾಯಿತು.

ಕರ್ಮಸನ್ಯಾಸ ಯೋಗವೆಂಬ ಐದನೇ ಅಧ್ಯಾಯಪ್ರಾರಂಭ.

ಅರ್ಜುನ:—ಅಯ್ಯಾ ಕೃಷ್ಣ! ಕರ್ಮತ್ಯಾಗವನ್ನೂ, ಪುನಃ ಕರ್ಮಯೋಗವನ್ನೂ, ಉಪದೇಶಿಸುತ್ತೀ. ಇವೆರಡರಲ್ಲಿ ಯಾವ ಒಂದು ಶ್ರೇಷ್ಟವಾದದ್ದು ಎಂದು ನಿಶ್ಚಯಿಸಲ್ಪಟ್ಟಿದೆಯೋ ಆ ಒಂದನ್ನು ನನಗೆ ತಿಳಿಸು.

ಶ್ರೀಭಗವಾನ್:—ಕರ್ಮ ಸನ್ಯಾಸವೆಂಬ ಜ್ಞಾನಯೋಗವೂ, ಕರ್ಮಯೋಗವೂ, ಇವೆರಡೂ ಮೋಕ್ಷಸಾಧನಗಳಾದವುಗಳೇ ಸರಿ. ಆದಾಗ್ಯೂ ಜ್ಞಾನಯೋಗಕ್ಕಿಂತಲೂ ಕರ್ಮಯೋಗವೇ ಶ್ರೇಷ್ಠವಾದದ್ದು. ಎಲೈ ಅರ್ಜುನ! ಯಾವ ಮನುಷ್ಯನು ಯಾವ ಒಂದನ್ನೂ ದ್ವೇಷಿಸದೆಯೂ, ಅಪೇಕ್ಷಿಸದೆಯೂ, ಇದ್ದಾನೆಯೋ, ಯಾವ ಪುರುಷನು ಸುಖ, ದುಃಖ, ಲಾಭ, ನಷ್ಟ, ಎಂಬ ಭೇದ ಇಲ್ಲದೆಇಥಾನೆಯೋ, ಅಂಥವನನ್ನ ಜ್ಞಾನಯೋಗದಲ್ಲಿ ಇರುವ ನಿತ್ಯ ಸನ್ಯಾಸಿಎಂದು ತಿಳಿಯತಕ್ಕದ್ದು. ಅಂಥವನು ಸುಲಭವಾಗಿಯೇ ಕರ್ಮದಿಂದ ಬಿಡಲ್ಪಡುವನು. ಕರ್ಮಯೋಗ ಜ್ಞಾನಯೋಗವೆಂಬ ಈ ಎರಡು ಯೋಗಗಳೂ ಬೇರೆಬೇರೆ ಫಲವನ್ನ ಕೊಡುವಂಥವುಗಳು ಎಂದು ಅಜ್ಞಾನಿಗಳಾದ ಬಾಲರು ಹೇಳುವರು. ಜ್ಞಾನಿಗಳಾದ ಪಂಡಿತರು ಹಾಗೆ ಎಂದಿಗೂ ಹೇಳರು. ಈ ಎರಡು ಯೋಗದಲ್ಲಿ

ಯಾವ ಒಂದನ್ನ ಚನ್ನಾಗಿ ಆಶ್ರಯಿಸಿದರೂ, ಆ ಎರಡ ಕ್ಕೂ ಸಮಾನವಾದಂಥಾ ಒಂದೇ ಫಲವನ್ನು ಹೊಂದು ವನು. ಜ್ಞಾನಯೋಗದಿಂದ ಯಾವ ಪದವಿಯನ್ನ ಹೊಂ ದಬಹುದೋ, ಅದೇ ಪದವಿಯನ್ನ ಕರ್ಮಯೋಗ ದಿಂದಲೂ ಹೊಂದಬಹುದು. ಜ್ಞಾನಯೋಗವೂ ಕ ರ್ಮಯೋಗವೂ ಒಂದೇ ವಿಧವಾದ ಫಲವನ್ನುಂಟು ಮಾಡುವುವೆಂದು ಯಾವನು ಚನ್ನಾಗಿ ತಿಳಿಯುವ ನೋ, ಅವನೇ ಜ್ಞಾನಿ ಯೆನಿಸಿಕೊಳ್ಳುವನು. ಎಲೈ ಅ ರ್ಜುನ! ಸನ್ಯಾಸವೆಂಬ ಜ್ಞಾನಯೋಗವು, ಕರ್ಮ ಯೋಗವಿಲ್ಲವೆಂಬುದರಿಂದಲೇ ಉಂಟಾಗಲಾರದು. ಕ ರ್ಮಯೋಗಿಯಾದ ಧ್ಯಾನಶೀಲನು, ಶೀಘ್ರದಲ್ಲಿಯೇ ಆತ್ಮಾವಲೋಕನವನ್ನು ಹೊಂದುವನು. ಕರ್ಮಯೋ ಗಿಯಾಗಿಯೂ, ಪರಿಶುದ್ಧಮನಸ್ಕನಾಗಿಯೂ, ಮನ ಸ್ಸನ್ನೂ, ಇಂದ್ರಿಯಗಳನ್ನೂ ನಿಗ್ರಹ ಮಾಡಿದವನಾ ಗಿಯೂ, ಸಮಸ್ತ ಭೂತಗಳಲ್ಲಿಯೂ ಹೊಕ್ಕಿರುವ ಆತ್ಮವು ಒಂದೆ ಎಂದು ಎಲ್ಲಾ ಪ್ರಾಣಿಗಳಲ್ಲಿಯೂ ಸ ಮಾನಜ್ಞಾನವುಳ್ಳವನು, ಯಾವ ಕರ್ಮವನ್ನು ಮಾಡಿದ ದರೂ ಕರ್ಮ ಬದ್ಧನಾಗುವದಿಲ್ಲಾ. ತತ್ವಜ್ಞಾನಿ ಯಾದ ಯೋಗಿಯು ಯಾವದನ್ನ ಕಣ್ಣಿಂದ ನೋಡಿ ದರೂ, ಕಿವಿಯಿಂದ ಕೇಳಿದರೂ, ಚರ್ಮದಿಂದ ಮು ಟ್ಟಿದರೂ,ಮೂಗಿನಿಂದ ವಾಸನಾಗ್ರಹಣ ಮಾಡಿದರೂ, ಭುಜಿಸಿದರೂ, ನಿದ್ರೆಮಾಡಿದರೂ, ಶ್ವಾಸಬಿಟ್ಟರೂ,

ಮಾತನಾಡಿದರೂ, ಮಲಮೂತ್ರ ವಿಸರ್ಜನೆಮಾಡಿದರೂ, ತೆಗದುಕ್ಕೊಂಡರೂ, ಕಣ್ಣು ಬಿಟ್ಟುಕೊಂಡರೂ ಮುಚ್ಚಿಕೊಂಡರೂ, ಆ ಇಂದ್ರಿಯಗಳು, ಆ ಇಂದ್ರಿಯಗಳ ಕಾರ್ಯಗಳು ಮಾಡುತ್ತವೆಯೆ ಹೊರತು, ತಾನು ಯಾವದನ್ನೂ ಮಾಡುವುದಿಲ್ಲವೆಂಬದಾಗಿ ದೃಢವಾಗಿ ನಂಬುವನು. ಯಾವ ಮನುಷ್ಯನು ತಾನು ಮಾಡುವ ಕರ್ಮವನ್ನೆಲ್ಲಾ ಭಗವದರ್ಪಣೆಮಾಡಿ, ಫಲಾಪೇಕ್ಷೆಇಲ್ಲದೆ ಇರುವನೊ,ಅಂಥವನುತಾವರೆ ಎಲೆಯು ನೀರಿನಲ್ಲಿ ಅಂಟಿಯೂ ಅಂಟದೆಯೂ ಹ್ಯಾಗೆಇರುತ್ತದೆಯೋ ಹಾಗೆ ತಾನೂ ಪಾಪದಿಂದ ಅಂಟಲ್ಪಡುವುದಿಲ್ಲಾ. ಆತ್ಮಶುದ್ಧಿಯನ್ನ ಹೊಂದುವುದಕ್ಕೋಸ್ಕರು ಕರ್ಮಯೋಗಿಗಳು ಶರೀರದಿಂದಲೂ,ಮನಸ್ಸಿನಿಂದಲೂ, ಬುದ್ಧಿಯಿಂದಲೂ, ಅಪೇಕ್ಷೆಯಿಂದಕೂಡಿರುವ ಇಂದ್ರಿ, ಯಗಳಿಂದಲೂ, ಸಕಲಧರ್ಮವನ್ನೂ, ತತ್ತತ್ ಕರ್ಮಾಪೇಕ್ಷೆಯು ಇಲ್ಲದಂತೆಯೆ ಮಾಡುವುರು. ಕೇವಲ ಆತ್ಮಶುದ್ಧಿಯಲ್ಲಿ ದೃಷ್ಟಿಯುಳ್ಳವನು ಫಲಾಪೇಕ್ಷೆಯನ್ನು ಬಿಟ್ಟು,ಆತ್ಮನಿಷ್ಠೆಇಂದ ಉಂಟಾಗುವ ಸ್ವಾಸ್ಥ್ಯವನು ಹೊಂದುವನು. ಹಾಗಿಲ್ಲದೆ ಆಶೆಇಂದ ಬಾಧಿತನಾಗಿ, ಫಲಾಪೇಕ್ಷೆಯುಳ್ಳಂಥಾ ಆತ್ಮಾವ ಲೋಕನದಲ್ಲಿ ದೃಷ್ಟಿಯಿಲ್ಲದವನು, ಪುಣ್ಯಾಪಾಪಕರ್ಮಗಳಿಂದ ಪೀಡಿತನಾಗಿ, ಕೇವಲಬದ್ಧ ಸಂಸಾರಿಯಾಗುವನು. ನವದ್ವಾರಗಳುಳ್ಳ ಈ ದೇಹವೆಂಬ ಪಟ್ಟಣದಲ್ಲಿ ವಾಸಮಾಡು

ತ್ತಲಿರುವ ಜೀವನು, ಸಮಸ್ತ ಇಂದ್ರಿಯಗಳನ್ನೂ
ತನ್ನ ವಶಮಾಡಿಕೊಂಡು, ಸಮಸ್ತ ಕರ್ಮವನ್ನೂ
ಮನಸ್ಸಿನಿಂದ ವದರಿಬಿಟ್ಟು, ಯಾವ ಕರ್ಮವನ್ನೂ ಮಾ
ಡದೇಲೂ ಮಾಡಿಸದೇಲೂ ಸುಖವಾಗಿ ಇರುವನು.
ಪರಮಾತ್ಮನಾದವನು ಲೋಕಕ್ಕೆ ಕರ್ತೃತ್ವವನ್ನೇ ಆಗ
ಲಿ, ಕರ್ಮವನ್ನೇ ಆಗಲಿ, ಕರ್ಮಫಲಸಂಬಂಧವನ್ನೇ ಆ
ಗಲಿ, ಸೃಷ್ಟಿಸುವುದಿಲ್ಲಾ. ಆದರೆ ಇವುಗಳೆಲ್ಲಾ ಅನಾ
ದಿಕಾಲದಿಂದ ಮಾಡಿಕೊಂಡು ಬಂದಿರುವ ಪುಣ್ಯ
ಪಾಪ ಕರ್ಮಗಳ ಫಲರೂಪವಾದ ಈ ಪ್ರಕೃತಿಸಂ
ಬಂಧದಿಂದ ಸ್ವಭಾವಸಿದ್ಧವಾಗಿ ಉಂಟಾಗುತ್ತೆ. ಪ
ರಮಾತ್ಮನು ಯಾವ ಪಾಪವನ್ನೇ ಆಗಲಿ, ಪುಣ್ಯವನ್ನೇ
ಆಗಲಿ, ತೆಗದುಕೊಳ್ಳುವುದಿಲ್ಲಾ. ವಿವೇಕವು ಅಜ್ಞಾನ
ದಿಂದ ಮುಚ್ಚಲ್ಪಟ್ಟಿರುವುದರಿಂದ, ಮನುಷ್ಯರು
ಮೋಹಗೊಳ್ಳುತ್ತಾರೆ. ಯಾರ ಅಜ್ಞಾನವು ಜ್ಞಾನ
ದಿಂದ ನಾಶಹೊಂದುತ್ತದೆಯೋ ಅಂಥವರ ಜ್ಞಾನವು
ಸೂರ್ಯನಹಾಗೆ ಪರಮಾತ್ಮನನ್ನ ಪ್ರಕಾಶಪಡಿಸುತ್ತದೆ.
ಜ್ಞಾನದಿಂದ ಪಾಪವನ್ನ ಹೋಗಲಾಡಿಸಿಕೊಂಡು ಇ
ರುವರಾಗಿಯೂ, ಬ್ರಹ್ಮಜ್ಞಾನಿಗಳಾಗಿ ಆತ್ಮಾವಲೋ
ಕನದಲ್ಲಿ ಮನಸ್ಸನ್ನ ಇಟ್ಟು ಇರುವವರಾಗಿಯೂ, ಅ
ದೇ ಅನುಷ್ಠಾನವನ್ನ ಉಳ್ಳವರಾಗಿಯೂ, ಅದೇ ಮು
ಖ್ಯವಾದ ಪ್ರಯೋಜನವೆಂದನ್ನೂ ತಿಳಿದು ಇರುವಂ
ಥವರು ಪುನರ್ಜನ್ಮವಿಲ್ಲದಂಥಾ ಮುಕ್ತಿಯನ್ನು ಹೊಂ

ದುವರು. ವಿದ್ಯವೇನು, ವಿನಯವೇನು, ಇವುಗಳಿಂದ ಕೂಡಿದ ಬ್ರಾಹ್ಮಣನಲ್ಲಿಯೂ, ಗೋವಿನಲ್ಲಿಯೂ, ಆನೆಯಲ್ಲಿಯೂ, ನಾಯಿಯಲ್ಲಿಯೂ, ನಾಯಿಮಾಂಸವನ್ನ ಪಕ್ವಮಾಡಿತಿನ್ನುವವನಲ್ಲಿಯೂ, ಸಮದೃಷ್ಟಿಯನ್ನುಳ್ಳಂಥಾವರಾಗಿ ಇರುವರು, ವಿವೇಕವನ್ನುಳ್ಳ ಆತ್ಮಸ್ವರೂಪಜ್ಞಾನಿಗಳೆನಿಸಿಕೊಳ್ಳುವರು. ಯಾರ ಮನಸ್ಸು ಎಲ್ಲರ ಆತ್ಮವೂ ಒಂದೇ ಎಂಬುವ ಸಮಬುದ್ಧಿಯನ್ನು ಉಳ್ಳದ್ದೋ, ಅಂಥವರಿಂದ ಇಹಲೋಕದಲ್ಲಿಯೇ ಸಂಸಾರವು ಜಯಿಸಲ್ಪಟ್ಟಿತು: ಯಾವಕಾರಣದಿಂದ ದೋಷರಹಿತವಾಗಿಯೂ, ಸಮಾನ ಆಕಾರವುಳ್ಳದ್ದಾಗಿಯೂ, ಇರುವ ಆತ್ಮಾವನ್ನ ಬ್ರಹ್ಮವನ್ನಾಗಿ ಭಾವಿಸುವರೋ, ಆಕಾರಣದಿಂದಲೇ ಅವರು ಪರಬ್ರಹ್ಮನಿಷ್ಟರೆನ್ನಿಸಿಕೊಳ್ಳುವರು. ಆತ್ಮನಲ್ಲಿ ಸ್ಥಿರಬುದ್ಧಿಯುಳ್ಳವನಾಗಿಯೂ, ದೇಹಾತ್ಮಜ್ಞಾನವುಳ್ಳವನಾಗಿಯೂ, ಇರುವ ಬ್ರಹ್ಮನಿಷ್ಠೆಯುಳ್ಳ ಬ್ರಹ್ಮಜ್ಞಾನಿಯು, ತನಿಗೆ ಪ್ರಿಯವಾದದ್ದನ್ನ ಹೊಂದಿ ಸಂತೋಷಿಸಲೂಕೂಡದು, ತನಿಗೆ ಇಷ್ಟವಿಲ್ಲದ್ದನ್ನ ಹೊಂದಿ ದುಃಖ್ಖಿಸಲೂಕೂಡದು. ಯಾರು ಸಾಮಾನ್ಯವಿಷಯಗಳಲ್ಲಿ ಆಸಕ್ತಿಯಿಲ್ಲದಂತೆ, ಪರಮಾತ್ಮನಲ್ಲಿ ಸುಖವನ್ನು ಹೊಂದುವರೋ, ಅಂಥವರು ಬ್ರಹ್ಮನಿಷ್ಠೆಯಲ್ಲಿ ಮನಸ್ಸುಳ್ಳವರಾಗಿ, ಎಂದಿಗೂ ನಾಶಹೊಂದದಂಥಾ ಮೋಕ್ಷವನ್ನು ಹೊಂದುವರು. ಯಾವ ಸು

ಖಗಳು ವಿಷಯೇಂದ್ರಿಯುಗಳಿಂದುಂಟಾದವುಗಳೊ, ಆ ವುಗಳು ದುಃಖಕ್ಕೆ ಕಾರಣಭೂತಗಳಾಗಿಯೆ ಇರುವವು. ಇಷ್ಟೇ ಅಲ್ಲದೆ,ಆದಿಯನ್ನೂ ಅಂತ್ಯವನ್ನೂ ಉಳ್ಳಂಥವುಗಳಾಗಿಯೂ, ಅಸ್ಥಿರಗಳಾಗಿಯೂ, ಇರುವವು; ಆದ್ದರಿಂದ ಅವುಗಳಲ್ಲಿ ಜ್ಞಾನಿಯಾದವನು ಪ್ರೇಮವನ್ನ ಇಡುವುದಿಲ್ಲಾ. ಇಹಲೋಕದಲ್ಲಿ ಯಾವ ಮನುಷ್ಯನು ಈ ಶರೀರ ಇರುವಹಾಗೆಯೆ ಆಸೆಯಿಂದಲೂ, ಕೋಪದಿಂದಲೂ, ಉಂಟಾಗುವ ತೀಕ್ಷ್ಣಸ್ವಭಾವವನ್ನು ಸಹಿಸಿಕೊಳ್ಳಲು ಸಮರ್ಥನಾಗುವನೋ, ಅವನೇ ಯೋಗಿಯಾಗಿಯೂ, ಸುಖಿಯಾಗಿಯೂ, ಇರುವನು. ಯಾವ ಮನುಷ್ಯನು ತನ್ನ ಅಂತರಾತ್ಮಾವಿನಲ್ಲಿಯೇ ಸುಖಪಡುವನೋ,ಅದರ ಸಂಗಡಲೇ ಆಡ್ಡುವನೋ, ಯಾವ್ನೊನು ಸ್ವಯಂಪ್ರಕಾಶವುಳ್ಳವನೋ ಅಂಥವನು ಬ್ರಹ್ಮಸ್ವರೂಪಿಯಾಗಿ, ಬ್ರಹ್ಮಾನಂದವನ್ನು ಹೊಂದುವನು. ಪಾಪಗಳನ್ನೆಲ್ಲಾ ಹೋಗಲಾಡಿಸಿಕ್ಕೊಂಡಿರುವ, ಸೀತ, ಉಷ್ಣ, ಸುಖ, ದುಃಖ,ಗಳೆಂಬ ಭೇದವಿಲ್ಲದ, ಸಮಸ್ತ ಪ್ರಾಣಿಗಳಿಗೂ ಹಿತವನ್ನೇ ಬಯುಸುವ, ಉದಾರವಾದ ಮನಸ್ಸುಳ್ಳಂಥಾ ಮನುಷ್ಯರುಗಳು, ಬ್ರಹ್ಮಾನಂದವನ್ನ ಹೊಂದುವರು. ಕಾಮಕ್ರೋಧಗಳಿಂದ ಬಿಡಲ್ಪಟ್ಟು, ಮನೋನಿಗ್ರಹದಲ್ಲಿ ಆಸಕ್ತರಾಗಿ,ಮನಸ್ಸನ್ನ ಸ್ವಾಧೀನಪಡಿಸಿಕ್ಕೊಂಡಿರುವ ಸನ್ಯಾಸಿಗಳಿಗೆ,ಬ್ರಹ್ಮಾನಂದವು ಎಲ್ಲಾ ಪ್ರದೇಶ,

ಶದಲ್ಲಿಯೂ ಇರುವದು. ವಿಷಯಗಳನ್ನೆಲ್ಲಾ ಬಿಟ್ಟು, ಕಣ್ಣುದೃಷ್ಟಿಯನ್ನು ಭ್ರೂಮಧ್ಯದಲ್ಲಿ ಯಿಟ್ಟು, ಪ್ರಾಣವಾಯುವನ್ನೂ ಅಪಾನವಾಯುವನ್ನೂ ಮೂಗಿನೊಳಗೇನೇ ಸಂಚಾರಮಾಡುವಂತೆಯೂ ಸಮನಾಗಿಯೂ ಮಾಡಿ, ಇಂದ್ರಿಯ ಮನೋ ಬುದ್ಧಿಗಳನ್ನ ನಿಗ್ರಹಿಸಿಕೊಂಡು, ಇಷ್ಟವನ್ನೂ, ಭಯವನ್ನೂ, ಕೋಪವನ್ನೂ, ಬಿಟ್ಟು, ಮೋಕ್ಷಾಪೇಕ್ಷೆಮಾತ್ರವುಳ್ಳನಾಗಿಯೂ, ತದೇಕಧ್ಯಾನಿಯಾಗಿಯೂ, ಯಾವನು ಇರುವನೋ, ಅವನನ್ನು ಯಾವಾಗಲೂ ಮುಕ್ತನೆಂದೇ ಭಾವಿಸತಕ್ಕದ್ದು. ಯಜ್ಞವನ್ನೂ, ತಪಸ್ಸನ್ನೂ, ಅನುಭವಿಸಿಕೊಂಡು, ಸಮಸ್ತಲೋಕಕ್ಕೂ ಒಡೆಯನಾಗಿ, ಸಮಸ್ತವಾದ ಪ್ರಾಣಿಗಳಿಗೂ ಹಿತಕರನಾಗಿ, ಇರುವನೆಂದು ನನ್ನನ್ನ ತಿಳಿದಂಥಾವನು ಮೋಕ್ಷಸುಖವನ್ನು ಹೊಂದುವನು.

ಇತಿ ಕರ್ಮಸನ್ಯಾಸಯೋಗವೆಂಬ ಐದನೇಅಧ್ಯಾಯ ಸಮಾಪ್ತವಾಯಿತು.

ಆತ್ಮ ಸಂಯಮಯೋಗವೆಂಬ ಆರನೇ ಅದ್ಯಾಯ ಪ್ರಾರಂಭಃ.

ಶ್ರೀಭಗವಾನ್ :— ಅಪೇಕ್ಷೆಯನ್ನಿಡದೆ ಮಾಡತಕ್ಕ ಕಾರ್ಯಗಳನ್ನೆಲ್ಲಾ ಯಾವನು ಮಾಡುವನೋ, ಅವನನ್ನೇ ಸನ್ಯಾಸಿಎಂತಲೂ, ಯೋಗಿ ಎಂತಲೂ, ತಿಳಿಯಬೇಕು. ಅಂಥವನನ್ನ ಅನಗ್ನಿಕನೆಂತಲೂ, ಕ್ರಿ

ಯಾ ಶೂನ್ಯನೆಂತಲೂ, ಹೇಳಕೂಡದು. ಎಲೈ ಅ
ರ್ಜುನ ! ಯಾವದನ್ನ ಸನ್ಯಾಸ ಅಥವಾ ಜ್ಞಾನ
ಯೋಗವೆಂದು ಹೇಳುತ್ತಾರೆಯೋ, ಅದನ್ನೇ ಕರ್ಮ
ಯೋಗವೆಂದು ತಿಳಿ. ಯಾಕಂದರೆ, ಫಲಾಪೇಕ್ಷೆಯನ್ನ
ಬಿಡದೆ ಇರುವ ಮನುಷ್ಯನು ಕರ್ಮಯೋಗಿ ಆಗಲಾ
ರನು. ಆತ್ಮಾವಲೋಕನವನ್ನ ಹೊಂದಬೇಕೆಂದು
ಇರುವ ಯೋಗಿಗೆ, ಕರ್ಮವೇ ಕಾರಣವೆಂದು ಹೇಳ
ಲ್ಪಡುತ್ತದೆ. ಯೋಗದಲ್ಲಿ ವೃದ್ಧಿಯನ್ನು ಹೊಂದಿದ
ಅಂಥವನಿಗೇನೇ ಕರ್ಮನಿವೃತ್ತಿಯು ಸಾಧ್ಯ
ವೆಂದು ಹೇಳಲ್ಪಡುತ್ತದೆ. ಯಾವಾಗ ವಿಷಯಗ
ಳಲ್ಲಿಯೆ ಆಗಲಿ, ತತ್ ಪ್ರಯುಕ್ತವಾಗಿ ಮಾಡಲ್ಪ
ಡುವ ಕರ್ಮಗಳಲ್ಲಿಯೇ ಆಗಲಿ, ಅಪೇಕ್ಷೆಯಿಲ್ಲದೇ
ಇರುವನೊ, ಅಗ ಆ ಮನುಷ್ಯನು ಫಲಾಪೇಕ್ಷೆಯ
ನ್ನು ಬಿಟ್ಟು, ಯೋಗಸಿದ್ಧಿಯನ್ನು ಹೊಂದಿದವನೆಂದು
ಹೇಳಲ್ಪಡುವನು. ತನ್ನನ್ನುತಾನೆ ಫಲಾಪೇಕ್ಷೆ ಇಲ್ಲದ
ಮನಸ್ಸಿನಿಂದ ರಕ್ಷಿಸಿಕೊಳ್ಳಬೇಕೇ ಹೊರ್ತು, ನಶ್ವ
ರಫಲಗಳನ್ನು ಅಪೇಕ್ಷಿಸಿ, ನಾಶಮಾಡಿಕೊಳ್ಳಬಾರದು.
ತನ್ನ ಮನಸ್ಸೇ ತನಿಗೆ ಶತೃವಾಗಿಯೂ ಮಿತ್ರನಾಗಿ
ಯೂ ಇರುವದು. ಯಾವಮನುಷ್ಯನು ತನ್ನ ಮ
ನಸ್ಸನ್ನು ಜಯಿಸಿ ಇರುವನೋ, ಅಂಥವನಿಗೇನೆ ಅವ
ನ ಮನಸ್ಸು ಮಿತ್ರನೆಂತಲೂ, ಬಂಧುವೆಂತಲೂ, ಹೇ
ಳಲ್ಪಡುವದು. ಹಾಗೆ ಜಯಿಸದೆ ಇರುವವನಿಗೆ

ದೇ ಶತ್ರುವಾಗಿ ಪರಿಣಮಿಸುವದು. ಶೀತ,ಉಷ್ಣ,ಸುಖ, ದುಃಖ, ಮಾನ,ಅಪಮಾನ, ವೆಂಬ ಈ ಬೇಧಗಳಿಲ್ಲದೆ, ಮನಸ್ಸನ್ನ ನಿಗ್ರಹಿಸಿಕೊಂಡು, ಯಾವಾಗಲೂ ಸೌಮ್ಯವಾಗಿ ಇರುವ ಮನುಷ್ಯನ ಮನಸ್ಸಿನಲ್ಲಿ ಪರಮಾತ್ಮನು ಪ್ರತ್ಯಕ್ಷವಾಗಿ ಇರುವನು. ಆತ್ಮಜ್ಞಾನದಿಂದಲೂ, ಈ ಆತ್ಮನು ಪ್ರಕೃತಿಗಿಂತಲೂ ಬೇರೆ ಆದವನೆಂಬ ವಿಶೇಷಜ್ಞಾನದಿಂದಲೂ, ಮನಸ್ಸಿನಲ್ಲಿ ತೃಪ್ತಿಯನ್ನು ಹೊಂದಿ, ಸ್ವಲ್ಪವೂ ಚಲಿಸದೆ, ಇಂದ್ರಿಯಗಳನ್ನೆಲ್ಲಾ ವಶಮಾಡಿಕೊಂಡು, ಕಲ್ಲು, ಮಣ್ಣು, ಹೊನ್ನು, ಇವೇ ಮೊದಲಾದವುಗಳಲ್ಲಿ ಭೇದಜ್ಞಾನವಿಡದೆ, ಇರುವ ಕರ್ಮಯೋಗಿಯು, ಜ್ಞಾನಯೋಗಕ್ಕೆ ಅರ್ಹನೆಂದು ಹೇಳಲ್ಪಡುವನು. ಯಾವ ಮನುಷ್ಯನು ಸ್ನೇಹಿತರುಗಳಲ್ಲಿಯೂ, ದ್ವೇಷಿಗಳಲ್ಲಿಯೂ, ತಟಸ್ಥರಾಗಿರುವರಲ್ಲಿಯೂ, ಮಧ್ಯಸ್ಥ ಮಾಡುವವರಲ್ಲಿಯೂ, ಜನ್ಮದ್ವೇಷಿಗಳಲ್ಲಿಯೂ, ಬಂಧುಗಳಲ್ಲಿಯೂ, ಸಾಧು ಜನಗಳಲ್ಲಿಯೂ, ಪಾಪಿಷ್ಠರಲ್ಲಿಯೂ, ಸಮಾನ ಜ್ಞಾನವನ್ನುಳ್ಳಂಥವನಾಗಿ ಇರುವನೋ, ಅವನು ಬಹಳ ಶ್ರೇಷ್ಟನಾದವನು. ಇಂದ್ರಿಯಗಳನ್ನು ನಿಗ್ರಹಿಸಿಕೊಂಡು,ಆಶಾಪಾಶಗಳಿಗೆ ಬದ್ಧನಾಗದೆ ಇರುವಯೋಗಿಯೂ, ಏಕಾಂತವಾದ ಸ್ಥಳದಲ್ಲಿ ಒಂಟಿಯಾಗಿಕೂತುಕೊಂಡು, ಯಾವಾಗಲೂ ಧ್ಯಾನವನ್ನ ಸ್ಥಿರವಾಗಿ ನಿಲ್ಲಿಸಿಕೊಳ್ಳಬೇಕು. ಬಹಳ ಎತ್ತರವೂ ಯಿ

ಲ್ಲದೆ, ಬಹಳ ಕೆಳಗೂ ಇಲ್ಲದೆ, ಇರುವಂಥಾ ಬಂದು ಪರಿಶುದ್ಧವಾದ ಪ್ರದೇಶದಲ್ಲಿ, ವಸ್ತ್ರವನ್ನೂ, ಜಿಂಕೆ ಚರ್ಮವನ್ನೂ, ದರ್ಭಾಸನವನ್ನೂ, ಹಾಕಿಕೊಂಡು, ಸ್ಥಿರವಾದ ಆಸನದಮೇಲೆ ಕುಳಿತು, ಏಕಾಗ್ರಚಿತ್ತನಾಗಿ, ಇಂದ್ರಿಯ ವ್ಯಾಪಾರಗಳನ್ನು ಜಯಿಸಿ, ಆತ್ಮಶುದ್ಧಿಯನ್ನು ಹೊಂದುವುದಕ್ಕೋಸ್ಕರ ಆತ್ಮಾವಲೋಕನವನ್ನ ಮಾಡಬೇಕು. ದೇಹವನ್ನೂ, ಶಿರಸ್ಸನ್ನೂ, ಕಂಠವನ್ನೂ, ಚಲಿಸದಂತೆ ಸ್ಥಿರವಾಗಿ ನೆಟ್ಟಗೆ ನಿಲ್ಲಿಸಿಕೊಂಡು, ತನ್ನ ಮೂಗಿನ ಕೊನೆಯನ್ನ ನೋಡಿಕ್ಕೊಂಡು, ಯಾವ ದಿಕ್ಕಿಗೂ ತಿರುಗಿ ನೋಡದೆ, ಸಮಾಧಾನವುಳ್ಳ ಮನಸ್ಕನಾಗಿಯೂ,ನಿರ್ಭಯನಾಗಿಯೂ, ಆತ್ಮಾವಲೋಕನವೇ ತನಗೆ ವ್ರತವಾಗಿ ಇಟ್ಟುಕ್ಕೊಂಡು, ಮನಸ್ಸನ್ನ ಚೆನ್ನಾಗಿ ಅಡಗಿಸಿಕೊಂಡು, ಭಗವಂತನಲ್ಲಿಯೇ ಧ್ಯಾನವನ್ನು ಇಟ್ಟುಕೊಂಡು, ಅವನನ್ನೆ ಯಾವಾಗಲೂ ಯೋಗಿಯಾದವನು ಚಿಂತಿಸಿಕೊಂಡು ಇರಬೇಕು. ಈ ಪ್ರಕಾರವಾಗಿ ಯೋಗಿಯಾದವನು ಮನೋನಿಗ್ರಹವನ್ನುಮಾಡಿಕ್ಕೊಂಡು, ಯಾವಾಗಲೂ ಪರಮಾತ್ಮನಲ್ಲಿಯೇ ಮನಸನ್ನು ನಿಲ್ಲಿಸಿ, ಭಗವಂತನಲ್ಲಿ ಐಕ್ಯವಾಗುವದೆಂಬುವಂಥಾ ಶ್ರೇಷ್ಟತಮವಾದ ಮೋಕ್ಷವೆಂಬ ಸುಖಸಾಮ್ರಾಜ್ಯವನ್ನಹೊಂದುವನು.

ಎಲೈ ಅರ್ಜುನನೆ! ಈ ಮೇಲೆ ಹೇಳಿದಂಥಾ

ಯೋಗವು ಅಳವು ಮಿಂಚಿ ಉಣ್ಣುವವನಿಗೂ, ಶುದ್ಧಾಂಗವಾಗಿ ಆಹಾರವನ್ನು ತೆಗದುಕೊಳ್ಳದೆ ದೇಹವನ್ನ ಬಣಗಿಸುವವನಿಗೂ, ಅಧಿಕನಿದ್ರೆ ಮಾಡುವವನಿಗೂ,ಶುದ್ಧಾಂಗವಾಗಿ ನಿದ್ರೆಕೆಟ್ಟು ಶ್ರಮ ಪರಿಹಾರವಮಾಡಿಕೊಳ್ಳದೆ ಇರುವವನಿಗೂ, ಉಂಟಾಗಲಾರದು, ಆದರೆ, ಆಹಾರ ವ್ಯವಹಾರಗಳಲ್ಲಿಯೂ, ನಡವಳಿಕೆಗಳಲ್ಲಿಯೂ, ನಿದ್ರೆ ಎಚ್ಚರಿಕೆಗಳಲ್ಲಿಯೂ, ಎಲ್ಲಾ ವಿಷಯಗಳಲ್ಲಿಯೂ, ಮಿತವಾಗಿ ಯಾವೋನು ಇರುತ್ತಾನೆಯೊ, ಅವನಿಗೆ ದುಃಖಗಳನ್ನೆಲ್ಲಾ ಹೋಗಲಾಡಿಸುವಂಥ ಧ್ಯಾನಯೋಗವು ಸಿದ್ಧಿಸುವುದು. ಯಾವಾಗ ಈ ಮನುಷ್ಯನು ಮನಸ್ಸನ್ನ ಸ್ವಾಧೀನಪಡಿಸಿಕೊಂಡು ಪರಮಾತ್ಮನಲ್ಲಿಯೇ ನಿಲ್ಲಿಸಿಕೊಳ್ಳುವನೋ, ಆಗ ಇವನು ಸಮಸ್ತ ಆಸೆಗಳನ್ನೂ ಬಿಟ್ಟಂಥಾ ಯೋಗಿ ಎನಿಸಿಕೊಳ್ಳುವನು. ಘಾಳಿ ಬೀಸದೆ ಇರುವ ಪ್ರದೇಶದಲ್ಲಿ ಇಟ್ಟುಇರುವ ದೀಪವು ಹ್ಯಾಗೆ ಚಲಿಸದೆ ಜ್ವಲಿಸಿಕೊಂಡು ಇರುವದೊ, ಹಾಗೆಯೆ ಮನೋನಿಗ್ರಹವನ್ನ ಹೊಂದಿದ ಯೋಗಿಯ ಜ್ಞಾನವು ಪರಮಾತ್ಮನ ಧ್ಯಾನದಲ್ಲಿ ಪ್ರಕಾಶವಾಗಿ ಇರುವದು. ಯೋಗವನ್ನು ಮಾಡಿಕೊಂಡು ಇರುವಾಗ ಅಡಗಿಸಿಕೊಂಡು ಇರುವ ಮನಸ್ಸು ಯಾವ ಅವಸ್ಥೆಯಲ್ಲಿ ಸುಖಾನುಭವವನ್ನ ಮಾಡಿಕೊಂಡು ನಿಲ್ಲುವದೊ, ಯಾವ ಘಟ್ಟದಲ್ಲಿ ತನ್ನಲ್ಲಿ ಇರುವ ಆತ್ಮನನ್ನ ತಾನೇ ನೋ

ಡಿಕೊಂಡು ತನ್ನಲ್ಲಿ ತಾನು ಸಂತೋಷ ಪಡುವದೊ, ಯಾವ ಸಂದರ್ಭದಲ್ಲಿ ಇಂದ್ರಿಯಗಳಿಗೆ ಗೋಚರವಾಗದ ಬುದ್ಧಿಯಿಂದಲೆ ತಿಳಿಯತಕ್ಕಂಥಾ, ಅಪರಿಮಿತವಾದ ಸುಖವನ್ನು ಹೊಂದುವನೊ, ಯಾವ ಸುಖಾನುಭವದಿಂದ ಚಲಿಸುವುದಿಲ್ಲವೊ, ಯಾವ ಪರಮಾತ್ಮ ಲಾಭವನ್ನ ಹೊಂದಿ, ಅದಕ್ಕೆ ಮೇಲಾದುದ್ದು ಯಾವದೂ ಇಲ್ಲನೆಂದು ತಿಳಿಯುವನೋ, ಯಾವ ಅವಸ್ಥೆಯಲ್ಲಿ ಮಹತ್ತಾದ ದುಃಖದಿಂದಲೂ ಚಲಿಸಲ್ಪಡುವದಿಲ್ಲವೊ, ಆ ಅವಸ್ಥೆಯುಳ್ಳ ಯೋಗವನ್ನ, ದುಃಖ ಸಂಮಂಧದಿಂದ ನಿವಾರಣೆ ಮಾಡತಕ್ಕ ಯೋಗವೆಂದು, ತಿಳಿಯತಕ್ಕದ್ದು. ಇದನ್ನ ಇಂಥಾದ್ದೆಂದು ನಿಶ್ಚಯಿಸಿ, ಸಂತೋಷವಾದ ಮನಸುಳ್ಳವನಿಂದ ಅನುಷ್ಠಿಸತಕ್ಕದ್ದು. ನಮ್ಮ ಸಂಕಲ್ಪದಿಂದಲೆ ಉಂಟಾಗುವ ಸಮಸ್ತ ಆಸೆಗಳನ್ನೂ ಚನ್ನಾಗಿ ಬಿಟ್ಟುಬಿಟ್ಟು, ಮನಸ್ಸಿನಿಂದಲೆ ಸಕಲ ಇಂದ್ರಿಯಗಳನ್ನು ಸ್ವಾಧೀನ ಮಾಡಿಕೊಂಡು, ವಿವೇಕದಿಂದ ಕೂಡಿದ ಬುದ್ಧಿಯಿಂದ ಮನಸ್ಸನ್ನ ಪರಮಾತ್ಮನಲ್ಲಿ ಇಟ್ಟು, ಕೊಂಚಕೊಂಚವಾಗಿ ವಿಷಯಗಳಿಂದ ನಿವರ್ತಿಸಿಕ್ಕೊಂಡು, ಯಾವದನ್ನೂ ಚಿಂತಿಸದೇ ಇರಬೇಕು. ಈ ಅಸ್ಥಿರವಾಗಿಯೂ, ಚಂಚಲವಾಗಿಯೂ, ಇರುವ ಮನಸ್ಸು, ಯಾವ ಯಾವ ವಿಷಯಗಳಲ್ಲಿ ಪ್ರವರ್ತಿಸುವದೊ ಆ ಯಾವಿಷಯಗಳಿಂದ ಆಮನಸ್ಸನ್ನನಿವರ್ತಿಸಿಕ್ಕೊಂ,

ಡು, ಪರಮಾತ್ಮನಲ್ಲಿಯೇ ಮಗ್ನವಾಗಿ ಇರುವಂತೆ ಮಾ ಡಬೇಕು. ಮನಸ್ಸ್ವಾಸ್ಥ್ಯವುಳ್ಳ, ರಜೋಗುಣ ನಿಹೀ ನನಾದ, ಬ್ರಹ್ಮಸ್ವರೂಪಿಯಾಗಿಯೂ, ಪಾಪರಹಿತ ನಾಗಿಯೂ, ಇರುವ ಯೀ ಯೋಗಿಯುನ್ನು ಶ್ರೇಷ್ಠ ವಾದ ಸುಖವುತಾನಾಗಿಯೆಹೊಂದುವದು. ಈಪ್ರಕಾ ರವಾಗಿ ಮನಸ್ಸನ್ನ ಯಾವಾಗಲೂ ನಿಲ್ಲಿಸಿಕ್ಕೊಂಡು, ಪಾಪಗಳನ್ನೆಲ್ಲಾ ಹೋಗಲಾಡಿಸಿಕ್ಕೊಂಡು, ಇರುವ ಯೋಗಿಯು ಅತ್ಯಂತಸುಖತರವಾದ ಬ್ರಹ್ಮಾನಂದವ ನ್ನು ಹೊಂದುವನು. ಎಲ್ಲಾವಿಷಯದಲ್ಲಿಯೂ ಸಮಾ ನವಾದ ಬ್ರಹ್ಮದೃಷ್ಠಿಯುಳ್ಳಂಥಾ ಧ್ಯಾನಯೋಗಿಯು ತನ್ನನ್ನ ಸಮುಸ್ಥ ಪ್ರಾಣಿಗಳಲ್ಲಿಯೂ, ಸಮಸ್ತ ಪ್ರಾಣಿ ಗಳನ್ನೂ ತನ್ನಲ್ಲಿಯೂ, ಇರುವಂತೆ ನೋಡುವನು, ಯಾವ ಮನುಷ್ಯನು ನನ್ನನ್ನು ಯುಲ್ಲಾವಸ್ತುವಿನಲ್ಲಿ ಯೂ ಅಂತರ್ಭೂತವಾಗಿ ಇರುವಂತೆ ನೋಡುವನೊ, ಅದೇಪ್ರಕಾರ ಎಲ್ಲಾವಸ್ತುಗಳನ್ನೂ ನನ್ನಲ್ಲಿ ನೋಡು ವನೋ,ಅಂಥವನಿಗೆ ನಾನು ಎಂದಿಗೂ ಕಾಣದೇ ಹೋ ಗುವುದಿಲ್ಲಾ. ಹಾಗೆಯೆ ಅವನೂ ನನಿಗೆ ಕಾಣದೇ ಹೋಗಲಾರನು. ಸಮುಸ್ಥ ಪ್ರಾಣಿಗಳಲ್ಲಿಯೂ ಅಂ ತರ್ಭೂತವಾಗಿ ಕೂತುಇರುವ ನನ್ನನ್ನು, ಭೇದಜ್ಞಾನ ವಿಲ್ಲದೆ ಯಾವ್ನೊನು ಭಜಿಸುವನೊ, ಅಂಥಾ ಯೋಗಿ ಯು ಯೇನುಮಾಡಿಕೊಂಡು ಇದ್ದರೂ ಎಲ್ಲಾ ಸಮ ಯುದಲ್ಲಿಯೂ ನನ್ನಲ್ಲಿಯೇ ಜೀವನ್ಮುಕ್ತನಂತೆ ಇರ್ರು

ವನು. ಅಯ್ಯಾ ಅರ್ಜುನಾ ! ಎಲ್ಲರ ಸುಖದುಃಖಗಳನ್ನೂ ತನ್ನ ಸುಖದುಃಖಗಳಂತೆಯೇ ಸಮಾನಜ್ಞಾನದಿಂದ ಯಾವನುನೋಡುವನೋ, ಆ ಯೋಗಿಯು ಬಹಳ ಶ್ರೇಷ್ಠವಾದವನೆಂದು ನನ್ನ ಅಭಿಪ್ರಾಯವು.

ಅರ್ಜುನ:—ಅಯ್ಯಾ ಮಧುಸೂಧನ! ನಿನ್ನಿಂದ ಈಗ ಹೇಳಲ್ಪಟ್ಟ ಸಮಾನಜ್ಞಾನವುಳ್ಳಂಥಾ ಯೋಗದ ಸ್ಥಿರವಾದ ಸ್ಥಿತಿಯನ್ನ,ಮನಸ್ಸು ಬಹು ಚಂಚಲವಾದದ್ದರಿಂದ, ನಾನು ಕಾಣಲಾರೆನು. ಅಯ್ಯಾ ಕೃಷ್ಣಾ! ಮನಸ್ಸು ಬಹು ಚಂಚಲವಾದದ್ದಾಗಿಯೂ, ಅನರ್ಥಕರವಾದದ್ದಾಗಿಯೂ, ಸ್ವಾಧೀನಪಡಿಸಿಕ್ಕೊಳ್ಳಲು ಬಹಳ ಬಲವುಳ್ಳದ್ದಾಗಿಯೂ, ವಿಷಯಾನುಭವಗಳಲ್ಲಿ ಬಹಳ ಧೃಡವಾದದ್ದಾಗಿಯೂ, ಇಧೆಯಲ್ಲವೆ ? ಇಂಥಾ ಮನಸ್ಸನ್ನ ನಿಗ್ರಹಿಸಿಕೊಳ್ಳುವದು, ಘಾಳಿಯನ್ನು ಅಡಗಿಸುವದು ಹ್ಯಾಗೆ ಅಸಾಧ್ಯವೋ ಹಾಗೆ, ಅಸಾಧ್ಯವಾದದ್ದೆಂದು ನಾನು ತಿಳಿಯುವೆನು.

ಶ್ರೀಭಗವಾನ್:—ಎಲೈ ಅರ್ಜುನ! ಮನಸ್ಸು ಬಹಳ ಚಂಚಲವಾದದ್ದೆಂಬುವುದಕ್ಕೂ, ನಿಗ್ರಹಿಸಲು ಅಸಾಧ್ಯವಾದದ್ದೆಂಬುವುದಕ್ಕೂ, ಸಂದೇಹವೇ ಇಲ್ಲಾ. ಆದರೆ ಅದನ್ನ ಅಭ್ಯಾಸದಿಂದಲೂ,ವೈರಾಗ್ಯದಿಂದಲೂ,ಅಡಗಿಸಿಕೊಳ್ಳಬಹುದು. ಮನಸ್ಸನ್ನ ಜಯಿಸಿಕ್ಕೊಳ್ಳದೆ ಇರುವವನಿಂದ ಇಂಥಾ ಸಮತಾಜ್ಞಾನವುಳ್ಳ,

ಧ್ಯಾನಯೋಗವು ಹೊಂದತಕ್ಕದ್ದಲ್ಲವೆಂದು ನನ್ನ ಅಭಿಪ್ರಾಯವು. ಹಾಗಲ್ಲದೆ, ಮನಸ್ಸನ್ನ ವಶಮಾಡಿಕೊಂಡು,ಯತ್ನಶೀಲನಾಗಿ ಇರುವವನಿಂದ,ಈ ಧ್ಯಾನಯೋಗವು ಉಪಾಯವಾಗಿ ಹೊಂದಲು ಸಾಧ್ಯವಾದದ್ದು.

ಅರ್ಜುನ:—ಅಯ್ಯಾ ಕೃಷ್ಣ! ಶ್ರದ್ಧೆಯಿಂದ ಕೂಡಿ ಇದ್ದರೂ, ಯೋಗದಿಂದ ಚಲಿಸಿಹೋಗಿ,ಯೋಗಪೂರ್ತಿ ಇಲ್ಲದಂಥವನು, ಯೋಗಸಿದ್ಧಿಯನ್ನ ಹೊಂದದೆ ಯಾವ ಗತಿಯನ್ನ ಹೊಂದುವನು? ಕರ್ಮಮಾರ್ಗದಲ್ಲಿಯೂ, ಯೋಗಮಾರ್ಗದಲ್ಲಿಯೂ, ಭಂಗವನ್ನು ಹೊಂದಿ, ಯಾವ ಆಶ್ರಯವೂ ಇಲ್ಲದೆ, ಪರಬ್ರಹ್ಮನನ್ನು ಹೊಂದುವ ಮಾರ್ಗವನ್ನ ಅರಿಯದೆ, ಇರುವನು, ಚದರಿಹೋದ ಮೇಘದೋಪಾದಿಯಲ್ಲಿ ನಾಶವನ್ನ ಹೊಂದುವನೇ,ಹ್ಯಾಗೆ? ಅಯ್ಯಾ ಕೃಷ್ಣ! ಈ ನನ್ನ ಸಂಶಯವನ್ನ ಶುದ್ಧಾಂಗವಾಗಿ ಹೋಗಲಾಡಿಸುವುದಕ್ಕೆ ನೀನು ಸಮರ್ಥನಾಗಿ ಇರುವಿ. ನಿನ್ನನ್ನು ಬಿಟ್ಟರೆ ಈ ಸಂದೇಹ ನಿವೃತ್ತಿಯನ್ನು ಮಾಡತಕ್ಕವರು ಮತ್ಯಾರೂ ಇಲ್ಲಾ.

ಶ್ರೀ ಭಗವಾನ್:—ಅಯ್ಯಾ ಅರ್ಜುನನೆ! ಅಂಥಾ ಯೋಗಭ್ರಷ್ಟನಿಗೆ ಇಹಲೋಕದಲ್ಲಿಯೇ ಆಗಲಿ, ಪರಲೋಕದಲ್ಲಿಯೇ ಆಗಲಿ, ಎಲ್ಲಿಯೂ ನಾಶವಿಲ್ಲ. ಒಳ್ಳೇದನ್ನು ಮಾಡುವನು ಯಾವನಾದರೂ ದುರ್ಗತಿಯನ್ನ ಯಂದಿಗೂ ಹೊಂದುವುದಿಲ್ಲಾ. ಆದರೆ ಅಂ

ಥಾ ಯೋಗ ಭ್ರಷ್ಟನು ಪುಣ್ಯಕರ್ಮಫಲಗಳಾದ
ಲೋಕಗಳನ್ನುಹೊಂದಿ, ಅನೇಕಕಾಲ ಅಲ್ಲಿ ಸುಖ
ವಾಗಿ ಇದ್ದುಕೊಂಡು, ಶುಚಿಯಿಂದಲೂ, ಸೌಭಾ
ಗ್ಯದಿಂದಲೂ ಕೂಡಿದಂಥವರ ಮನೆಯಲ್ಲಿ ಜನ್ಮವ
ನ್ನು ಎತ್ತುವನು. ಹಾಗೆ ಇಲ್ಲದಿದ್ದರೆ, ಜ್ಞಾನಿಗಳಾಗಿ
ಯೂ, ಯೋಗಿಗಳಾಗಿಯೂ, ಇರುವರ ವಂಶದಲ್ಲಿ
ಜನಿಸುವನು. ಲೋಕದಲ್ಲಿ ಇಂಥಾ ಜನ್ಮವೇ ಅತಿ
ದುರ್ಲಭವಾದದ್ದಲ್ಲವೇ ? ಹೀಗೆ ಅವನು ಎತ್ತುವ ಜ
ನ್ಮದಲ್ಲಿಯೂ ಕೂಡ, ಪೂರ್ವಜನ್ಮದಲ್ಲಿಇದ್ದ ಜ್ಞಾನ
ಸಂಬಂಧವನ್ನೇ ಹೊಂದುವುದೂ ಅಲ್ಲದೆ, ಪುನಃ ಆ
ಭ್ರಷ್ಟವಾದ ಯೋಗದ ಸಿದ್ಧಿಯನ್ನ ಹೊಂದುವದಕ್ಕೇ
ನೇ ಯತ್ನಿಸುವನು. ಆ ಪೂರ್ವಜನ್ಮದ ಯೋಗಾ
ಭ್ಯಾಸವಾಸನೆಯಿಂದಲೆ ಪರವಶನಾಗಿ ಶಳೆಯಲ್ಪ
ಡುವನಷ್ಟೆ. ಯೋಗಾಭ್ಯಾಸದಲ್ಲಿ ಜ್ಞಾನಸಂಪಾದನೆ
ಯನ್ನು ಮಾಡಬೇಕೆಂಬ ಇಚ್ಛೆಯುಳ್ಳವನೂಕೂಡ,
ಕರ್ಮಫಲಗಳನ್ನ ಅತಿಕ್ರಮಿಸುವನು. ಪ್ರಯತ್ನಪುರ
ಸ್ಸರವಾಗಿ ಯೋಗಾಭ್ಯಾಸವನ್ನು ಮಾಡುವ ಯೋಗಿ
ಯು ಪಾಪಗಳಿಂದ ಶುದ್ಧನಾಗಿ, ಅನೇಕಜನ್ಮಗಳಿಂ
ದ ಶುದ್ಧಿಯನ್ನುಹೊಂದಿ, ಅನಂತರ ಶ್ರೇಷ್ಠವಾದ ಗ
ತಿಯನ್ನು ಹೊಂದುವನು. ಕರ್ಮಾನುಷ್ಠಾನಗಳಲ್ಲಿ
ಆಸಕ್ತಿಯುಳ್ಳ ತಪಸ್ವಿಗಳಿಗಿಂತಲೂ, ಜ್ಞಾನಿಗಳಿಗಿಂತ
ಲೂ, ಕರ್ಮಯೋಗಿಗಳಿಗಿಂತಲೂ, ಜ್ಞಾನಯೋಗಿ,

ಯೇ ಶ್ರೇಷ್ಠನಾದವನು. ಆದ್ದರಿಂದ ಎಲೈ ಅರ್ಜುನ! ನೀನು ಯೋಗಿಯಾಗು. ಅನೇಕವಿಧವಾದ ಯೋಗಗಳಲ್ಲಿಯೂ, ಯಾವನು ನನ್ನಲ್ಲಿ ಮನಸ್ಸನ್ನು ಇಟ್ಟು, ಅಕ್ಕರೆಯಿಂದ ನನ್ನನ್ನೇ ಭಜಿಸುವನೋ, ಅವನೇ ಎಲ್ಲರಿಗಿಂತಲೂ ಶ್ರೇಷ್ಠನಾದವನೆಂದು ನನ್ನ ಸಿದ್ಧಾಂತವು.

ಆತ್ಮಸಂಯಮಯೋಗವೆಂಬ ಆರನೇ
ಅಧ್ಯಾಯ ಸಮಾಪ್ತಮಾದುದು.

ಪ್ರಥಮಷಟ್ಕವು ಸಂಪೂರ್ಣವಾಯಿತು.

ಈ ಪ್ರಥಮಷಟ್ಕದಲ್ಲಿ ಮುಖ್ಯವಾಗಿ ಭಗವದೈಕ್ಯವನ್ನು ಹೊಂದುವುದಕ್ಕೆ ಭಗವದುಪಾಸನೆಯೇ ಹೊರ್ತು ಬೇರೆಯಿಲ್ಲವೆಂತಲೂ, ಇದಕ್ಕೆ ಅಂಗಭೂತವಾದದ್ದು ಜೀವ, ಆತ್ಮದರ್ಶನವೆಂತಲೂ, ಈ ಜೀವಾತ್ಮದರ್ಶನವನ್ನು ಹೊಂದುವುದಕ್ಕೆ ಆತ್ಮಜ್ಞಾನದೊಡನೆ ಕರ್ಮವನ್ನು ಮಾಡಬೇಕೆಂತಲೂ, ಉಪದೇಶಿಸಲ್ಪಟ್ಟಿತು.

ಈ ದ್ವಿತೀಯಷಟ್ಕದಲ್ಲಿ ಪುರುಷೋತ್ತಮನ ಸ್ವರೂಪವನ್ನೂ, ಅವನ ಉಪಾಸನವೆಂಬ ಭಕ್ತಿಯನ್ನೂ, ಉಪದೇಶಮಾಡಲ್ಪಡುವದು.

ಜ್ಞಾನವಿಜ್ಞಾನವೆಂಬ ಏಳನೇ ಅಧ್ಯಾಯ
ಪ್ರಾರಂಭ.

ಶ್ರೀ ಭಗವಾನ್:—ಎಲೈಅರ್ಜುನ! ನನ್ನಲ್ಲಿ ಸಂ

ಮುಂಥಪಟ್ಟಂಥಾ ಮನಸ್ಸುಳ್ಳವನಾಗೆಯೂ, ಯೋಗಾಭ್ಯಾಸಿಯಾಗಿಯೂ, ನನ್ನನ್ನ ಆಸ್ರಯಿಸಿಕೊಂಡಿರುವನಾಗಿಯೂ, ಇದ್ದುಕೊಂಡು, ನಿಸ್ಸಂದೇಹವಾಗಿ ನನ್ನನ್ನ ಚನ್ನಾಗಿ ಹ್ಯಾಗಾದರೆ ತಿಳಿಯುವೆಯೋ ಅದನ್ನು ಕೇಳು. ನಾನು ನಿನಗೆ ಪರಮಾತ್ಮ ನನ್ನ ತಿಳಿಯುವದೆಂಬ ವಿಜ್ಞಾನದಿಂದಕೂಡಿದ ಈ ಭಗವತ್ಸ್ವರೂಪಜ್ಞಾನವನ್ನ ಸಂಪೂರ್ಣವಾಗಿ ಹೇಳುವೆನು. ಇದನ್ನು ತಿಳಿದುಕೊಂಡನಂತರ, ಈ ನನ್ನ ವಿಷಯದಲ್ಲಿ ತಿಳಿದುಕೊಳ್ಳತಕ್ಕಂಥಾ ಬೇರೆ ಒಂದು ವಿಷಯವೂ ಬಾಕಿಯಿರುವುದಿಲ್ಲ. ಸಾವಿರಮಂದಿಯಲ್ಲಿ ಒಬ್ಬನು ಜ್ಞಾನಸಿದ್ಧಿಯನ್ನು ಹೊಂದಬೇಕೆಂದು ಪ್ರಯತ್ನಿಸುವನು. ಇಂಥಾ ಜ್ಞಾನಸಿದ್ಧಿಯನ್ನ ಹೊಂದಿದ ಸಾವಿರಾರು ಮನುಷ್ಯರಲ್ಲಿ ಒಬ್ಬನು ನನ್ನನ್ನು ಸರಿಯಾಗಿ ತಿಳಿಯುವನು. ನನ್ನ ಈ ಪ್ರಕೃತಿಯು ಎಂಟುವಿಧವಾಗಿ ಬೇರೆ ಬೇರೆಯಾಗಿ ಇರುವದು. ಅವು ಯಾವುವೆಂದರೆ:—ಭೂಮಿ, ನೀರು, ಬೆಂಕಿ, ಘಾಳಿ, ಆಕಾಶ, ಮನಸ್ಸು, ಬುದ್ಧಿ, ಮತ್ತು, ಅಹಂಕಾರ. ಈ ಸಾಮಾನ್ಯವಾದ ಎಂಟು ತತ್ವಗಳಿಗಿಂತಲೂ ಬೇರೆಯಾಗಿಯೂ, ಶ್ರೇಷ್ಠವಾಗಿಯೂ, ಜಗತ್ತನ್ನೆಲ್ಲಾ ಧರಿಸುವಂಥಾದ್ದಾಗಿಯೂ, ಜೀವಸ್ವರೂಪವಾಗಿಯೂ, ಇರುವ ನನ್ನ ಚೇತನ ಪ್ರಕೃತಿಯನ್ನು ತಿಳಿ. ಈ ಚೆತನಾಚೇತನವೆಂಬ ಈ ಎರಡು ವಿಧವಾದ ನ್ನ

ನ್ನ ಪ್ರಕೃತಿಗಳಿಂದಲೆ ಸಮಸ್ತ ಭೂತಗಳೂ
ಉಂಟಾದವೆಂದು ತಿಳಿ. ಸಮಸ್ತವಾದ ಪ್ರಪಂಚ
ವನ್ನೂನಾನೇ ಉಂಟುಮಾಡಿದವನು. ನಾನೇ ನಾಶ
ವನ್ನೂ ಮಾಡುವೆನು. ನನಿಗಿಂತಲೂ ಶ್ರೇಷ್ಠವಾ
ದದ್ದು ಬೇರೊಂದು ಪದಾರ್ಥವೂಯಿಲ್ಲ. ಈ ಸಮ
ಸ್ತ ಪ್ರಪಂಚವೂ ಧಾರದಲ್ಲಿ ಮಣಿಗಳು ಆಶ್ರಯಿಸಿ
ಕೊಂಡಿರುವಂತೆ ನನ್ನಲ್ಲಿ ಆಸ್ರುಯಿಸಿಕೊಂಡು ಇ
ರುವವು.

ಎಲೈ ಅರ್ಜುನ! ನನ್ನನ್ನು ನೀರಿನಲ್ಲಿ ಯಿರುವ
ರಸವೆಂತ್ರಲೂ, ಚಂದ್ರಸೂರ್ಯರಲ್ಲಿ ಇರುವ ಕಾಂತಿ
ಯೆಂತಲೂ, ಸಮಸ್ತವೇದದಲ್ಲಿಯೂ ಯಿರುವ ಆದ್ಯಂ
ತಾಕ್ಷರವಾದ ಓಂಕಾರವೆಂತಲೂ, ಆಕಾಶದಲ್ಲಿ ಇ
ರುವ ಶಬ್ದವೆಂತಲೂ, ಮನುಷ್ಯರಲ್ಲಿ ಇರುವ ಪಾ
ರುಷವೆಂತಲೂ, ಭೂಮಿಯಲ್ಲಿ ಇರುವ ಸುಗಂಧವೆಂ
ತಲೂ, ಅಗ್ನಿಯಲ್ಲಿ ಇರುವ ತೇಜಸ್ಸೆಂತಲೂ, ಸಮ
ಸ್ತ ಪ್ರಾಣಿಗಳಿಗೂ ಜೀವಭೂತನಾದವನೆಂತಲೂ,
ಜೀವನವೂ ಎಂತಲೂ, ತಪಸ್ವಿಗಳಲ್ಲಿ ಇರುವ ತಪ
ಸ್ಸೆಂತಲೂ, ಸಮಸ್ತಪ್ರಾಣಿಗಳಿಗೂ ಆದಿಕಾರಣನೆಂ
ತಲೂ, ಬುದ್ಧಿವಂತರಲ್ಲಿ ಇರುವ ಬುದ್ಧಿಯೆಂತಲೂ,
ತೇಜಸ್ಸು ಉಳ್ಳವರಲ್ಲಿ ಇರುವ ತೇಜಸ್ಸೆಂತಲೂ, ಬ
ಲವಂತರಲ್ಲಿ ಇರುವ (ಕಾಮರಾಗವಲ್ಲದಂಥಾ) ಬಲ
ವೆಂತ್ರಲೂ, (ಧರ್ಮಕ್ಕೆ ವಿರೋಧವಿಲ್ಲದಂಥಾ) ಪ್ರಜೆಗ

ಳಲ್ಲಿ ಇರುವ ಕಾಮವೆಂತಲೂ, ತಿಳಿ. ಸತ್ವರಜಸ್ತಮೋಗುಣಗಳಿಂದುಂಟಾದ ವಸ್ತುಗಳೆಲ್ಲಾ ನನ್ನಿಂದಲೇ ಉಂಟಾದವೆಂದು ತಿಳಿ. ನಾನು ಅವುಗಳಿಗೆ ಸ್ವಾಧೀನನಾದವನಲ್ಲ. ಆದರೆ ಅವುಗಳೆಲ್ಲಾ ನನಗೆ ಸ್ವಾಧೀನವಾದವುಗಳು. ಈ ಸತ್ವ ರಜಸ್ತಮೋಗುಣಗಳಿಂದುಂಟಾದ ವಸ್ತುಗಳು ದೇಹರೂಪವಾಗಿಯೂ, ಇಂದ್ರಿಯರೂಪವಾಗಿಯೂ, ಭೋಗ್ಯರೂಪವಾಗಿಯೂ, ಇರುವ ಮೂರುಭಾವನೆಗಳಿಂದಲೂ ಈ ಸಮಸ್ತ ಪ್ರಪಂಚವೂ ಅಜ್ಞಾನದಿಂದ ಮೋಹಿತವಾಗಿ, ಇವೆಲ್ಲಕ್ಕಿಂತಲೂ ಪರಮಶ್ರೇಷ್ಠನಾಗಿಯೂ, ನಾಶರಹಿತನಾಗಿಯೂ, ಇರುವ ನನ್ನನ್ನ ಅರಿಯಲಾರದು. ಈಸತ್ವ ರಜಸ್ತಮೋಗುಣಸ್ವರೂಪವಾದ ನನ್ನಮಾಯೆ ಯೆಂಬ ಹೆಸರುಳ್ಳ ಈ ಪ್ರಕೃತಿಯು, ದೈವಸಂಬಂಧ ವಾದದ್ದೇ ಹೊತರ್ಗ ಅನ್ಯಥಾ ಅಲ್ಲವಾದ್ದರಿಂದ ಅದು ಯಾರಿಂದಲೂ ದಾಟಲು ಅಸಾಧ್ಯವಾದದಲ್ಲವೆ ! ಹೀಗಿದ್ದರೂ ಕೂಡ ಯಾರು ನನ್ನನ್ನೆ 'ನೀನೇ ಗತಿ' ಎಂದು ಹೊಂದುವರೊ, ಅಂಥವರು ಈತ್ರಿಗುಣಾತ್ಮಕವಾದ ಮಾಯೆಯನ್ನ ದಾಟಿ, ನನ್ನನ್ನೆ ಭಕ್ತಿಯಿಂದ ಭಜಿಸುವರು. ಆದರೆ ಪಾಪಕೃತ್ಯಗಳನ್ನು ಮಾಡಿಕೊಂಡು, ಅಜ್ಞಾನಿಗಳಾಗಿ, ಈ ನನ್ನ ಮಾಯೆಯಿಂದ ಅಪಹರಿಸಲ್ಪಟ್ಟ ಚಿತ್ತವನ್ನುಳ್ಳವರಾಗಿ, ರಾಕ್ಷಸಸ್ವಭಾವಗಳನ್ನ ಹೊಂದಿದ್ದು,

ಥಾ ನೀಚಪುರುಷರು ನನ್ನನ್ನು ಹೊಂದುವದಿಲ್ಲ. ದುಃಖಪೀಡಿತನಾದವನೂ, ಜ್ಞಾನಸಂಪಾದನೆಯಲ್ಲಿ ಬುದ್ಧಿಯುಳ್ಳವನೂ, ದ್ರವ್ಯಾಪೇಕ್ಷೆಯುಳ್ಳವನೂ, ಜ್ಞಾನಿಯೂ, ಎಂಬೀನಾಲ್ಕು ವಿಧವಾದ ಪುಣ್ಯವಂತರು ನನ್ನನ್ನು ಹೊಂದುವರು. ಈ ನಾಲ್ವರಲ್ಲಿ ದೃಢವಾದ ಅಧ್ಯವಸಾಯದಿಂದ ನನ್ನಲ್ಲಿಯೆ ಭಕ್ತಿಯುಳ್ಳಂಥಾ ಜ್ಞಾನಿಯು ಶ್ರೇಷ್ಠತಮನಾದವನು. ಅವನಲ್ಲಿ ನನಗೆ ಬಹಳ ಪ್ರೇಮವೂ ನನ್ನಲ್ಲಿ ಅವನಿಗೆ ಬಹಳಪ್ರೇಮವೂ ಪರಸ್ಪರವಾಗಿಇರುವದು. ಈ ಮೇಲೆ ಹೇಳಿದ ನಾಲ್ಕುವಿಧವಾದ ಪುಣ್ಯವಂತರಲ್ಲಿ ಎಲ್ಲರೂ ಶ್ರೇಷ್ಠರೆ ಸರಿ. ಆದರೂ ಅವರಲ್ಲಿ ಜ್ಞಾನಿ ಎನಿಸಿಕೊಳ್ಳುವನು ನನಗೆ ಸಮಾನವಾದವನೆಂದು ನನ್ನ ಅಭಿಪ್ರಾಯವು. ಇದುಯಾಕಂದರೆ ಅವನು ಸ್ಥಿರಬುದ್ಧಿಯಿಂದ ನನ್ನನ್ನೇ ಅವನಿಗೆ ಎಲ್ಲಕ್ಕಿಂತಲೂ ಶ್ರೇಷ್ಠವಾದ ಗತಿಯೆಂದು ನಂಬಿಥಾನಷ್ಟೆ. ಅನೇಕಜನ್ಮಗಳನ್ನು ಎತ್ತಿದನಂತರ, ಯಾವ ಮನುಷ್ಯನು ಸಮಸ್ತ ವಸ್ತುವನ್ನೂ ಭಗವಂತನ ಪ್ರತಿಬಿಂಬವೆಂತಲೇ ತಿಳಿದು ನನ್ನನ್ನು ಭಜಿಸುವನೊ, ಅಂಥಾ ಮಹಾತ್ಮನು ಬಹಳ ದುರ್ಲಭನಾದಂಥವನು. ಸಾಮಾನ್ಯವಾಗಿ ಇತರರೆಲ್ಲಾ ಅವರವರ ಪ್ರಕೃತಿ ಸಂಬಂಧದಿಂದ ಕಟ್ಟಲ್ಪಟ್ಟು, ಆಯಾಸತ್ವರಜಸ್ತಮೋಗುಣಗಳಿಂದ ಉಂಟಾದ ಆಸೆಗಳಿಂದ ಪೀಡಿತರಾಗಿ, ಜ್ಞಾನಕೆಟ್ಟು, ದೇವತಾಂತರಗಳನ್ನ ಆಯಾ

ಕ್ಷುದ್ರದೇವತೆಗಳಿಗೆ ನಿಯಾಮಕವಾದ ಕ್ರಮವನ್ನು ಅನುಸರಿಸಿ ಭಜಿಸುವರು, ಯಾವಯಾವ ಭಕ್ತನು ಯಾವಯಾವ ದೇವತೆಯನ್ನ ಶ್ರದ್ಧೆಯಿಂದ ಪೂಜಿಸಲು ಇಚ್ಛಿಸುವನೊ, ಅಂಥಾ ಭಕ್ತನ ತಾದೃಶವಾದ ಶ್ರದ್ಧೆಯನ್ನ ಚಲಿಸದೆ ಇರುವಹಾಗೆ ಮಾಡುವೆನು. ಅಂಥಾ ಭಕ್ತನು, ಹಾಗೆ ಚಲಿಸದಂಥಾ ವಿಶ್ವಾಸವನ್ನು ಉಳ್ಳವನಾಗಿ, ಆ ದೇವತಾರಾಧನವನ್ನ ಮಾಡಲು ಇಚ್ಛಿಸುವನು. ಹಾಗೆಯೆ ಮಾಡಿ ಅದರಿಂದಲೆ ನನ್ನಿಂದ ಏರ್ಪಡಿಸಲ್ಪಟ್ಟಂಥಾ ಇಷ್ಟಕಾಮ್ಯಾರ್ಥಗಳನ್ನ ಹೊಂದುತ್ತಾನಷ್ಟೆ. ಇಂದ್ರಾದಿ ದೇವತೆಗಳನ್ನ ಆರಾಧಿಸುವರು ಆ ದೇವತೆಗಳನ್ನು ಹೊಂದುವರು. ಆ ದೇವತೆಗಳು ಪರಮಾತ್ಮನ ಶರೀರವೆಂದು ತಿಳಿಯದೆ ಇರುವ ಮೂಢಾತ್ಮರಿಗೆ ಲಭಿಸುವ ಆ ಫಲವು ಶೀಘ್ರದಲ್ಲಿಯೇ ಕ್ಷಯಿಸಿ ಹೋಗಿ ನಾಶ ಹೊಂದತಕ್ಕದ್ದು. ಹಾಗಿಲ್ಲದೆ ನನ್ನನ್ನೆ ಭಜಿಸುವಂಥಾ ನನ್ನ ಭಕ್ತರು ನನ್ನನ್ನೆ ಹೊಂದುವರು. ನಾಶರಹಿತವಾಗಿಯೂ, ಶ್ರೇಷ್ಟತಮವಾಗಿಯೂ, ಇರುವ ನನ್ನ ಪರಮಾತ್ಮ ಸ್ವಭಾವವನ್ನ ತಿಳಿಯದಂಥಾ ಜ್ಞಾನಶೂನ್ಯರು, ಯಾರ ಕಣ್ಣಿಗೂ ಕಾಣಿಸದಂಥಾ ನನ್ನನ್ನ, ವ್ಯಕ್ತವಾಗಿಯೂ, ಕರ್ಮಪ್ರಾಪ್ತವಾಗಿಯೂ, ಇರುವ ಜನ್ಮವನ್ನ ಎತ್ತಿರುವವನಂತೆ ಎಣಿಸುವರು. ಕರ್ಮ ಜನಿತವಲ್ಲದ, ಸ್ವೇಚ್ಛಾಸೃಷ್ಟಿ ಎಂಬ ಮಾಯೆಯಿಂದ, ನನ್ನಪ್ರಕಾ

ರ ವಿಂ ಶಾದ್ದೆಂದು ತಿಳಿಯುವಂತೆ ಮರೆಮಾಡಿಕೊಂಡು ಇರುವ ನಾನು, ಎಲ್ಲರಿಗೂ ಗೋಚರವಾಗುವುದಿಲ್ಲ. ಆದ್ದರಿಂದಲೇ ಈ ಮೂಢಾತ್ಮರಿಂದ ಕೂಡಿದ ಈ ಪ್ರಪಂಚವು, ನನ್ನನ್ನ ಜನನ ಮರಣವಿಲ್ಲದವನೆಂದು ತಿಳಿಯದು. ಭೂತ, ಭವಿಷ್ಯತ್, ವರ್ತನವಾಗಿ ಇರುವ ಪ್ರಾಣಿಗಳನ್ನೆಲ್ಲಾ ನಾನು ಅರಿಯುವೆನು. ಆದರೆ ನನ್ನನ್ನು ಯಾರೂ ಸರಿಯಾಗಿ ತಿಳಿದವರಿಲ್ಲ.

ಎಲೈ ಅರ್ಜುನ! ಇಚ್ಛಾದ್ವೇಷದಿಂದ ಉಂಟಾಗಿರುವ ಶೀತ,ಉಷ್ಣ. ಸುಖ, ದುಃಖ,ಗಳೇ ಮೊದಲಾದ ದ್ವಂದ್ವಗಳೆಂಬ ಮೋಹಕಾರಣಗಳಿಂದ ಸಮಸ್ತ ಪ್ರಾಣಿಗಳೂ ಹುಟ್ಟುವಾಗಲೆ ವಿಪರೀತಬುದ್ಧಿಯನ್ನ ಹೊಂದುತ್ತಾರೆ. ಪುಣ್ಯವನ್ನ ಮಾಡಿಕೊಂಡಿರುವ ಯಾವಜನಗಳ ಪಾಪವು ನಾಶವನ್ನ ಹೊಂದಿತೊ, ಅಂಥಾ ಜನಗಳು ಈ ಮೇಲೆಹೇಳಿದ ದ್ವಂದ್ವಾಕಾರವುಳ್ಳ ಮೋಹದಿಂದ, ಬಿಡಲ್ಪಟ್ಟವರಾಗಿಯೂ, ಧೃಢಸಂಕಲ್ಪದಿಂದ ಕೂಡಿದವರಾಗಿಯೂ, ನನ್ನನ್ನೇ ಭಜಿಸುವರು. ಯಾರುನನ್ನನ್ನ ಆಶ್ರಯಿಸಿಕೊಂಡು,ವಾರ್ಧಿಕ್ಯದಿಂದಲೂ, ಮರಣದಿಂದಲೂ, ಬಿಡಲ್ಪಡಬೇಕೆಂದು ಯತ್ನಿಸುವರೋ,ಅಂಥವರು ಆ ಪರಬ್ರಹ್ಮನನ್ನೂ ಅಧ್ಯಾತ್ಮವನ್ನೂ ಸಕಲಕರ್ಮವನ್ನೂ, ತಿಳಿಯುವರು. ಅಧಿಭೂತದಿಂದಲೂ, ಅಧಿದೈವದಿಂದಲೂ, ಅಧಿಯಜ್ಞದಿಂದಲೂ,

ನನ್ನನ್ನ ಕೂಡಿದವನೆಂದು ಯಾರು ಮರಣಕಾಲದಲ್ಲಿ ಯೂ ತಿಳಿಯುವರೋ, ಅಂಥವರೆ ಸಾವಧಾನಮನ ಸ್ಕರಾಗಿ ನನ್ನನ್ನ ತಿಳಿದಂಥವರು.

ಇತಿ ಜ್ಞಾನ ವಿಜ್ಞಾನ ಯೋಗವೆಂಬ ಏಳನೇ
ಅಧ್ಯಾಯು ಸಮಾಪ್ತವಾಯಿತು.

ಅಕ್ಷರಬ್ರಹ್ಮಯೋಗವೆಂಬ ಎಂಟನೆಯು
ಅಧ್ಯಾಯುಪ್ರಾರಂಭ.

ಅರ್ಜುನ :—ಅಯ್ಯಾ ಪುರುಷೋತ್ತಮ ಆ ಬ್ರಹ್ಮವು ಯಾವುದು ? ಅಧ್ಯಾತ್ಮವು ಯಾವುದು ? ಕರ್ಮವು ಯಾವುದು ? ಅಧಿಭೂತವೆಂದರೇನು ? ಅಧಿದೈವವೆಂಬುದು ಯಾವುದು; ? ಅಧಿಯಜ್ಞವೆಂಬುವದು ಹ್ಯಾಗೆ ? ಅದುಯೇನು? ಈದೇಹದಲ್ಲಿ ಮನಸ್ಸನ್ನ ನಿಗ್ರಹಿಸಿಕೊಂಡು ಇರುವಂಥವರಿಂದ ಮರಣಕಾಲದಲ್ಲಿ ನೀನುಹ್ಯಾಗೆ ತಿಳಿಯತಕ್ಕವನಾಗಿದ್ದಿ ? ಇದನ್ನೆಲ್ಲಾ ತಿಳಿಸಬೇಕು ಸ್ವಾಮಿ.

ಶ್ರೀ ಭಗವಾನ್:—ಆ ಬ್ರಹ್ಮವೆಂಬುವದು ನಾಶರಹಿತವಾಗಿಯೂ ಉತ್ತಮವಾಗಿಯೂ ಇರುವ ಆತ್ಮಸ್ವರೂಪವು. ಈ ಆತ್ಮಸ್ವರೂಪದ ಸ್ವಭಾವವನ್ನೆ ಅಧ್ಯಾತ್ಮವೆಂದು ಹೇಳುವರು. ಪ್ರಾಣಿಗಳ ದೇಹವನ್ನು ಉಂಟುಮಾಡುವಂಥಾ ಶುಕ್ಲ ವಿಸರ್ಜನೆಯೇ ಕರ್ಮವೆನ್ನಲ್ಪಡುವದು. ದೇಹಧಾರಣೆಮಾಡಿಕೊಂಡುಇರುವವರಲ್ಲೆಲ್ಲಾ ಶ್ರೇಷ್ಟನಾದ ಎಲೈ ಅರ್ಜುನಾ ! ನಾಶ

ಸ್ವಭಾವವುಳ್ಳಂಥಾ ದೇಹಾದಿಗಳೆಲ್ಲಾ ಅಧಿಭೂತವೆನ್ನಲ್ಪಡುವದು. ದೇವತೆಗಳಲ್ಲೆಲ್ಲಾ ಶ್ರೇಷ್ಟನಾದ ಬ್ರಹ್ಮನೇ ಅಧಿದೈವವೆಂದು ಹೇಳಲ್ಪಡುವದು. ಈ ದೇಹಗಳಲ್ಲೆಲ್ಲಾ ಅಂತರ್ಯಾಮಿಯಾಗಿ ಕೂತುಕೊಂಡು, ಯಜ್ಞವನ್ನು ನಡಿಸುತ್ತಲೂ, ಯಜ್ಞಫಲವನ್ನು ಕೊಡುತ್ತಲೂ, ಆ ಯಜ್ಞಫಲವನ್ನ ಅನುಭವಿಸುತ್ತಲೂ, ಇರುವ ಶ್ರೀಮನ್ನಾರಾಯಣಮೂರ್ತಿಯಾದ ನಾನೇ, ಅಧಿಯಜ್ಞವೆನ್ನಲ್ಪಡುವೆನು. ಶರೀರವನ್ನು ಬಿಡುವಕಾಲದಲ್ಲಿ ನನ್ನನ್ನೇಸ್ಮರಿಸಿಕೊಂಡು ಯಾವನೋನುಮರಣವನ್ನು ಹೊಂದುವನೋ, ಅವನು ನನ್ನಸ್ವಭಾವವನ್ನೇ ಹೊಂದುವನು. ಇದಕ್ಕೆಸಂದೇಹವೇಇಲ್ಲ. ಮುಕ್ತಾಯಕಾಲದಲ್ಲಿ ಯಾವ ಯಾವ ಆಕಾರವುಳ್ಳಂಥಾ ವಸ್ತುವನ್ನು ಸ್ಮರಿಸಿಕೊಂಡು ಈ ದೇಹವನ್ನಬಿಡುವನೋ,ಆಯಾ ಆಕಾರವನ್ನ ಧ್ಯಾನಿಸಿಕೊಂಡಿರುವನಾದ್ದರಿಂದ, ಆಯಾ ಭಾವವನ್ನೇ ಹೊಂದುವನು. ಆದ್ದರಿಂದ ಸಮಸ್ತಕಾಲದಲ್ಲಿಯೂನನ್ನನ್ನೇಸ್ಮರಿಸಿಕೊಂಡು ಯುದ್ಧವನ್ನುಮಾಡು. ನಿನ್ನಮನಸ್ಸನ್ನೂ, ಬುದ್ಧಿಯನ್ನೂ, ನನ್ನಲ್ಲಿ ಸಮರ್ಪಿಸಿ, ನನ್ನನ್ನೇ ಹೊಂದುವಿ. ಇದಕ್ಕೆ ಸಂದೇಹವೇಇಲ್ಲ. ಅಭ್ಯಾಸವೆಂಬುವಂಥಾ ಉಪಾಯದಿಂದಾಕೂಡಿದ, ಇತರ ವಿಷಯಗಳಲ್ಲಿ ಚಲಿಸದೆಇರುವಂಥ ಮನಸ್ಸಿನಿಂದ, ಶ್ರೇಷ್ಠತರವಾದ ದಿವ್ಯಸ್ವರೂಪವುಳ್ಳಂಥಾ ಪು

ರುಷನನ್ನೇ ಧ್ಯಾನಿಸಿಕೊಂಡು ನನ್ನನ್ನೇ ಹೊಂದುವಿ. ಯಾವಮನುಷ್ಯನು ಪಂಡಿತನಾಗಿಯೂ, ಪುರಾತನ ಪುರುಷನಾಗಿಯೂ, ಸಕಲಲೋಕ ನಿಯಾಮಕನಾಗಿಯೂ, ಸೂಕ್ಷ್ಮಕ್ಕಿಂತಲೂ ಸೂಕ್ಷ್ಮವಾಗಿಯೂ, ಸಮಸ್ತಲೋಕವನ್ನೂ ಸೃಷ್ಟಿಸಿ ರಕ್ಷಿಸುವಂಥಾವನಾಗಿಯೂ, ಚಿಂತಿಸಲೂಕೂಡ ಅಸಾಧ್ಯವಾದಂಥಾ ರೂಪವನ್ನು ಉಳ್ಳವನಾಗಿಯೂ, ಮಾಯೆಗೆ ವಳಪಡದವನಾಗಿಯೂ, ತೇಜೋಮಯನಾಗಿಯೂ, ಇರುವಂಥಾ ದಿವ್ಯಸ್ವರೂಪವುಳ್ಳಂಥಾ ಪರಮಪುರುಷನನ್ನು, ಭಕ್ತಿಯಿಂದಲೂ, ಯೋಗಾಭ್ಯಾಸದಿಂದಲೂ, ನಿಶ್ಚಲಮನಸ್ಕನಾಗಿ, ಪ್ರಾಣವಿಯೋಗ ಕಾಲದಲ್ಲಿ ಭ್ರೂಮಧ್ಯಭಾಗದಲ್ಲಿ ಪ್ರಾಣವಾಯುವನ್ನ ಸ್ಥಿರವಾಗಿ ನಿಲ್ಲಿಸಿಕೊಂಡು, ಯಾವ್ನೋನು ಸ್ಮರಿಸುತ್ತಾನೆಯೋ, ಅವನು ಆ ಪರಮ ಪುರುಷನನ್ನ ಹೊಂದುವನು. ವೇದಾರ್ಥವನ್ನು ಅರಿತವರು ಯಾವದನ್ನು ನಾಶರಹಿತವಾದದ್ದೆಂದು ಹೇಳುವರೂ, ಆಶೆಗಳನ್ನೆಲ್ಲಾ ಬಿಟ್ಟಂಥಾ ಯತಿಗಳು ಯಾವದನ್ನ ಪ್ರವೇಶಿಸುವರೊ, ಯಾವದನ್ನ ಇಚ್ಛೈಸಿಕೊಂಡು ಬ್ರಹ್ಮಚರ್ಯವನ್ನ ಅನುಷ್ಠಿಸುತ್ತಾರೆಯೊ, ಅಂಥಾ ಆಸ್ಥಾನವನ್ನ ನಿನಗೆ ಸಂಗ್ರಹವಾಗಿ ಹೇಳುವೆನು. ಯಾವ ಮನುಷ್ಯನು ತನ್ನ ಸಮಸ್ಥವಾದ ಇಂದ್ರಿಯಗಳನ್ನೂ ಛನ್ನಾಗಿ ನಿಗ್ರಹಿಸಿಕೊಂಡು, ತನ್ನ ಮನಸ್ಸನ್ನ, ಹೃದಯದಲ್ಲೆವಾ

ಸಮಾಡಿಕೊಂಡು ಇರುವ, ನನ್ನಲ್ಲಿಯೆ ನಿಲ್ಲಿಸಿಕೊಂಡು, ತನ್ನ ಪ್ರಾಣವಾಯುವನ್ನ ಬ್ರಹ್ಮರಂಧ್ರದಲ್ಲಿ ಇಟ್ಟು, ಯೋಗಾಭ್ಯಾಸದಲ್ಲಿ ಕೂತು, ಒಂದೇ ಅಕ್ಷರವಾಗಿಯೂ, ಭಗವದ್ವಾಚಕವಾಗಿಯೂ, ಇರುವ 'ಓಂ' ಎಂಬುವ ಅಕ್ಷರವನ್ನು ಉಚ್ಚರಿಸಿಕೊಂಡು, ನನ್ನನ್ನು ಸ್ಮರಿಸುತ್ತ ದೇಹವನ್ನು ಬಿಟ್ಟು, ಯಾವನು ಮರಣವನ್ನು ಹೊಂದುವನೋ, ಅಂಥವವನು ಶ್ರೇಷ್ಠವಾದ ಗತಿಯನ್ನು ಹೊಂದುವನು. ಯಾವೋನು ನನ್ನನ್ನು ಯಾವಾಗಲೂ ಏಕಾಗ್ರಚಿತ್ತನಾಗಿ ಸ್ಮರಿಸುವನೋ ಅಂಥಾ ಸ್ಥಿರಬುದ್ಧಿಯುಳ್ಳ ಯೋಗಿಗೆ ನಾನು ಸುಲಭನಾಗಿಇರುವೆನು. ಮಹಾತ್ಮರು ನನ್ನನ್ನು ಹೊಂದಿ, ಶ್ರೇಷ್ಟವಾದಸ್ಥಾನವನ್ನು ಪಡದವರಾಗಿ, ದುಃಖಗಳಿಗೆ ವಾಸಸ್ಥಾನವಾಗಿಯೂ, ಶಾಶ್ವತವಲ್ಲದೆಯೂ, ಇರುವಂಥಾ ಪುನರ್ಜನ್ಮವನ್ನು ಹೊಂದುವುದಿಲ್ಲ. ಬ್ರಹ್ಮಲೋಕದಿಂದ ಹಿಡಿದು ಭೂಲೋಕದಪರ್ಯಂತ ಎಲ್ಲವೂ ಲಯವನ್ನುಹೊಂದಿ ಪುನಶ್ಚ ಉಂಟಾಗತಕ್ಕದ್ದಾಗಿಇಧೆ. ಆದರೆ ನನ್ನನ್ನು ಹೊಂದಿದನಂತರ ಪುನರ್ಜನ್ಮವೆಂಬುವದೇ ಇಲ್ಲವೆಂದು ತಿಳಿಯಯ್ಯಾ ಅರ್ಜುನಾ ? ಯಾವೋನು ಬ್ರಹ್ಮದೇವರ ಒಂದು ಹಗಲಿನಲ್ಲಿ ಸಮ್ಮಸಾವಿರಯುಗಗಳು ಇಧೆಯೆಂತಲೂ, ಅದೇಮೇರ್ರಿಗೆ ರಾತ್ರಿಯಲ್ಲಿಯೂ ಇಧೆಯೆಂತಲೂ, ತಿಳಿದಿರುವನೋ ಅಂಥವನು ಬ್ರಹ್ಮನ ಅಹೋರಾತ್ರಿ

ಇಷ್ಟ ಪರಿಮಾಣವುಳ್ಳದೆಂದು ತಿಳಿದಂಥವನು. ಕಾಣದಂಥಾ ಸಮಸ್ತ ವ್ಯಕ್ತಿಗಳೂ ಬ್ರಹ್ಮನದೇಹದಿಂದ ಅವನ ಹಗಲಿನಲ್ಲಿ ಉಂಟಾಗುವವು. ತಿರುಗಿ ಅವನಿಗೆ ರಾತ್ರಿ ಯಾದಾಗ ಅವನಲ್ಲಿಯೇ ಲಯವನ್ನು ಹೊಂದುವವು. ಬ್ರಹ್ಮನ ಉದಯಕಾಲದಲ್ಲಿ ಉಂಟಾಗಿ ಅವನ ಅಸ್ತಮಾನ ಕಾಲದಲ್ಲಿ ನಾಶಹೊಂದುವಂಥಾ ಕರ್ಮಾಧೀನವಾದ ಭೂತಗಳ ಸಮೂಹವು ಪದೇಪದೆ ಉಂಟಾಗಿ ಲಯವನ್ನು ಹೊಂದುವದು. ಯಾವಪದಾರ್ಥವು ಆ ಅವ್ಯಕ್ತಕ್ಕಿಂತಲೂ ಬೇರೆಯಾಗಿಯೂ, ಶ್ರೇಷ್ಟವಾಗಿಯೂ, ಸೃಷ್ಟಿಯಾಗದೆಯೂ, ಅನಾದಿಯಾಗಿಯೂ, ಇಧೆಯೊ ಅದು ಸಮಸ್ತ ಪದಾರ್ಥವೂ ನಾಶಹೊಂದಿದರೂ ಅದು ಹಾಗೆ ನಾಶಹೊಂದುವುದಿಲ್ಲ. ಯಾವ ವಸ್ತುವು ವ್ಯಕ್ತವಲ್ಲದ್ದೆಂತಲೂ, ನಾಶವಿಲ್ಲದ್ದೆಂತಲೂ, ಹೇಳಲ್ಪಡುವದೊ ಆ ವಸ್ತುವನ್ನು ಶ್ರೇಷ್ಠವಾದ ಗತಿ ಎಂದು ಹೇಳುವರು. ಯಾವದನ್ನುಹೊಂದಿ ಪುನಃ ಹಿಂತಿರುಗುವುದಿಲ್ಲವೊ, ಆ ಶ್ರೇಷ್ಟವಾದ ಸ್ಥಾನವು ನನ್ನದು. ಸಮಸ್ತವಾದಂಥಾ ಪ್ರಾಣಿಗಳೂ ಯಾರ ಶರೀರದಲ್ಲಿ ಅಡಗಿರುವವೊ, ಯಾರಿಂದ ಈ ಜಗತ್ತೆಲ್ಲಾ ವ್ಯಾಪ್ತವಾಗಿ ಇಧೆಯೊ, ಅಂಥಾ ಪರಮಪುರುಷನು, ದೇವತಾಂತರ ಸಂಮಂಧವಿಲ್ಲದಂಥಾ ಭಕ್ತಿಯಿಂದ ಹೊಂದಲ್ಪಡತಕ್ಕಂಥವನು.

ಎಲೈ ಅರ್ಜುನನೆ:—ಯೋಗಿಗಳು ಯಾವಕಾ

ಲದಲ್ಲಿ ಪುನರ್ಜನ್ಮವಿಲ್ಲದೇ ಹೋಗುತ್ತಾರೆಯೊ, ಮತ್ಯಾವಕಾಲದಲ್ಲಿ ಪುನರ್ಜನ್ಮವನ್ನು ಎತ್ತುತ್ತಾರೆಯೊ, ಆ ಕಾಲವನ್ನು ತಿಳಿಸುತ್ತೇನೆ ಕೇಳು. ಅಗ್ನಿ ಸ್ವರೂಪವಾದ ತೇಜಸ್ಸಿಗೆ ಅಧಿಷ್ಠಾನ ದೇವತೆಯೂ,ಹಗಲಿನ ಅದಿಷ್ಠಾನ ದೇವತೆಯೂ, ಶುಕ್ಲಪಕ್ಷದ ಅಧಿಷ್ಠಾನ ದೇವತೆಯೂ, ಉತ್ತರಾಯಣವೆಂಬುವಂಥಾ ಆರುತಿಂಗಳುಗಳ ಅಧಿಷ್ಠಾನದೇವತೆಯೂ, ಇವರೇ ಮೊದಲಾದವರು ಇರುವ ಲೋಕಗಳ ಮಾರ್ಗವಾಗಿ ಹೋಗಇರುವ ಬ್ರಹ್ಮಜ್ಞಾನಿಗಳು ಬ್ರಹ್ಮನನ್ನೇ ಹೊಂದುವರು. ಈವರಿಗೆ ಪುನ ರ್ಜನ್ಮವಿಲ್ಲ. ಹಾಗಿಲ್ಲದೆ ಹೊಗೆಯು ಅಧಿಷ್ಠಾನದೇವತೆಯೂ, ರಾತ್ರಿಯು ಅಧಿಷ್ಠಾನ ದೇವತೆಯೂ, ಕೃಷ್ಣಪಕ್ಷದ ಅಧಿಷ್ಠಾನದೇವತೆಯೂ, ದಕ್ಷಿಣಾಯನವೆಂಬಂಥ ಆರು ತಿಂಗಳುಗಳ ಅಧಿಷ್ಠಾನ ದೇವತೆಯೂ, ಇವರುಗಳೇ ಮೊದಲಾದವರು ಯಾವ ಮಾರ್ಗದಲ್ಲಿ ಇದ್ದಾರೆಯೊ, ಆ ಮಾರ್ಗವಾಗಿ ಹೋಗುವಂಥಾ ಯೋಗಿಗಳು ಚಂದ್ರಸಂಬಂಧವಾದ ಪ್ರಕಾಶವುಳ್ಳ ಲೋಕವನ್ನು ಹೊಂದಿ, ಹಿಂತಿರುಗುವರು. ಈ ಶುಕ್ಲ ಕೃಷ್ಣವೆಂದು ಕರಿಯಲ್ಪಡುವಂಥಾ ಅರ್ಚಿರಾದಿ ಮಾರ್ಗವೂ, ಧೂಮಾದಿಮಾರ್ಗವೂ, ಪ್ರಪಂಚದಲ್ಲಿ ಇರುವ ಜ್ಞಾನಿ ಯೋಗಿಗಳಿಗೂ, ಕರ್ಮಯೋಗಿಗಳಿಗೂ, ಶಾಶ್ವತವಾಗಿ ಏರ್ಪಡಿಸಲ್ಪಟ್ಟದ್ದೆಂದು ತಿಳಿಯತಕ್ಕದ್ದು. ಮೊದಲು ಹೇಳಲ್ಪಟ್ಟ ಶು

ಕ್ಲ ಅಂದರೆ ಅರ್ಚಿರಾದಿ ಮಾರ್ಗವನ್ನು ಅನುಸರಿಸಿ ಹೋದ ಜ್ಞಾನಿಷ್ಠರು, ಪುನರ್ಜನ್ಮ ವಿಲ್ಲದಂಥಾ ಶ್ರೇಷ್ಠವಾದ ಗತಿಯನ್ನು ಹೊಂದುವರು. ಹಾಗಿಲ್ಲದೆ ಎರಡನೆ ಸ್ಥಲ ಹೇಳಲ್ಪಟ್ಟ ಕೃಷ್ಣಾ ಅಂದರೆ ಧೂಮಾದಿ ಮಾರ್ಗದಲ್ಲಿ ಪ್ರವೇಶಿಸಿದ ಕರ್ಮನಿಷ್ಠರು ಪುನಶ್ಚ ಜನ್ಮವನ್ನು ಎತ್ತುವರು. ಈ ಮೇಲೆ ಹೇಳಿದ ಎರಡು ಮಾರ್ಗವನ್ನೂ ತಿಳಿದಂಥಾ ಯೋಗಿಯು, ಯಾವನೂ ಮೋಹವನ್ನು ಹೊಂದುವುದಿಲ್ಲ. ಅವನ ಮರಣಕಾಲದಲ್ಲಿ ಅರ್ಚಿರಾದಿ ಮಾರ್ಗವನ್ನೇ ಅವಲಂಬಿಸುವನು. ಆದ್ದರಿಂದ ಸಮಸ್ತ ಕಾಲದಲ್ಲಿಯೂ ಯೋಗದಿಂದ ಕೂಡಿದವನಾಗಿ ಇರು. ವೇದಗಳಲ್ಲಿಯೂ, ಯಜ್ಞಗಳಲ್ಲಿಯೂ, ತಪಸ್ಸುಗಳಲ್ಲಿಯೂ, ದಾನಗಳಲ್ಲಿಯೂ, ಯಾವಯಾವ ಪುಣ್ಯಫಲವು ಹೇಳಿಧೆಯೊ, ಅದನ್ನೆಲ್ಲಾ ಈ ಮೇಲೆ ಉಪದೇಶಿಸಿದ ತತ್ವವನ್ನು ತಿಳಿದವನು ತಿರಸ್ಕರಿಸಿ, ಶ್ರೇಷ್ಠವಾದಂಥಾ ಮೊದಲು ಸ್ಥಾನವನ್ನೇ ಹೊಂದುವನು.

ಹೀಗೆ ಅಕ್ಷರಬ್ರಹ್ಮಯೋಗವೆಂಬ ಎಂಟನೇ
ಅಧ್ಯಾಯವು ಸಮಾಪ್ತವಾಯಿತು.

ರಾಜವಿದ್ಯಾರಾಜಗುಹ್ಯ ಯೋಗವೆಂಬ ಒಂಭತ್ತನೆ
ಅಧ್ಯಾಯ ಪ್ರಾರಂಭಃ.

ಶ್ರೀಭಗವಾನ್:—ಯಾವದನ್ನ ಚನ್ನಾಗಿ ತಿಳಿದುಕೊಂಡ ಅನುಷ್ಠಿಸಿ, ಸಮಸ್ತವಾದಂಥಾ ಪಾಪಗ

ಳಾಗುವ ಅಶುಭಗಳಿಂದ ಬಿಡಲ್ಪಡುವೆಯೊ, ಅಂಥಾ ಬಹಳ ರಹಸ್ಯವಾದ ಅನುಷ್ಠಾನ ಕ್ರಮವನ್ನ ತಿಳಿಸುವ ಜ್ಞಾನವನ್ನ, ಕೊಂಚವೂ ನನ್ನ ಮಹಿಮೆಗಳಲ್ಲಿ ಅಸೂಯೆ ಇಲ್ಲದಂಥಾ ನಿನಿಗೆ, ಹೇಳುವೆನು. ಈ ಜ್ಞಾನವು ವಿದ್ಯೆಗಳಲ್ಲೆಲ್ಲಾ ಶ್ರೇಷ್ಠವಾದದ್ದು, ರಹಸ್ಯಗಳಲ್ಲೆಲ್ಲಾ ವಿಶೇಷವಾದದ್ದು, ಪರಿಶುದ್ಧವಾದದ್ದು, ಸರ್ವೋತ್ತಮವಾದದ್ದು, ಪ್ರತ್ಯೆಕ್ಷವಾಗಿ ಪರಮಾತ್ಮನನ್ನೆ ತೋರಿಸುವಂಥಾದ್ದು, ಮೋಕ್ಷಪ್ರದವಾದದ್ದು, ಸುಲಭವಾಗಿ ಅನುಷ್ಠಿಸಬಹುದಾದ್ದು, ಮತ್ತು ನಾಶವಿಲ್ಲದೆ ಇರುವಂಥಾದ್ದು, ಈ ಮೋಕ್ಷಪ್ರದವಾದ ಅನುಷ್ಠಾನದಲ್ಲಿ ಶ್ರದ್ಧೆ ಇಲ್ಲದಂಥಾ ಜನಗಳು ನನ್ನನ್ನು ಹೊಂದದೇನೆ ಮೃತ್ಯುವಿನೋಪಾದಿಯಲ್ಲಿರುವ ಸಂಸಾರಮಾರ್ಗದಲ್ಲಿ ತಿರುಗೀ ಬಂದು ಸೇರುವರು. ಸಮಸ್ತ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿ ಇರುವನನ್ನಿಂದ ಈ ಲೋಕವೆಲ್ಲವೂ ವ್ಯಾಪ್ತವಾಗಿಧೆ. ಸಮಸ್ತ ಪ್ರಾಣಿಗಳೂ ನನ್ನಲ್ಲಿ ಇರುವವು. ಆದರೆ ನಾನು ಅವುಗಳಲ್ಲಿ ಇರುವುದಿಲ್ಲ. ಅಂದರೆ, ನನಿಗೆ ಅವುಗಳು ಆಧಾರವಾಗಲಾರವು. ಸಮಸ್ತ ಭೂತಗಳೂ ನನ್ನಲ್ಲಿ ಇದ್ದರೂ, ನಾನು ಒಂದನ್ನೂ ಅಂಟಿಸಿಕ್ಕೊಂಡು ಇಲ್ಲ. ಈಶ್ವರನಿಗೊಬ್ಬನಿಗೇನೆ ಅಸಾಧಾರಣವಾಗಿ ಇರುವ ಈ.ನನ್ನ ಶಕ್ತಿಯನ್ನು ನೋಡು. ನನ್ನ ಸಂಕಲ್ಪವು ಸಮಸ್ತ ಪ್ರಾಣಿಗಳನ್ನೂ ರಕ್ಷಿಸುವಂಥಾದ್ದಾಗಿ

ಯೂ, ಉಂಟುಮಾಡುವಂಥಾದ್ದಾಗಿಯೂ, ಇದ್ದರೂ ಕೂಡ ನಾನು ಅವುಗಳಲ್ಲಿ ಇರುವುದಿಲ್ಲ. ಹ್ಯಾಗಾದರೆ, ಯಾವ ಅವಲಂಬನವೂ ಇಲ್ಲದಂಥಾ ಆಕಾಶದಲ್ಲಿ, ಎಲ್ಲಾಕಡೆಯೂ ಸಂಚರಿಸುವಂಥಾ ಮಹತ್ತಾದ ಘಾಳಿಯು ಇರುವದೋ, ಹಾಗೆಯೇ ಸಮಸ್ತ ಪ್ರಾಣಿಗಳೂ, ನನ್ನಲ್ಲಿ ಇರುವದೆಂದು ತಿಳಿ.

ಎಲೈ ಅರ್ಜುನ! ಬ್ರಹ್ಮಕಲ್ಪವು ಮುಗಿದಾಗ ಸಮಸ್ತ ಭೂತಗಳೂ ನನ್ನ ಮೂಲಪ್ರಕೃತಿಯನ್ನೇ ಹೊಂದುವವು. ಪುನಶ್ಚ ಬ್ರಹ್ಮಕಲ್ಪದ ಆರಂಭದಲ್ಲಿ ನಾನೇ ಆ ಸಮಸ್ತ ಭೂತಗಳನ್ನೂ ಸೃಷ್ಟಿಸುವೆನು. ನನ್ನ ಸ್ವಕೀಯವಾದ ಮೂಲಪ್ರಕೃತಿಯನ್ನೆಆಶ್ರಯಿಸಿಕೊಂಡು, ತನ್ನವಶವಲ್ಲದೆ, ಕರ್ಮಾಧೀನವಾಗಿ ಇರುವ ನನ್ನ ಸಮಸ್ತವಾದ ಜೀವರಾಶಿಯನ್ನೂ, ಅವುಗಳ ಪ್ರಾಚೀನವಾಸನೆಯನ್ನು ಅನುಸರಿಸಿ ಪುನಃ ಪುನಃ ಸೃಷ್ಟಿಸುವೆನು. ಈ ಸೃಷ್ಟಿಕಾರ್ಯಗಳೂ, ಅವುಗಳಲ್ಲಿ ಕರ್ತೃತ್ವಾಭಿಮಾನವೂ, ಫಲಾಪೇಕ್ಷೆಯೂ, ಇಲ್ಲದೆ, ಉದಾಸೀನನಂತೆ ಇರುವ ನನ್ನನ್ನು ಬಂಧಿಸುವುದಿಲ್ಲ. ನನ್ನಮೂಲ ಪ್ರಕೃತಿಯು, ಯಜಮಾನನಾದ ನನ್ನಿಂದ, ಚರವಸ್ತುಗಳನ್ನೂ, ಸ್ಥಿರವಸ್ತುಗಳನ್ನೂ, ಪ್ರಸವಿಸುತ್ತದೆ. ಈ ಕಾರಣದಿಂದ ಪ್ರಪಂಚವು ಆಗಾಗ್ಯೆಸೃಷ್ಟಿಸಲ್ಪಡುತ್ತಲೂ, ನಾಶಹೊಂದುತ್ತಲೂ, ಇರುವದು. ಸಮಸ್ತ ಪ್ರಾಣಿಗಳಲ್ಲಿ

ಯೂ ಅಂತರ್ಯಾಮಿಯಾಗಿ ಇದ್ದು ಕೊಂಡು ಇರುವನನ್ನ ನ್ನು ನನ್ನ ಶ್ರೇಷ್ಠವಾದ ಸ್ವಭಾವವನ್ನ ತಿಳಿಯದ ಅ ಜ್ಞಾನಿಗಳು, ಮನುಷ್ಯಾಕೃತಿಯನ್ನು ಹೊಂದಿರುವ ನ ನ್ನನ್ನು, ಕೇವಲ ಮನುಷ್ಯನಂತೆಯೇ ಭಾವಿಸುವರು. ಮೋಹಗೊಳಿಸುವಂಥಾದ್ದಾಗಿಯೂ, ರಾಕ್ಷಸ ಸಂ ಮಂಧವಾದದ್ದಾಗಿಯೂ, ಮತ್ತು ಅಸುರ ಸ್ವಭಾವ ವುಳ್ಳದ್ದಾಗಿಯೂ, ಇರುವ ಪ್ರಕೃತಿಯನ್ನು ಹೊಂದಿ, ಈ ಸಾಮಾನ್ಯ ಜನರು ವ್ಯರ್ಥವಾದ ಆಸೆಯುಳ್ಳವ ರಾಗಿ,ಉಪಯೋಗವಿಲ್ಲದ ಕೆಲಸಮಾಡುವರಾಗಿಯೂ, ವಿಪರೀತಜ್ಞಾನವುಳ್ಳವರಾಗಿಯೂ, ದುರ್ಬುದ್ಧಿಯುಳ್ಳ ವರಾಗಿಯೂ, ಇಧಾರೆ. ಹಾಗಿಲ್ಲದೆ, ದೇವತೆಗಳ ಸ್ವ ಭಾವವನ್ನುಳ್ಳಂಥಾ ಮಹಾನು ಭಾವರು, ನನ್ನನ್ನು ಸಮಸ್ತ ಪ್ರಾಣಿಗಳಿಗೂ ಮೂಲಕಾರಣನಾಗಿಯೂ, ನಾಶರಹಿತನಾಗಿಯೂ, ತಿಳಿದು, ಮದೇಕಚಿತ್ತರಾಗಿ ಭಜಿಸುವರು. ಯಾವಾಗಲೂ ನನ್ನನ್ನೆ ಚಿಂತನೆಮಾಡಿ ಕೊಂಡು, ದೃಢವಾದ ಅಧ್ಯವಸಾಯದಿಂದ ಪ್ರಯ ತ್ನ ಶೀಲರಾಗಿ, ಭಕ್ತಿಯಿಂದ ನಮಸ್ಕಾರಗಳು ಮಾ ಡಿಕೊಂಡು, ಮದೇಕಪರಾಯಣರಾಗಿ, ಆರಾಧ ನವನ್ನು ಮಾಡುತ್ತಿರುವರು. ಅನ್ಯರು, ಜ್ಞಾನವೆಂಬು ವ ಯಜ್ಞದಿಂದ, ವಿಶ್ವರೂಪಿಯಾದ ನನ್ನನ್ನು, ಪರ ಮಾತ್ಮನು ಒಬ್ಬನೇ ಎಂತಲೂ, ಸಕಲಚಿದ್ ಅಚಿ ದ್ ವಸ್ತುಗಳಲ್ಲಿಯೂ ಪರಮಾತ್ಮನು ಇಧಾನೆಂಬು

ವ ಜ್ಞಾನದಿಂದಲೂ, ಅನೇಕ ಪ್ರಕಾರವಾಗಿ ಪೂಜಿಸು ತ್ತಾ,ಆರಾಧಿಸುವರು.ಅಗ್ನಿಷ್ಟೋಮಾದಿಯಾಗವೂ ನಾನೆ, ಪಂಚಮಹಾಯಜ್ಞವೂ ನಾನೆ, ಶ್ರಾದ್ಧಾದಿಕರ್ಮವೂ ನಾನೆ, ಔಷಧವೂನಾನೆ, ಮಂತ್ರವೂ ನಾನೆ, ತುಪ್ಪವೂನಾನೆ, ಅಗ್ನಿಯೂ ನಾನೆ, ಹೋಮವೂ ನಾನೆ, ಎಲ್ಲಾ ನನ್ನ ಸ್ವರೂಪವೇ ಎಂದು ತಿಳಿಯತಕ್ಕದ್ದು. ಈ ಜಗತ್ತಿಗೆಲ್ಲಾ ತಂದೆಯೂ ನಾನೆ, ತಾಯಿಯೂ ನಾನೆ, ತಾತನೂ ನಾನೆ,ರಕ್ಷಕನೂ ನಾನೆ, ತಿಳಿಯತಕ್ಕವನೂ ನಾನೆ, ಪರಿಶುದ್ಧನಾದವನೂ ನಾನೆ, ಓಂಕಾರವೂ ನಾನೆ, ಋಗ್ ಯಜುಸ್ಸಾಮವೇದವೂ ನಾನೆ, ಮುಕ್ತಿಸ್ಥಾನವೂನಾನೇ, ಸಮಸ್ತವನ್ನೂ ಧರಿಸುವನೂ ನಾನೆ, ಸ್ವಾಮಿಯೂ ನಾನೆ, ಸಾಕ್ಷಿಯಾಗಿರುವವನೂ, ನಾನೆ, ದಾಸಸ್ಥಾವವೂ ನಾನೆ, ಆಶ್ರಯಿಸತಕ್ಕವನೂ ನಾನೆ, ಸ್ನೇಹಿತನೂ ನಾನೆ, ಎಲ್ಲಾಪದಾರ್ಥಗಳಿಗೂ ಸೃಷ್ಟಿಕರ್ತನೂ ನಾನೆ, ಸ್ಥಿತಿಕರ್ತನೂ ನಾನೆ, ಸಂಹಾರಕರ್ತನೂ ನಾನೆ, ಪ್ರಯಾಣಕಾಲದಲ್ಲಿ ಎಲ್ಲಕ್ಕೂ ವಾಸಸ್ಥಾನವಾಗಿಇರುವನೂ ನಾನೆ, ಎಂದಿಗೂ ನಾಶ ಹೊಂದದಂಥಾಬೀಜವೂ ನಾನೆ, ತಪ್ಪಿಸುವನೂ ನಾನೆ, ಸುರಿಯುವ ಮಳೆಯೂ ನಾನೆ, ಇದನ್ನು ಅಡ್ಡಿಮಾಡಿ ಹಿಡಿದುಕೊಂಡು ಇರುವವನೂ ನಾನೆ, ಕಾಲದಲ್ಲಿ ಬೀಳುವಂತೆ ಬಿಡುವನೂ ನಾನೆ, ಜೀವವೂ ನಾನೆ' ಸಾವೂ ನಾನೆ, ಈಗ ಇರುವಂಥಾವಸ್ತುವೂ ನಾನೆ,

ಈಗ ಇಲ್ಲದೆ ಮುಂದಕ್ಕೆ ವುಂಟಾಗುವ ವಸ್ತುವೂ ನಾನೆ, ಅಂದರೆ ಎಲ್ಲಾ ನನ್ನ ಶರೀರವಾಗಿಯೇ ಇರುವುದೆಂದು ನನ್ನ ತಾತ್ಪರ್ಯವು. ಮೇಲೆಹೇಳಿದ ಮೂರು ವೇದಗಳನ್ನೂ ತಿಳಿದವರು, ನನ್ನನ್ನು ಯಜ್ಞಗಳಿಂದ ಆರಾಧಿಸಿ, ಅಮೃತಪಾನವನ್ನು ಮಾಡಿದವರಾಗಿ, ಪಾಪಗಳಿಂದ ಪರಿಶುದ್ಧರಾಗಿ, ಸ್ವರ್ಗವನ್ನು ಪ್ರಾರ್ಥಿಸುತ್ತಾರೆ. ಅಂಥವರು ದೇವೇಂದ್ರನಲೋಕವಾದ ಸ್ವರ್ಗಲೋಕವನ್ನು ಹೊಂದಿ, ಆ ಸ್ವರ್ಗದಲ್ಲಿ ಶ್ರೇಷ್ಟವಾದಂಥಾ ದೇವತೆಗಳ ಸುಖಗಳನ್ನೆಲ್ಲಾ ಅನುಭವಿಸುವರು. ಅವರು ಆ ಸ್ವರ್ಗಲೋಕದ ಸುಖವನ್ನೆಲ್ಲಾ ಯಥೇಚ್ಛವಾಗಿ ಅನುಭವಿಸಿ, ಪುಣ್ಯವು ಆಗಿಹೋದ ನಂತರ ತಿರಿಗೀ ಮನುಷ್ಯಲೋಕವನ್ನ ಪ್ರವೇಶಿಸುವರು. ಈ ಪ್ರಕಾರ ತ್ರಿಗುಣಾತ್ಮಕವಾದ ವೇದದಲ್ಲಿ ಹೇಳಿರುವ ಧರ್ಮವನ್ನು ಅನುಸರಿಸುವಂಥಾ ಫಲಾಪೇಕ್ಷೆಯನ್ನುಳ್ಳವರು, ಸ್ವರ್ಗಲೋಕಕ್ಕೆ ಹೋಗಿ, ತಿರಿಗೀ ಮರ್ತ್ಯಲೋಕವನ್ನು ಬಂದುಸೇರುವಂಥಾ ದೆಸೆಯನ್ನು ಹೊಂದುತ್ತಾರೆ. ಹಾಗಿಲ್ಲದೆ, ಯಾರು ನನ್ನನ್ನು ಕ್ಷಣಕಾಲವೂ ಬಿಡದೆ, ಸದಾ ಮದೇಕಧ್ಯಾನಿಗಳಾಗಿ ವುಪಾಸನೆಮಾಡುವರೋ, ಅಂಥಾ ನಿತ್ಯಯೋಗವನ್ನು ಅಪೇಕ್ಷಿಸುವರಿಗೆ ಅವರು ಅಪೇಕ್ಷಿಸುವಂಥಾ ನನ್ನ ಹೊಂದುವಿಕೆಯನ್ನೂ, ಇದು ನಷ್ಟವಾಗದೆ ಇರುವಿಕೆಯನ್ನೂ, ನಾನು ಹೊಂದಿಸಿಕೊಡುವೆನು. ಯಾರು

ದೇವತಾಂತರಗಳನ್ನ ಅಕ್ಕರೆಯಿಂದಲೆ ಭಜಿಸುವರೊ, ಅವರೂಕೂಡ, ಕ್ರಮವನ್ನು ತಪ್ಪಿ,ನನ್ನನ್ನೆ ಆರಾಧಿಸುವರು. ಸಮಸ್ತ ಯಜ್ಞಗಳನ್ನೂ ಭುಜಿಸುವನೂ ನಾನೆ, ಆ ಯಜ್ಞಗಳಿಗೆ ಫಲವನ್ನು ಕೊಡುವನೂ ನಾನೆ, ಅಲ್ಲವೆ ? ಇಂಥಾನನ್ನ ಸ್ವರೂಪವನ್ನ ಯಾರು ಯಥಾಥತ್ವಾಗಿ ತಿಳಿದುಕೊಳ್ಳುವದಿಲ್ಲವೋ, ಅಂಥವರು ಆದ್ದರಿಂದಲೇ ಕೆಳಕ್ಕೆ ಜಾರಿಬೀಳುವರು. ದೇವತೆಗೆ ಳಿಗಾಗಿ ವ್ರತಾಚರಣೆಮಾಡುವರು ಆ ದೇವತೆಗಳನ್ನೇ ಹೊಂದುವರು. ಪಿತೃಗಳನ್ನುಉದ್ದೇಸಿಸಿ ವ್ರತಗಳನ್ನು ಮಾಡುವರು ಪಿತೃದೇವತೆಗಳನ್ನು ಹೊಂದುವರು. ಭೂತಗಳನ್ನು ಆರಾಧಿಸುವರು ಆ ಭೂತಗಳನ್ನೇ ಹೊಂದುವರು. ಆದರೆ ಇವೆಲ್ಲವನ್ನೂಬಿಟ್ಟು ನನ್ನನ್ನೇ ಯಾರಾದರೆ ಸದಾಕಾಲದಲ್ಲಿಯೂ ಆರಾಧಿಸುವರೋ ಅಂಥವರೇ ನನ್ನನ್ನು ಹೊಂದುವರು. ಯಾರು ಭಕ್ತಿಪುಸ್ಸರವಾಗಿ ನನಗೆ ಒಂದು ತುಳಸಿದಳವನ್ನೇಆಗಲಿ, ಪುಷ್ಪವನ್ನೇಆಗಲಿ, ಫಲವನ್ನೇಆಗಲಿ, ನೀರನ್ನೇಆಗಲಿ, ಕೊಡುವರೋ ಅಂಥಾ ಮನೋನಿಗ್ರಹವನ್ನು ಮಾಡಿದಂಥಾ ಆ ಭಕ್ತರಿಂದ ಸಮರ್ಪಿಸಲ್ಪಟ್ಟ ಪದಾರ್ಥವನ್ನು ಭುಜಿಸುವನು.

ಎಲೈ ಅರ್ಜುನಾ ! ನೀನು ಏನು ಲೌಕಿಕಕಾರ್ಯವನ್ನು ಮಾಡಿದರೂ, ಏನುತಿಂದರೂ, ಯಾವವೈದೀಕಕರ್ಮವಾದ ಹೋಮಮಾಡಿದರೂ, ಯಾವದಾನ

ಕೊಟ್ಟರೂ, ಯಾವತಪಸ್ಸನ್ನುಮಾಡಿದರೂ, ಅದನ್ನೆಲ್ಲಾ, 'ಶ್ರೀಕೃಷ್ಣಾರ್ಪಣವಾಗಿ ಇರಲಿ', ಎಂದುಮಾಡಿ, ನನಿಗೇನೆ ಸಮರ್ಪಿಸಿಬಿಡು. ಈ ಪ್ರಕಾರವಮಾಡುವದರಿಂದ ಶುಭಾಶುಭ ಫಲಗಳೆಂಬ ಕರ್ಮಬಂಧಗಳಿಂದ ನೀನು ಬಿಡಲ್ಪಡುವಿ. ಸಮಸ್ತವನ್ನೂ ಭಗವದರ್ಪಣೆಮಾಡಿ ಬಿಡುವುದೆಂಬ ಪ್ರತಿಜ್ಞೆಯಿಂದ ಕೂಡಿದ ಮನಸ್ಸುಳ್ಳವನಾಗಿ, ಸಮಸ್ತ ಕರ್ಮಬಂಧಗಳಿಂದಲೂ ಬಿಡಲ್ಪಟ್ಟವನಾಗಿ, ನಂತರ ನನ್ನನ್ನೇ ಹೊಂದುವಿ. ಸಮಸ್ತ ಪ್ರಾಣಿಗಳಲ್ಲಿಯೂ ನಾನು ಸಮವಾಗಿಯೇ ಇರುವೆನು. ನನಗೆ ದ್ವೇಷ್ಯನಾದಂಥಾವನೂ ಇಲ್ಲ. ಪ್ರಿಯನಾದಂಥಾವನೂ ಇಲ್ಲ. ಆದರೆ ಯಾರು ನನ್ನನ್ನ ಭಕ್ತಿಯಿಂದ ಭಜಿಸುವರೋ, ಅವರು ನನ್ನಲ್ಲಿಯೂ, ನಾನು ಅವರಲ್ಲಿಯೂ, ಪರಸ್ಪರವಾಗಿ ಇರುವೆವು. ಅನೇಕ ದುರಾಚಾರಗಳಿಂದ ಕೂಡಿದವನಾದರೂ, ಯಾವನು ನನನ್ನು ದೇವತಾಂತರಗಳಲ್ಲಿ ಭಕ್ತಿಮಾಡದೆ ಭಜಿಸುವನೋ, ಅವನನ್ನು ಸನ್ಮಾರ್ಗಪ್ರವರ್ತಕನೆಂತಲೇ ತಿಳಿಯತಕ್ಕದ್ದು. ಯಾಕಂದರೆ ಅವನು ಸರಿಯಾದ ಮನೋನಿಶ್ಚಯವನ್ನು ಉಳ್ಳವನಾಗಿಥಾನಷ್ಟೆ. ಅವನು ಶೀಘ್ರದಲ್ಲಿಯೇ ಧರ್ಮಾತ್ಮನಾಗಿ, ಶಾಶ್ವತವಾದ ಸುಖವನ್ನು ಹೊಂದುವನು.

ಎಲೈ ಅರ್ಜುನ ನನ್ನಭಕ್ತನು ಎಂದಿಗೂ ನಾಶವನ್ನು ಹೊಂದುವದಿಲ್ಲವೆಂದು ಚನ್ನಾಗಿತಿಳಿ. ಯಾ

ರು ಪಾಪಯೋನಿಗಳಲ್ಲಿಹುಟ್ಟಿ, ಸ್ತ್ರೀಯರಾಗಿಯೂ, ವೈಶ್ಯರಾಗಿಯೂ, ಶೂದ್ರರಾಗಿಯೂ, ಇದ್ದಾರೆಯೊ, ಅಂಥವರೂ ಕೂಡ ನನ್ನನ್ನು ಚೆನ್ನಾಗಿ ಆಶ್ರಇಸಿ,ಶ್ರೇಷ್ಠವಾದ ಗತಿಯನ್ನೇ ಹೊಂದುವರು. ಹೀಗಿರುವಲ್ಲಿ ಬ್ರಾಹ್ಮಣರಾಗಿಯೂ, ಪುಣ್ಯವಂತರಾಗಿಯೂ, ಭಕ್ತರಾಗಿಯೂ, ರಾಜಋಷಿಗಳಾಗಿಯೂ, ಇರುವವರು ನನ್ನನ್ನು ಹೊಂದುವವಿಷಯದಲ್ಲಿ ಸಂದೇಹವೇ ಇಲ್ಲ. ನಶ್ವರವಾಗಿಯೂ, ಸುಖವಿಲ್ಲದ್ದಾಗಿಯೂ, ಇರುವ ಈ ಲೋಕವನ್ನ ಹೊಂದಿರುವ ನೀನು ನನ್ನಭಜನೆಯನ್ನುಮಾಡು. ನನ್ನಲ್ಲಿಟ್ಟಿರುವ ಮನಸ್ಸುಉಳ್ಳವನಾಗಿಯೂ, ಭಕ್ತಿಯುಳ್ಳವನಾಗಿಯೂ, ನನ್ನನ್ನು ಆರಾಧಿಸುವನಾಗಿಯೂ, ಇರು. ನನ್ನನ್ನು ನಮಸ್ಕರಿಸು. ನನ್ನಲ್ಲಿ ನಿನ್ನಮನಸ್ಸನ್ನು ಇಟ್ಟು, ಈ ಪ್ರಕಾರವಾಗಿ ನನ್ನನ್ನು ಆಶ್ರಯಿಸಿಕೊಂಡು ಇರುವಿಯಾದರೆ, ನೀನು ನನ್ನನ್ನೇಹೊಂದುವಿ.

ಹೀಗೆರಾಜವಿದ್ಯ ರಾಜಗುಹ್ಯಯೋಗವೆಂಬ
ಒಂಭತ್ತನೇ ಅಧ್ಯಾಯವು.
ಸಮಾಪ್ತವಾಯಿತು.

ವಿಭೂತಿಯೋಗವೆಂಬ ಹತ್ತನೇಅಧ್ಯಾಯ ಪ್ರಾರಂಭ.

ಶ್ರೀಭಗವಾನ್:—ಎಲೈ ಅರ್ಜುನ ! ನಾನು ಇನ್ನೂ ಹೇಳತಕ್ಕ ಕೆಲವು ಶ್ರೇಷ್ಠವಾದ ವಚನಗಳನ್ನ ಕೇಳು. ನನ್ನಲ್ಲಿ ಪ್ರೀತಿಯುಳ್ಳಂಥಾ ನಿನಿಗೆ ಹಿ.

ತವನ್ನು ಮಾಡಬೇಕೆಂಬ ಇಚ್ಛೆಯಿಂದ ನಾನು ಅವುಗಳನ್ನು ನಿನಿಗೆ ಹೇಳುವೆನು. ನನ್ನ ಸ್ವಭಾವವನ್ನು ದೇವತೆಗಳೂ ಮಹಋಷಿಗುಳೂ ಯಾರೂ ತಿಳಿಯರು. ಯಾಕಂದರೆ ನಾನು ಎಲ್ಲಾದೇವತೆಗಳಿಗೂ, ಮಹಋಷಿಗಳಿಗೂ, ಸರ್ವಪ್ರಕಾರದಿಂದಲೂ ಆದಿಕಾರಣನಾಗಿ ಇರುವೆನು. ಯಾವಮನುಷ್ಯನು ನನ್ನನ್ನು ಉತ್ಪತ್ತಿ ರಹಿತನೆಂತಲೂ, ಅನಾದಿಯಾದವನೆಂತಲೂ, ಲೋಕಗಳಿಗೆ ಶ್ರೇಷ್ಠವಾದ ಜಗದೀಶ್ವರನೆಂತಲೂ, ತಿಳಿಯುವನೊ ಆ ಮನುಷ್ಯನು ಮನುಷ್ಯರಲ್ಲೆಲ್ಲಾ ಮೌಢ್ಯವಿಲ್ಲದವನಾಗಿ, ಸಮಸ್ತವಾದ ಪಾಪಗಳಿಂದಲೂ ಬಿಡಲ್ ಪಡುವನು. ಬುದ್ಧಿಯೂ, ಜ್ಞಾನವೂ, ಮೋಹವಿಲ್ಲದಿರುವಿಕೆಯೂ, ಕ್ಷಮೆಯೂ, ಸತ್ಯವೂ, ಇಂದ್ರಿಯನಿಗ್ರಹವೂ, ಮನೋನಿಗ್ರಹವೂ, ಸುಖವೂ, ದುಃಖವೂ, ಉತ್ಪತ್ತಿಯೂ, ಲಯವೂ, ಭಯವೂ, ನಿರ್ಭಯವೂ, ಹಿಂಸೆಮಾಡದೆ ಇರುವಿಕೆಯೂ, ಸಮತ್ವಜ್ಞಾನವೂ, ತೃಪ್ತಿಯೂ, ವ್ರತಾಚರಣೆಯೂ, ದಾನವೂ, ಕೀರ್ತಿಯೂ, ಅಪಕೀರ್ತಿಯೂ, ಇವೇಮೊದಲಾದ ಪ್ರಾಣಿಗಳ ಮನೋವೃತ್ತಿಗಳು ನನ್ನಿಂದಲೇ ಉಂಟಾಗುತ್ತವೆ. ಪೂರ್ವಿಕರಾದ ಸಪ್ತಮಹಋಷಿಗಳೂ,ನಾಲ್ಕುಮನುಗಳೂ, ನನ್ನ ಪ್ರಭಾವವನ್ನು ಉಳ್ಳವರಾಗಿ, ನನ್ನಮನಸ್ಸಂಕಲ್ಪದಿಂದಲೇ, ಉಂಟಾದವರು. ಮಿಕ್ಕ ಈ ಲೋಕದ

ಪ್ರಜೆಗಳೆಲ್ಲಾ ಅವರ ಸಂತಾನವೆಂದು ತಿಳಿಯತಕ್ಕದ್ದು. ಯಾವ ಮನುಷ್ಯನು ಈ ನನ್ನ ಸಂಪತ್ತನ್ನೂ ಸಾಮರ್ಥ್ಯವನ್ನೂ ಯಥಾವತ್ತಾಗಿ ತಿಳಿಯುವನೊ,ಅವನು ಚಲಿಸದಂಥಾ ಯೋಗದಿಂದ ಕೂಡಿದವನಾಗುತ್ತಾನೆ. ಇದಕ್ಕೆ ಸಂದೇಹವಿಲ್ಲ. ನಾನು ಸಮಸ್ತಕ್ಕೂ ಉತ್ಪತ್ತಿಕಾರಣನಾದವನು. ನನ್ನಿಂದಲೇ ಸಮಸ್ತವೂ ಅವವುಗಳ ಕರ್ಮಾನುಸಾರವಾಗಿ ಪ್ರವರ್ತಿಸುವವು ಎಂದು ತಿಳಿದು, ಜ್ಞಾನಿಗಳು ಭಕ್ತಿಇಂದ ಕೂಡಿದವರಾಗಿ, ನನ್ನನ್ನು ಭಜಿಸುವರು. ನನ್ನಲ್ಲೇ ಮನಸ್ಸು ಉಳ್ಳವರಾಗಿಯೂ, ಪ್ರಾಣಾಧಾರವುಳ್ಳವರಾಗಿಯೂ, ನನ್ನನ್ನು ಒಬ್ಬರಿಗೊಬ್ಬರು ಬೋಧಿಸುವಂಥವರಾಗಿಯೂ, ನಿತ್ಯವೂ ನನ್ನ ಪ್ರಭಾವಗಳನ್ನೇ ಹೇಳಿಕೊಂಡು, ಸಂತೋಷದಿಂದ ಸುಖಾನುಭವವನ್ನೇ ಮಾಡುವರು. ಸರ್ವಕಾಲದಲ್ಲಿಯೂ, ನನ್ನಲ್ಲಿಯೇ ಮನಸ್ಸನ್ನು ಇಟ್ಟು, ಪ್ರೀತಿಪೂರ್ವಕವಾಗಿ ಭಜಿಸುವರಿಗೆ, ಯಾವ ಬುದ್ಧಿಯೋಗದಿಂದ ಅವರು ನನ್ನನ್ನು ಹೊಂದುವರೊ ಅಂಥಾಬುದ್ಧಿಯೋಗವನ್ನು ಅವರಿಗೆ ಕೊಡುವೆನು. ಇಂಥಾವರಮೇಲಿನ ಕರುಣೆಗಾಗಿಯೇ ನಾನು ಅಜ್ಞಾನದಿಂದ ಉಂಟಾದ ಅಂಧಕಾರವನ್ನು, ಪ್ರಕಾಶವಾಗಿ ಇರುವ ಜ್ಞಾನವೆಂಬುವ ದೀಪದಿಂದ ಅವರಮನಸ್ಸಿನಲ್ಲಿ ನಿಂತು, ಹೋಗಲಾಡಿಸುವೆನು.

ಅರ್ಜುನ :-ಅಯ್ಯಾಕೇಶವ! ಯಲ್ಲಾ ಬ್ರಹ್ಮನಿಗಿಂತಲೂ ಶ್ರೇಷ್ಠವಾದ ಬ್ರಹ್ಮನೂ ನೀನೆ, ಉತ್ಕೃಷ್ಠವಾದ ತೇಜಸ್ವರೂಪನೂ ನೀನೆ, ಪರಮ ಪವಿತ್ರವಾದ ಪದಾರ್ಥವೂ ನೀನೆ, ಸಮಸ್ತವಾದ ರುಷಿಗಳೂ, ದೇವರುಷಿಯಾದಂಥಾ ನಾರದ ಮಹಾಮುನಿಯೂ, ಅಸಿತರುಷಿಯೂ,ದೇವಲರುಷಿಯೂ,ವ್ಯಾಸಮಹರುಷಿಯೂ, ಎಲ್ಲರೂ ನಿನ್ನನ್ನು ಪುರುಷನೆಂತಲೂ, ನಿತ್ಯಸ್ವರೂಪಿ ಎಂತಲೂ, ತೇಜೋನಿಧಿಎಂತಲೂ, ಸಮಸ್ತ ದೇವತೆಗಳಿಗಿಂತಲೂ ಆದಿದೇವನೆಂತಲೂ, ಜನ್ಮರಹಿತನೆಂತಲೂ, ವಿಶಿಷ್ಟವಾದ ಪ್ರಪಂಚವನ್ನೂ ವ್ಯಾಪಿಸಿರುವ ಪುರುಷನೆಂತಲೂ, ಹೇಳುತ್ತಾರೆ. ಇದೂ ಅಲ್ಲದೆ ನೀನೇ ಸಾಕ್ಷಾತ್ತಾಗಿಯೂ ನನಿಗೆ ಇದನ್ನೆಲ್ಲಾ ತಿಳಿಸುತ್ತಲ್ಲಿದ್ದಿ. ನೀನುಹೇಳುವ ಈ ತತ್ವಗಳನ್ನೆಲ್ಲಾ ನಿಜವೆಂತಲೆ ನಾನು ನಂಬುತ್ತೇನೆ. ಅಯ್ಯಾ ಭಗವಂತ! ನಿನ್ನ ನಿಜಸ್ವರೂಪವನ್ನು ದೇವತೆಗಳೂ ತಿಳಿಯರು. ದಾನವರೂ ತಿಳಿಯರು. ಅಯ್ಯಾ ಪುರುಷಶ್ರೇಷ್ಠ ! ಸಮಸ್ತ ಚೇತನಾಚೇತನಾತ್ಮಕಕ್ಕೂ ಉತ್ಪತ್ತಿ ಕಾರಣನಾಗಿಯೂ, ಪಡಯನಾಗಿಯೂ, ದೇವಾದಿಗಳಿಗೆಲ್ಲಾ ಮೇಲಾದ ದೇವನಾಗಿಯೂ, ಇರುವ ಜಗತ್ಪತಿಯೆ ! ನೀನೊಬ್ಬನೆ ನಿನ್ನ ಪರಮಾತ್ಮ ಸ್ವರೂಪವನ್ನ ತಿಳಿಯುವಿಯೇ ಹೊರತು ಬೇರೊಬ್ಬರೂ ತಿಳಿಯರು. ಯಾವ ನಿನ್ನವಿಭೂತಿಯಾದ ಅಸಾಧಾ

ರಣ ಮಹಿಮೆಗಳಿಂದ ಈ ಸಮಸ್ತವಾದ ಪ್ರಪಂಚ
ವನ್ನು ವ್ಯಾಪಿಸಿಕೊಂಡು ಇದ್ದಿಯೋ, ಅಂಥಾ ನಿನ್ನ
ಶ್ರೇಷ್ಠವಾದ ಮಹಿಮೆಗಳನ್ನು ನಿಶ್ಶೇಷವಾಗಿ ಹೇಳ
ಲು ನೀನೇ, ಸಮರ್ಥನಾಗಿ ಇರುವಿ. ಅಯ್ಯಾ ಭಗವಂ
ತ! ನಾನು ನಿನ್ನನ್ನು ಭಕ್ತಿಯೋಗದಿಂದ ಕೂಡಿದವ
ನಾಗಿ, ಯಾವಾಗಲೂ ನಿನ್ನನ್ನೆ ಧ್ಯಾನಿಸಿಕೊಂಡು, ಹ್ಯಾ
ಗೆ ಚನ್ನಾಗಿ ತಿಳಿಯುವೆನು? ಯಾವ ಯಾವ ಭಾವನೆ
ಯೊಡನೆ ಕೂಡಿದವನಾಗಿ ನನ್ನಿಂದಾ ನೀನು ಚಿಂತಿಸ
ತಕ್ಕವನಾಗಿ ಇದ್ದಿ? ನಿನ್ನ ಪ್ರಭಾವವನ್ನೂ, ಮಹಿ
ಮಾತಿಶಯಗಳನ್ನೂ ವಿಸ್ತಾರವಾಗಿ ನನಗೆ ಇನ್ನೊಂ
ದಾವರ್ತಿ ನೀನು ತಿಳಿಸಬೇಕೈಯ್ಯಾ ಜನಾರ್ದನ!
ಈ ನಿನ್ನಗುಣಾಮೃತವನ್ನ ಎಷ್ಟುಕೇಳಿದರೂ ನನಗೆ
ತೃಪ್ತಿಯಾಗುವುದಿಲ್ಲವೆಂಬುವುದು ನಿನಗೆ ತಿಳಿದು ಇ
ದೆಯಷ್ಟೆ.

ಶ್ರೀಭಗವಾನ್ :- ಹಾ ಹಾ, ಕುರುವಂಶದಲ್ಲೆ
ಲ್ಲಾ ಶ್ರೇಷ್ಠನಾದ ಅರ್ಜುನ! ನನ್ನ ಶ್ರೇಷ್ಠವಾದ
ಪ್ರಭಾವಗಳಲ್ಲಿ ಮುಖ್ಯವಾದದ್ದನ್ನ ಮಾತ್ರ ನಿನಗೆ
ತಿಳಿಸುವೆನು. ಯಾಕಂದರೆ, ನನ್ನ ಪ್ರಭಾವವನ್ನ ವಿ
ಸ್ತಾರವಾಗಿ ತಿಳಿಸಲು ಸಾಧ್ಯವಿಲ್ಲ. ಅದಕ್ಕೆ ಕೊನೆ
ಮೊದಲು ಯಾವದೂ ಇಲ್ಲವಷ್ಟೆ. ಎಲೈ ನಿದ್ರೆಯನ್ನು
ಜಯಿಸಿ ಇರುವ ಅರ್ಜುನ! ನಾನು ಸಮಸ್ತ ಪ್ರಾ
ಣಿಗಳ ಹೃದಯ ಗುಹೆಯಲ್ಲಿಕೂತಿರುವ ಪರಮಾತ್ಮ

ನೆಂದು ತಿಳಿ. ನಾನು ಸಮಸ್ತಪ್ರಾಣಿಗಳಿಗೂ ಉತ್ಪತ್ತಿಕಾರಣನಾಗಿಯೂ,ಸ್ಥಿತಿಕಾರಣನಾಗಿಯೂ, ನಾಶಕಾರಣನಾಗಿಯೂ, ಇರುವೆನು. ಹನ್ನೆರಡು ತಿಂಗಳಿಗೂ ಹನ್ನೆರಡಾಗಿ ಇರುವ ಸೂರ್ಯರುಗಳಲ್ಲಿ ನಾನು ವಿಷ್ಣುವೆಂಬ ಹೆಸರುಳ್ಳ ಸೂರ್ಯನೆಂದುತಿಳಿ. ತೇಜಸ್ಸುಗಳೆಲ್ಲಾ ಕಿರಣಗಳುಳ್ಳಂಥಾ ಸೂರ್ಯನೆಂದು ತಿಳಿ. ನಲವತ್ತೊಂಭತ್ತು ವಿಧವಾದ ಮರುದ್ಗಣ, ಅಥವಾ ಸಪ್ತಮರುತ್ತು, ಗಳಲ್ಲಿ ಮರೀಚಿಎಂಬುವ ಘಾಳಿ ಎಂದು ತಿಳಿ. ನಕ್ಷತ್ರುಗಳ ಮಧ್ಯದಲ್ಲಿ ನನ್ನನ್ನು ಚಂದ್ರನೆಂದು ತಿಳಿ. ಚತುರ್ವೇದಗಳಲ್ಲಿ ನನ್ನನ್ನು ಸಾಮವೇದವೆಂದು ತಿಳಿ. ಸಮಸ್ತ ದೇವತೆಗಳ ಮಧ್ಯದಲ್ಲಿ ನನ್ನನ್ನು ಮೊದಲಾದ ಇಂದ್ರನೆಂದು ತಿಳಿ.. ಏಕಾದಶ ಇಂದ್ರಿಯಗಳಲ್ಲಿ ನನ್ನನ್ನುಮುಖ್ಯವಾದ ಮನೊ ಇಂದ್ರಿಯವೆಂದು ತಿಳಿ. ಜ್ಞಾನವುಳ್ಳಂಥಾ ಪ್ರಾಣಿಗಳೆಲ್ಲಲಾ ಸ್ನನ್ನು ಬುದ್ಧಿಯೆಂದು ತಿಳಿ. ಏಕಾದಶ ರುದ್ರರಲ್ಲಿ ನನ್ನನ್ನು ಶಂಕರನೆಂತಲೂ, ಯಕ್ಷರ ಮತ್ತು ರಾಕ್ಷಸರಕೂಟದಲ್ಲಿ ನನ್ನನ್ನು ಕುಬೇರನೆಂತಲೂ, ಭಾವಿಸು. ಅಷ್ಟವಸುಗಳಲ್ಲಿ ನನ್ನನ್ನು ಪಾವಕನೆಂದು ಭಾವಿಸು. ಶಿಖರವುಳ್ಳಂಥಾ ಪರ್ವತಗಳಲ್ಲಿ ನನ್ನನ್ನು ಮಹಾ ಮೇರುಪರ್ವತವೆಂದು ತಿಳಿ. ಪುರೋಹಿತರುಗಳಲ್ಲೆಲ್ಲಾ ನನ್ನನ್ನು ಮುಖ್ಯವಾದ ಬೃಹಸ್ಪತಿ ಎಂದು ತಿಳಿ. ಸೇನಾಪತಿಗಳಲ್ಲೆಲ್ಲಾ ನನ್ನ

ನ್ನ ಶ್ರೇಷ್ಠನಾದ ಸುಬ್ರಹ್ಮಣ್ಯನೆಂದು ಭಾವಿಸು ನೀರಿನರಾಶಿಗಳಲ್ಲೆಲ್ಲಾ ನನ್ನನ್ನು ಮಹಾ ಸಮುದ್ರವೆಂದುಭಾವಿಸು. ಮಹಾ ರುಷಿಗಳ ಮಧ್ಯದಲ್ಲಿ ನನ್ನನ್ನು ಭೃಗುರುಷಿಯೆಂದು ತಿಳಿ. ಶಬ್ದಗಳಲ್ಲೆಲ್ಲಾ ನಾನು ಶ್ರೇಷ್ಠವಾದ ಓಂಕಾರನೆಂಬ ಏಕಾಕ್ಷರವೆಂದು ತಿಳಿ. 'ಯಜ್ಞಗಳಲ್ಲೆಲ್ಲಾ ನನ್ನನ್ನು ಜಪಯಜ್ಞವೆಂತಲೂ,' ಚಲಿಸದೆ ಇರುವ ಪರ್ವತಗಳಲ್ಲೆಲ್ಲಾ ನನ್ನನ್ನು ಹಿಮಾಲಯವೆಂತಲೂ, ಸಮಸ್ತ ವೃಕ್ಷಗಳ ಮಧ್ಯದಲ್ಲಿ ನನ್ನನ್ನು ಅಶ್ವತ್ಥವೃಕ್ಷವೆಂತಲೂ, ಭಾವಿಸು. ದೇವರುಷಿಗಳಲ್ಲಿ ನನ್ನನ್ನು ನಾರದನೆಂತಲೂ, ಗಂಧರ್ವರಲ್ಲಿ ಚಿತ್ರರಥನೆಂತಲೂ, ಸಿದ್ಧಿಯನ್ನು ಹೊಂದಿದವರ ಕೂಟದಲ್ಲಿ ಕಪಿಲನೆಂತಲೂ, ಭಾವಿಸು. ಕುದುರೆಗಳಲ್ಲೆಲ್ಲಾ ಶ್ರೇಷ್ಠವಾದ ಅಮೃತ ಸಮುದ್ರದಲ್ಲಿ ಹುಟ್ಟಿದಂಥಾ ಉಚ್ಚೈಶ್ರವಸ್ಸೆಂಬ ಕುದುರೆಯಾಗಿ ನನ್ನನ್ನು ಭಾವಿಸು. ಸ್ರೇಷ್ಠವಾದ ಆನೆಗಳಲ್ಲೆಲ್ಲಾ ಐರಾವತವೆಂಬ ಹೆಸರುಳ್ಳ ಆನೆ ಎಂತಲೂ, ಮನುಷ್ಯರುಗಳಲ್ಲಿ ನನ್ನನ್ನು ರಾಜನೆಂತಲೂ, ತಿಳಿ. ಆಯುಧ ಕೂಟದಲ್ಲಿ ನನ್ನನ್ನು ವಜ್ರಾಯುಧವೆಂತಲೂ, ಪಶು ಕೂಟದಲ್ಲಿ ನನ್ನನ್ನು ಕಾಮಧೇನುವೆಂತಲೂ, ಭಾವಿಸು. ಪ್ರಜೆಗಳನ್ನು ಉಂಟುಮಾಡುವಂಥಾ ಮನ್ಮಥನೂ ನಾನೇ ಎಂದು ತಿಳಿ. ವಿಷವುಳ್ಳ ಏಕ ಶಿರಸ್ಸಿನ ಸರ್ಪಗಳ ಮಧ್ಯೆ ನನ್ನನ್ನು ವಾಸುಕಿ ಎಂಬ ಸರ್ಪ

ವಾಗಿ ಧ್ಯಾನಿಸು. ವಿಷವಿಲ್ಲದ ಅನೇಕ ಶಿರಸ್ಸುಳ್ಳ ನಾಗಗಳ ಮಧ್ಯೆ ನನ್ನನ್ನು ಅನಂತನೆಂಬ ನಾಗವೆಂದು ಭಾವಿಸು. ಜಲಜಂತುಗಳ ಮಧ್ಯೆ ನನ್ನನ್ನು ವರುಣ ದೇವತೆಯೆಂದು ತಿಳಿ. ಪಿತೃ ದೇವತೆಗಳಲ್ಲಿ ನಾನು ಅರ್ಯಮಾದೇವತೆಯಾಗಿ ಇರುವೆನು. ಚನ್ನಾಗಿ ಶಿಕ್ಷಿಸುವರ ಕೂಟದಲ್ಲಿ ನನ್ನನ್ನು ಯಮನೆಂದು ಭಾವಿಸು. ರಾಕ್ಷಸವರ್ಗದಲ್ಲಿ ನನ್ನನ್ನು ಪ್ರಹ್ಲಾದನೆಂದು ಧ್ಯಾನಿಸು. ವ್ಯಾಧಿಗಳ ಮಧ್ಯದಲ್ಲಿ ನನ್ನನ್ನು ಸಾಕ್ಷಾತ್ತಾದ ಮೃತ್ಯುವೆಂದೇ ಭಾವಿಸು. ಮೃಗಗಳ ಕೂಟದಲ್ಲಿ ಮೃಗಶ್ರೇಷ್ಠನಾದ ಸಿಂಹವೆಂತಲೂ, ಪಕ್ಷಿಗಳ ಸಮೂಹದಲ್ಲಿ ನನ್ನನ್ನು ಗರುಡನೆಂತಲೂ, ಭಾವಿಸು. ಗಮನ ಸ್ವಭಾವವುಳ್ಳವುಗಳಲ್ಲಿ ನನ್ನನ್ನು ಘಾಳಿ ಎಂತ ತಿಳಿ. ಧನುಸ್ಸನ್ನು ಹಿಡಿದವರ ಕೂಟದಲ್ಲಿ ನನ್ನನ್ನು ಸಾಕ್ಷಾತ್ತಾದ ಶ್ರೀರಾಮನೆಂದು ಧ್ಯಾನಿಸು. ಹೊಳೆಯುಂವಂಥಾ ಮತ್ಸ್ಯರಾಸಿಯಲ್ಲಿ ನನ್ನನ್ನು ಮಕರವೆಂಬ ಮತ್ಸ್ಯವೆಂದು ತಿಳಿ. ನದಿಗಳಲ್ಲಿ ನನ್ನನ್ನು ಗಂಗಾನದಿ ಎಂದು ತಿಳಿ. ಸೃಷ್ಠಿಸಿರುವ ಪದಾರ್ಥಗಳಲ್ಲೆಲ್ಲಾ ನನ್ನನ್ನು ಸೃಷ್ಟಿಕರ್ತನೆಂತಲೂ, ಸಂಹಾರಕರ್ತನೆಂತಲೂ, ಪಾಲನ ಕರ್ತನೆಂತಲೂ, ಧ್ಯಾನಿಸು. ವಿದ್ಯಗಳಲ್ಲೆಲ್ಲಾ ನನ್ನನ್ನು ಬ್ರಹ್ಮವಿದ್ಯೆ ಎಂದು ಭಾವಿಸು. ವಾದ, ವಿತಂಡಾವಾದ, ಜಲ್ಪ, ವೆಂಬೀ ಮೂರು ವಿಧವಾದ ವಾದಗಳಲ್ಲಿ ನಾನು ಕೇವಲ ತತ್ವಾ

ರ್ಥಗಳನ್ನು ತಿಳಿದುಕೊಳ್ಳುವುದಕ್ಕಾಗಿ ಮಾಡುವ ವಾದವೆಂದು ತಿಳಿ. ಅಕ್ಷರಗಳಲ್ಲೆಲ್ಲಾ ನನ್ನನ್ನು ಪ್ರಥಮಾಕ್ಷರವಾದ ಅಕಾರವೆಂದು ಭಾವಿಸು. ಸಮಸ್ತ ಪದಗಳಲ್ಲಿಯೂ ನನ್ನನ್ನು ದ್ವಂದ್ವ ಸಮಾಸವನ್ನಾಗಿ ತಿಳಿ. ನಾಶವಿಲ್ಲದಂಥಾ ಕಾಲವೂ ನಾನೇ, ಸೃಷ್ಟಿಕರ್ತನಾದ ಚತುರ್ಮುಖನೂ ನಾನೆ, ಸಮಸ್ತ ಪ್ರಾಣಿಗಳನ್ನೂ ಅಪಹರಿಸುವಂಥಾ ಮೃತ್ಯುದೇವತೆಯೂ ನಾನೆ. ಮುಂದಕ್ಕೆ ಉಂಟಾಗುವದಕ್ಕೆಲ್ಲಾ ಬೀಜಕಾರಣವೂ ನಾನೆ. ಸ್ತ್ರೀಯರುಗಳಲ್ಲಿ ನನ್ನನ್ನು ಕೀರ್ತಿ ಎಂತಲೂ, ಶ್ರೀದೇವಿ ಎಂತಲೂ, ಸರಸ್ವತಿ ಎಂತಲೂ, ಭಾವಿಸು. ಜ್ಞಾಪಕವೂ, ಬುದ್ಧಿಯೂ, ಧೈರ್ಯವೂ, ಸಹನ ಗುಣವೂ, ನಾನೆ ಎಂದು ತಿಳಿ. ಸಾಮಗಳಲ್ಲಿ ನನ್ನನ್ನು ಬೃಹತ್ತೆಂಬಸಾಮವೆಂತಲೂ,ಛಂದಸ್ಸುಗಳಲ್ಲಿ ನನ್ನನ್ನು ಗಾಯತ್ರೀ ಛಂದಸ್ಸೆಂತಲೂ, ದ್ವಾದಶ ಮಾಸಗಳಲ್ಲಿ ನನ್ನನ್ನು ಫಲಭರಿತವಾದ ಮಾರ್ಗಶೀರ್ಷ ಮಾಸವೆಂತಲೂ, ಷಟ್‌ರುತುಗಳಲ್ಲಿ ನನ್ನನ್ನುಕುಸುಮಕ್ಕೆ ಆಕರವಾದಂಥಾ ವಸಂತ ರುತುವೆಂತಲೂ ಭಾವಿಸು. ವಂಚನೆ ಮೊದಲಾದ ಕಾರ್ಯಗಳಲ್ಲಿ ನನ್ನನ್ನು ಪಗಡೆ ಆಟವಾಗಿಯೂ, ತೇಜಸ್ವಿಗಳಲ್ಲಿ ಇರುವ ತೇಜಸ್ಸೆಂತಲೂ, ಭಾವಿಸು. ಜಯವೂ ನಾನೆ, ಪರಿಶ್ರಮವೂನಾನೆ, ಸತ್ವವಂತರಲ್ಲಿ ಇರುವ ಸತ್ವವೂ ನಾನೆ, ಎಂದು ತಿಳಿ. ವೃಷ್ಣಿಕುಲೋದ್ಭವರಾದ

ಅರಸರಲ್ಲಿ ನನ್ನನ್ನು ವಾಸುದೇವನೆಂದು ಭಾವಿಸು. ಪಾಂಡವರಲ್ಲಿ ಉತ್ಕೃಷ್ಟನಾದ ನೀನೇ ನಾನೆಂದು ತಿಳಿ. ರುಷಿಗಳಲ್ಲಿ ನನ್ನನ್ನು ವ್ಯಾಸಮಹ ರುಷಿಯೆಂದು ಭಾವಿಸು. ಪಂಡಿತರಲ್ಲೆಲ್ಲಾ ನನ್ನನ್ನು ಶುಕ್ರಾಚಾರ್ಯರೆಂತಲೂ ಭಾವಿಸು. ದಂಡಿಸುವಂಥಾವರ ದಂಡನೆಯೂ ನಾನೆ. ಜಯಿಸಬೇಕೆಂಬ ಇಚ್ಛೆಯುಳ್ಳವರ ನೀತಿಯೂ ನಾನೆ, ಗೋಪ್ಯವಸ್ತುಗಳಲ್ಲೆಲ್ಲಾ ಶ್ರೇಷ್ಠವಾದ ಮೌನವೆಂಬುವದೂ ನಾನೆ, ಜ್ಞಾನವಂತರಲ್ಲೆಲ್ಲಾ ಇರುವ ಬ್ರಹ್ಮಜ್ಞಾನವೂ ನಾನೆಂದು ತಿಳಿ. ಸಮಸ್ತ ಪ್ರಾಣಿಗಳಿಗೂ ಯಾವದು ಬೀಜವೊ ಅದೂ ನಾನೆ, ಎಂದು ಭಾವಿಸು. ಸಮಸ್ತ ಚರಾಚರವೂ ನನ್ನನ್ನ ವಿನಾಯಿಸಿ ಇಲ್ಲವಯ್ಯಾ ಅರ್ಜುನ! ನನ್ನ ಶ್ರೇಷ್ಠವಾದಂಥಾ ಈ ಐಶ್ವರ್ಯಗಳಿಗೆ ಕೊನೆ ಎಂಬುವದೇ ಇಲ್ಲ. ಇದನ್ನೆಲ್ಲಾ ನಾನು ನಿನಗೆ ಸಂಗ್ರಹವಾಗಿ ತಿಳಿಸಿದ್ಧೇನೆ. ಯಾವ ಯಾವ ಜೀವರಾಶಿಯು ಐಶ್ವರ್ಯದಿಂದಲೂ ಸಂಪತ್ತಿನಿಂದಲೂ ಕೂಡಿ ಉತ್ಸಾಹದಿಂದಿರುವದೊ, ಅದನ್ನೆಲ್ಲಾ ನನ್ನ ಪ್ರಭಾವದ ಸಕೃದಾಂಶದಿಂದ ಉಂಟಾದದ್ದೆಂದು ಭಾವಿಸು. ಅಥವ ಈ ನನ್ನ ಅನೇಕ ವಿಧವಾದ ಜ್ಞಾನೋಪದೇಶದಿಂದ ನಿನಿಗೆ ಆಗತಕ್ಕದ್ದೇನು. ಸಮಸ್ತ ಪ್ರಪಂಚವನ್ನೂ ನಾನು ನನ್ನ ಒಂದು ಅಂಶದಿಂದಲೇ ಧರಿಸಿಕೊಂಡು ಇರುವೆನು.

ಈ ಪ್ರಕಾರವಾಗಿ ವಿಭೂತಿಯೋಗವೆಂಬ
ಹತ್ತನೇ ಅಧ್ಯಾಯ ಸಮಾಪ್ತವಾಯಿತು.

ವಿಶ್ವರೂಪದರ್ಶನಯೋಗವೆಂಬ ಹನ್ನೊಂದನೇ ಅಧ್ಯಾಯ ಪ್ರಾರಂಭ.

ಅರ್ಜುನಃ—ನನ್ನಲ್ಲಿ ಬಹಳ ಕೃಪೆಯುಳ್ಳ ನಿನ್ನಿಂದಲೇ ಅಧ್ಯಾತ್ಮವೆಂಬ ಹೆಸರುಳ್ಳ ಶ್ರೇಷ್ಠವಾದ ತತ್ವರಹಸ್ಯವನ್ನು ಕೇಳಿ, ನನ್ನ ಮನಸ್ಸಿನಲ್ಲಿ ಇದ್ದ ಸಂಶಯಗಳೆಲ್ಲಾ ನಿವರ್ತಿಯಾದವು. ಅಯ್ಯಾ ಶ್ರೀಕೃಷ್ಣ ! ಸಮಸ್ತ ಪ್ರಾಣಿಗಳಿಗೂ ಉತ್ಪತ್ತಿಯೂ, ನಾಶವೂ, ನಿನ್ನಿಂದಲೇ ಎಂತಲೂ, ಇದೇ ಮೊದಲಾದ, ಎಂದಿಗೂ ನಾಶಹೊಂದದಂಥಾ, ನಿನ್ನ ಶ್ರೇಷ್ಠವಾದ ಮಹಿಮೆಗಳನ್ನೆಲ್ಲಾ ನಿನ್ನಿಂದಲೇ ವಿಸ್ತಾರವಾಗಿ ಕೇಳಿದೆನು. ಅಯ್ಯಾ ಪರಮೇಶ್ವರ ! ನೀನು ಹೇಳಿದ್ದೆಲ್ಲಾ ಸರಿ. ಆದರೆ ಈಗ ನಾನು ಮೇಲೆ ವಿಸ್ತರಿಸಲ್ಪಟ್ಟ ಸಕಲ ಐಶ್ವರ್ಯಯುಕ್ತವಾದ ನಿನ್ನ ಸ್ವರೂಪವನ್ನು ನೋಡಲು ಅಪೇಕ್ಷಿಸುತ್ತೇನೆ. ಅಯ್ಯಾ ಪ್ರಭುವೆ ! ಅದನ್ನ ನಾನು ನೋಡಲು ಸಾಧ್ಯವೆಂದು ನೀನು ಎಣಿಸಿದಪಕ್ಷದಲ್ಲಿ, ಈಗ ನಿನ್ನ ಅಂಥಾ ನಾಶರಹಿತವಾದ ಸ್ವರೂಪವನ್ನು ನನಗೆ ತೋರಿಸಯ್ಯಾ ಯೋಗೇಶ್ವರ!

ಶ್ರೀಕೃಷ್ಣ:—ಎಲೈ ಅರ್ಜುನ ! ಅನೇಕ ವಿಧವಾಗಿಯೂ, ಅತಿ ವಿಲಕ್ಷಣವಾಗಿಯೂ, ಬಹುವಿಧವಾದ ವರ್ಣಗಳಿಂದ ಕೂಡಿದ್ದಾಗಿಯೂ, ಆಕಾರ

ಗಳಿಂದ ಕೂಡಿದ್ದಾಗಿಯೂ, ಯಿರುವ ನನ್ನ ನೂ ರಾರು, ಇನ್ನೂ ಸಾವಿರಾರು, ಪ್ರಕಾರವಾದ ರೂ ಪಗಳನ್ನ ನೋಡು. ನೀನು ಇದುವರಿಗೂ ಎಂದಿ ಗೂ ನೋಡದವಂಥಾ ಅನೇಕ ವಿಧವಾದ ಆಶ್ಚರ್ಯ ಗಳನ್ನೆಲ್ಲಾ ಈಗ ನೋಡು. ದ್ವಾದಶಾದಿತ್ಯರನ್ನೂ, ಅಷ್ಟವಸುಗಳನ್ನೂ, ಏಕಾದಶ ರುದ್ರರನ್ನೂ, ಎರ ಡು ಅಶ್ವಿನೀ ದೇವತೆಗಳನ್ನೂ,ಹೀಗೆಯೇ ಸಪ್ತಮರು ತ್ತುಗಳನ್ನೂ ನೋಡು.ಚರಾಚರವಸ್ತುಗಳಿಂದ ಕೂಡಿ ದ ಸಮಸ್ತ ಪ್ರಪಂಚಗಳನ್ನೂ, ಇನ್ನೂ ಯಾವದ ನ್ನು ನೀನು ನೋಡಬೇಕೆಂದು ಅಪೇಕ್ಷಿಸುವೆಯೊ ಅ ದನ್ನೂ, ಈ ನನ್ನದೇಹದ ಒಂದು ಪ್ರದೇಶದಲ್ಲಿ ಇ ಡುವಂಥಾದ್ದಾಗಿನೋಡು. ಆದರೆ ನೀನು ನನ್ನನ್ನು ನಿನ್ನ ಈ ಕಣ್ಣುಗಳಿಂದಲೇ ನೋಡುಲು ಸಾಧ್ಯವಿಲ್ಲವಾ ದ್ದರಿಂದ ನಿನಿಗೆ ಶ್ರೇಷ್ಟವಾದ ದೃಷ್ಟಿಯನ್ನು ಕೊ ಡುವೆನು. ಅದರಿಂದ ನೀನು ನನ್ನಜ್ಞಾನ ಬಲಐಶ್ವರ್ಯಾ ದಿಗಳಿಂದಕೂಡಿದ ಯೋಗವನ್ನುನೋಡು.

ಸಂಜಯ:—ಅಯ್ಯಾಧೃತರಾಷ್ಟ್ರ! ಬಹು ಉ ತ್ಕೃಷ್ಟವಾದಂಥಾ ಯೋಗಿಗಳಿಗೆಲ್ಲಾ ಈಶ್ವರನಾದಂ ಥಾ ಆಶ್ರೀಹರಿಯು ಹೀಗೆಹೇಳಿ, ಅನಂತರದಲ್ಲಿ ಆ ಅರ್ಜುನನಿಗೆ ಈಶ್ವರಸಂಮಂಥವಾದ ಶ್ರೇಷ್ಟವಾದ ರೂಪವನ್ನು ತೋರಿಸಿದನು. ಅದುಹ್ಯಾಗೆ ಇಧೆ ಯಂ ದರೆ:—ಅನೇಕ ಮುಖಗಳಿಂದಲೂ ಕಣ್ಣುಗಳಿಂದ

ಲೂ, ಕೂಡಿದ್ದಾಗಿಯೂ, ಅತ್ಯಾಶ್ಚರ್ಯೆಯುಳ್ಳ ರೂಪ ವುಳ್ಳದ್ದಾಗಿಯೂ, ಶ್ರೇಷ್ಠತಮವಾದ ಅನೇಕ ಆಭ ರಣಗಳಿಂದ ಕೂಡಿದ್ದಾಗಿಯೂ, ವಿಚಿತ್ರವಾದಂಥ ಅನೇಕ ಆಯುಧಗಳಿಂದಕೂಡಿದ್ದಾಗಿಯೂ, ದಿವ್ಯವಾ ದಂಥಾ ಮಾಲೆಗಳನ್ನೂ ವಸ್ತ್ರಗಳನ್ನೂ ಧರಿಸಿಕ್ಕೊಂ ಡು ಇರುವದಾಗಿಯೂ, ಶ್ರೇಷ್ಠವಾದ ಸುಗಂಧವ ನ್ನು ಹಚ್ಚಿಕೊಂಡು ಇರುವದಾಗಿಯೂ, ಸಮಸ್ತ ವಾದ ಆಶ್ಚರ್ಯಗಳಿಂದ ಕೂಡಿದ್ದಾಗಿಯೂ ಕೊನೆಯಿ ಲ್ಲದ್ದಾಗಿಯೂ ಎಲ್ಲಾಪಕ್ಕದಲ್ಲಿಯೂ, ಮುಖವನ್ನು ಳ್ಳದ್ದಾಗಿಯೂ, ಪ್ರಕಾಶವಾದ್ದಾಗಿಯೂ, ಇಧೆ. ಆ ಮಹಾಪುರುಷನ ತೇಜಸ್ಸು, ಏಕಕಾಲದಲ್ಲಿ ಸಹಸ್ರ ಸೂರ್ಯರು ಆಕಾಶದಲ್ಲಿ ಉದಿಸಿದರೆ ಅವರುಗಳಕಿರಣ ಗಳು ಹ್ಯಾಗೆ ಇರುವದೊ ಹಾಗೆಇಧೆ. ಅಗ ಆ ಅರ್ಜುನನು ದೇವತೆಗಳಲ್ಲೆಲ್ಲಾ ಶ್ರೇಷ್ಠವಾದ ದೇವತೆ ಯಾದಂಥಾ ಆ ಶ್ರೀಕೃಷ್ಣನ ಶರೀರದ ಒಂದು ಭಾ ಗದಲ್ಲಿ ಸಮಸ್ತವಾದ ಪ್ರಪಂಚವು ಅನೇಕವಿಧವಾಗಿ ವಿಭಾಗಮಾಡಲ್ ಪಟ್ಟಂಥಾದ್ದಾಗಿ ನೋಡಿದನು. ಆ ಗ ಆ ಅರ್ಜುನನು ಆಶ್ಚರ್ಯಗೊಂಡು, ರೋಮಾಂ ಚದೊಡನೆ ಕೂಡಿದವನಾಗಿ, ಆ ಭಗವಂತನಿಗೆ ಸಾ ಷ್ಟಾಂಗ ಪ್ರಣಾಮವನ್ನು ಮಾಡಿ, ಕೈಗಳನ್ನು ಜೋ ಡಿಸಿಕ್ಕೊಂಡು, ಹೇಳಿದ್ದೇನಂದರೆ.

ಅರ್ಜುನ:—ಅಯ್ಯಾ ಭಗವಂತ! ನಿನ್ನ ಈ ಬ್ರ

ಹ್ಮಾಂಡವಾದ ಶರೀರದಲ್ಲಿ ಸಮಸ್ತವಾದ ದೇವತೆಗಳ
ನ್ನೂ ಸಮಸ್ತವಾದ ಜೀವರಾಸಿಗಳ ಕೂಟವನ್ನೂ, ಕ
ಮಲಾಸನದಲ್ಲಿ ಕೂತಿರುವ ಚತುರ್ಮುಖ ಬ್ರಹ್ಮನ
ನ್ನೂ, ಈಶ್ವರನನ್ನೂ, ಸಮಸ್ತ ರುಷಿಗಳನ್ನೂ, ವಿಚಿ
ತ್ರವಾದಂಥ ಸರ್ಪಗಳನ್ನೂ, ನೋಡುತ್ತೇನೆ. ಅನೇಕ
ಭುಜಗಳನ್ನೂ, ಹೊಟ್ಟೆಗಳನ್ನೂ, ಮುಖಗಳನ್ನೂ,
ಕಣ್ಣುಗಳನ್ನೂ, ರೂಪಗಳನ್ನೂ, ಉಳ್ಳಂಥಾ ನಿನ್ನ
ನ್ನು ಎಲ್ಲಾಕಡೆಯಲ್ಲಿಯೂ, ನೋಡುವೆನು. ಅಯ್ಯಾ
ಜಗತ್ತಿಗೆಲ್ಲಾ ಅಧಿಪತಿಯಾದಂಥಾ ಕೃಷ್ಣ! ಮೊ
ದಲು, ಮಧ್ಯ, ಕೊನೆ, ಎಂಬುವದು ಯಾವದೂ ಇಲ್ಲ
ದಂಥಾ ನಿನ್ನ ಈ ಜಗತ್ ಶರೀರವಾದ ವಿಶ್ವರೂಪವ
ನ್ನು ನೋಡುವೆನು. ಕಿರೀಟವನ್ನು ಧರಿಸಿ ಇರುವ
ನಾಗಿಯೂ, ಗದಾಯುಧವನ್ನೂ ಚಕ್ರಾಯುಧವ
ನ್ನೂ ಹಿಡಿದು ಇರುವನಾಗಿಯೂ, ತೇಜಸ್ವರೂಪಿ
ಯಾಗಿಯೂ, ಎಲ್ಲಾಕಡೆಯಲ್ಲಿಯೂ ಪ್ರಕಾಶವುಳ್ಳವ
ನಾಗಿಯೂ, ನೋಡಲು ಅಸಾಧ್ಯವಾಗಿ ಇರುವುನಾ
ಗಿಯೂ, ಜ್ವಲಿಸುವಂಥಾ ಅಗ್ನಿಯನು ಸೂರ್ಯನೇನು
ಇವರುಗಳಂತೆ ಪ್ರಕಾಶಿಸುತ್ತಲೂ, ಅಳವಿಲ್ಲದವನಾಗಿ
ಯೂ, ಇರುವ ನಿನ್ನನ್ನು ಎಲ್ಲಾಕಡೆಯಲ್ಲಿಯೂ ಕಾ
ಣುವೆನು. ಮೋಕ್ಷಾಧಿಕಾರಿಗಳಿಂದ ತಿಳಿಯತ್ತಕ್ಕ
ಶ್ರೇಷ್ಠವಾದ ಅಕ್ಷರವೂ ನೀನೆ, ಈ ಪ್ರಪಂಚಕ್ಕೆ
ಲ್ಲಾ ಮುಖ್ಯವಾದ ಆಧಾರವಸ್ತುವೂ ನೀನೆ, ಎಂದಿ

ಗೂ ನಾಶವಿಲ್ಲದವನೂ ನೀನೆ, ಶಾಶ್ವತವಾದ ಧರ್ಮಗಳನ್ನೆಲ್ಲಾ ಕಾಪಾಡಿಕೊಂಡು ಬರುವನೂ ನೀನೆ, ಸನಾತನವಾದಂಥಾ ಪರಮಪುರುಷನೂ ನೀನೆ, ಎಂದು ನಾನೂ ಎಣಿಸುವೆನು. ಮೊದಲು, ಮಧ್ಯ, ಕೊನೆ, ಯಾವದೂ ಇಲ್ಲದವನಾಗಿಯೂ, ವಿಪರೀತಸಾಮರ್ಥ್ಯವನ್ನುಳ್ಳವನಾಗಿಯೂ, ಅನೇಕ ಭುಜಗಳನ್ನು ಉಳ್ಳವನಾಗಿಯೂ, ಚಂದ್ರಸೂರ್ಯರನ್ನೇ ಕಣ್ಣಾಗಿ ಉಳ್ಳವನಾಗಿಯೂ, ಜಾಜ್ವಲ್ಯಮಾನವಾದ ಕಾಲಾಗ್ನಿಯನ್ನ ಮುಖವಾಗಿಉಳ್ಳವನಾಗಿಯೂ, ನಿನ್ನ ಪರಾಕ್ರಮದಿಂದಲೆ ಈ ಪ್ರಪಂಚವನ್ನೆಲ್ಲಾ ತಪಿಸುವಂತೆ ಮಾಡುವಂಥಾವನಾಗಿಯೂ, ಇರುವ ನಿನ್ನನ್ನು ನೋಡಿದೆನು. ಅಯ್ಯಾ ಮಹಾನುಭಾವನೆ ! ಆಕಾಶಕ್ಕೂ ಭೂಮಿಗೂ ಮಧ್ಯೆಇರುವ ಈ ಅಂತರಿಕ್ಷವೆಲ್ಲಾ ನಿನ್ನ ಒಬ್ಬನಿಂದಲೇ ವ್ಯಾಪ್ತವಾಗಿಧೆ. ಹಾಗೆಯೇ ಸಮಸ್ತದಿಕ್ಕುಗಳೂ ವ್ಯಾಪ್ತವಾಗಿವೆ. ಇಂಥಾ ನಿನ್ನ ಅತಿ ಭಯಂಕರವಾಗಿಯೂ, ಆತಿ ಆಶ್ಚರ್ಯಕರವಾಗಿಯೂ, ಇರುವ ವಿಶ್ವರೂಪವನ್ನು ನೋಡಿ ಈ ಮೂರುಲೋಕವೂ ಭಯದಿಂದ ನಡಗುತ್ತಲಧೆ. ಈ ದೇವತೆಗಳ ಕೂಟವು ನಿನ್ನನ್ನು ಆಶ್ರಯಿಸುವರು. ಕೆಲವರು ಭಯಪಟ್ಟು ಕೈಕಟ್ಟಿಕೊಂಡು ನಿನನ್ನು ಸ್ತುತಿಸಲಾರಂಭಿಸುವರು. ಮಹರುಷಿಗಳೇನು, ಸಿದ್ಧರೇನು, ಇವರುಗಳಕೂಟವು ನಿನಗೆಮಂಗಳವಾಗಲೆಂದು ಹೇಳಿ

ಕೊಂಡು ಅನೇಕ ಸ್ತೋತ್ರಗಳಿಂದ ನಿನ್ನನ್ನು ಸ್ತೋತ್ರಮಾಡುತ್ತಾರೆ. ಏಕಾದಶರುದ್ರರು, ದ್ವಾದಶಾದಿತ್ಯರು, ಅಷ್ಟವಸುಗಳು, ಸಾಧ್ಯರೆನ್ನಲ್ಪಡುವರು, ವಿಶ್ವೇದೇವರು, ಅಶ್ವಿನೀದೇವತೆಗಳು, ಸಪ್ತ ಮರುತ್ತುಗಳು, ಉಷ್ಣವಾದ ಆಹಾರದಲ್ಲಿ ಪ್ರೀತಿವುಳ್ಳಂಥಾ ಪಿತೃದೇವತೆಗಳು, ಗಂಧರ್ವರು, ಯಕ್ಷರು, ಅಸುರರು, ಸಿದ್ಧರು, ಇವರುಗಳ ಕೂಟವೆಲ್ಲಾ, 'ನಿನ್ನನ್ನು ಬಹಳ ಆಶ್ಚರ್ಯದಿಂದ ನೋಡಿಕೊಂಡು ಇದ್ದಾರೆ. ಅಸಂಖ್ಯೆಯವಾದ ಮುಖಗಳನ್ನೂ, ಕಣ್ಣುಗಳನ್ನೂ, ತೊಡೆಗಳನ್ನೂ, ಕಾಲುಗಳನ್ನೂ, ಹೊಟ್ಟೆಗಳನ್ನೂ ತೋಳುಗಳನ್ನೂ, ಕೋರೆಹಲ್ಲುಗಳನ್ನೂ, ಉಳ್ಳಂಥಾ, 'ಈ ನಿನ್ನ ಬ್ರಹ್ಮಾಂಡವಾದ ರೂಪವನ್ನುನೋಡಿ ಲೋಕದಲ್ಲಿ ಇರುವರೆಲ್ಲರೂ ಬಹಳ ಭಯಪಟ್ಟಿದ್ದಾರೆ.ಅವರಂತೆಯೇ ನಾನೂ ಬಹಳ ಭಯದಿಂದ ಕೂಡಿದವನಾಗಿ ಇದ್ದೇನೆ. ಆಕಾಶವನ್ನು ಮುಟ್ಟುವಂಥವನಾಗಿಯೂ, ಕಾಂತಿಯುಳ್ಳಂಥಾವನಾಗಿಯೂ, ಅನೇಕ ವರ್ಣಗಳನ್ನುಳ್ಳಂಥಾವನಾಗಿಯೂ,ತೆರೆದಂಥಾ ಮುಖವುಳ್ಳವನಾಗಿಯೂ, ಪ್ರಕಾಶವಾದಂಥಾ ವಿಸ್ತಾರವಾದ ಕಣ್ಣುಗಳನ್ನುಳ್ಳಂಥಾವನಾಗಿಯೂ, ಇರುವ ನಿನ್ನನ್ನು ನೋಡಿ, ಮನಸ್ಸಿನಲ್ಲಿ ಬಹಳವಾದಂಥಾ ಭಯವನ್ನುಹೊಂದಿ, ದೇಹವನ್ನು ಧರಿಸಿ ಇರುವುದೇ ಕಷ್ಟವಾಗಿ, ಸಮಾಧಾನವಿಲ್ಲದವನಾಗಿದ್ದೇನೆ. ದೇವತೆಗಳಿಗೆಲ್ಲಾ ಸ್ವಾಮಿ

ರ್ಯಾಗಿಯೂ, ಜಗತ್ತಿಗೆಲ್ಲಾ ಆಧಾರಭೂತನಾಗಿಯೂ, ಇರುವ ಅಯ್ಯಾ ಭಗವಂತ ! ಕೋರೇಹಲ್ಲುಗಳಿಂದಭಯಂಕರವಾದ ಕಾಲಾಗ್ನಿಗೆ ಸದೃಶವಾದಂಥಾ ನಿನ್ನ ಮುಖಗಳನ್ನು ನೋಡಿದಮಾತ್ರದಿಂದಲೆ ದಿಕ್ಕು ತೋಚದವನಾಗಿಯೂ, ಸುಖವಿಲ್ಲದವನಾಗಿಯೂ, ಆಗಿದ್ದೇನೆ. ಆದ್ದರಿಂದ ಪ್ರಸನ್ನನಾಗಯ್ಯಾ ಸ್ವಾಮಿ. ಸಮಸ್ತರಾದಂಥಾ ಈ ದುರ್ಯೋಧನಾದಿಗಳು, ಭೀಷ್ಮಾಚಾರ್ಯರು, ದ್ರೋಣಾಚಾರ್ಯರು, ಕರ್ಣನು, ಎಲ್ಲರೂ ಭೂಪಾಲರಾದ ರಾಜರುಗಳಸಮೂಹದೊಡನೆ ಕೂಡಿ,ಹಾಗೆಯೇ ನಮ್ಮ ಸೇನಾಧ್ಯಕ್ಷರುಗಳೊಡನೆ ಬಹಳ ಅವಸರವಾಗಿ ನಿಮ್ಮ ಕೋರೆಹಲ್ಲುಗಳಿಂದ ಭಯಂಕರವಾದ ಮುಖದಲ್ಲಿ ಪ್ರವೇಶಿಸುತ್ತಾರೆ. ಅದರಲ್ಲಿ ಕೆಲವರು ಆ ಹಲ್ಲುಗಳ ಸಂದಿಗಳಲ್ಲಿ ಸಿಕ್ಕಿಕೊಂಡು, ತಲೆ ಕತ್ತರಿಸಿ ಹೋದವರಂತೆ ಕಾಣುತ್ತಾರೆ. ಹ್ಯಾಗಾದರೆ ಅನೇಕವಾದಂಥಾ ನದಿಗಳ ಜಲಪ್ರವಾಹವು ಸಮುದ್ರವನ್ನೇ ಕುರಿತು ಪ್ರವಹಿಸುವದೋ,ಹಾಗೆಯೆ ಈ ಮನುಷ್ಯಲೋಕದಲ್ಲಿ ಇರುವ ಶೂರರೂ ಕೂಡ ನಿನ್ನ ಜ್ವಲಿಸುವಂಥಾ ಮುಖವನ್ನು ಪ್ರವೇಶಿಸುತ್ತಾರೆ. ಹ್ಯಾಗಾದರೆ ಪತಂಗಗಳೆಂಬ, ದೀಪಗಳನ್ನು ಆರಿಸುವುದಕ್ಕೆ ಬರುವಂಥಾ,ಹುಳಗಳು, ಬಹುವೇಗದಿಂದಬಂದು ಜ್ವಲಿಸುವಂಥಾ ಅಗ್ನಿಯಲ್ಲಿ ನಾಶಹೊಂದುವದಕ್ಕಾಗಿ ಬೀಳುತ್ತವೆಯೋ, ಹಾ

ಗೆಯೇ ಈ ಲೋಕದಜನಗಳೂಕೂಡ ಅಧಿಕ ತ್ವರೆ ಯುಳ್ಳವರಾಗಿ ನಾಶಹೊಂದುವುದಕ್ಕೇನೆ ನಿನ್ನ ಮುಖ ವನ್ನು ಪ್ರವೇಶಿಸುವರು. ಅಯ್ಯಾ ವಿಷ್ಣುವೇ! ನಿನ್ನ ತೇಜಸ್ಸಿನಿಂದ ಸಮಸ್ತವಾದ ಜಗತ್ತನ್ನೂವ್ಯಾಪಿ ಸಿಕೊಂಡು, ಸಮಸ್ತವಾದ ಲೋಕವನ್ನೂ ಜ್ವಲಿಸು ವಂಥಾ ಮುಖಗಳಿಂದ ಎಲ್ಲಾಕಡೆಯಲ್ಲಿಯೂ ಭಕ್ಷಿಸಿ ಕೊಂಡು, ನಾಲಿಗೆಯಿಂದ ನೊಣವರಿಸುತ್ತಿ. ಹೀಗಿ ರುವುದ್ದರಿಂದ ನಿನ್ನ ಉಗ್ರವಾದಂಥಾ ಕಿರಣಗಳು ನ ನ್ನನ್ನು ದಹಿಸುತ್ತಲಿವೆ. ಅಯ್ಯಾ ಶ್ರೇಷ್ಟನಾದದೇವ! ಈ ಘೋರವಾದರೂಪವುಳ್ಳ ನೀನು ಯಾರೋನನಿಗೆ ತಿಳಿಸಬೇಕು. ನಿನಗೆ ನಾನು ನಮಸ್ಕರಿಸುತ್ತೇನೆ. ಪ್ರಸನ್ನನಾಗಯ್ಯಾ ಸ್ವಾಮಿ. ಆದಿಪುರುಷನಾದ್ಧಂಥಾ ನಿನ್ನನ್ನು ಚನ್ನಾಗಿ ತಿಳಿದುಕೊಳ್ಳ ಬೇಕೆಂದು ಅಪೇ ಕ್ಷಿಸುತ್ತೇನೆ. ನಿನ್ನ ಮನೋಭಿಪ್ರಾಯವನ್ನ ನಾನು ಅರಿಯೆನಷ್ಟ.

ಶ್ರೀಭಗವಾನ್ :—ನಾನುಲೋಕವನ್ನೆಲ್ಲಾ ನಾ ಶಮಾಡುವಂಥಾ ಅತಿಕ್ರೂರನಾದ ಕಾಲಯಮನಾಗಿರು ವೆನು. ಪ್ರಜೆಗಳನ್ನೆಲ್ಲಾ ಸಂಹಾರ ಮಾಡುವುದಕ್ಕಾಗಿ ಈಗ ಆರಂಭಿಸಿ ಯಿದ್ದೇನೆ. ನಿನ್ನ ಶತ್ರು ಸೈನ್ಯ ದಲ್ಲಿ ಯುದ್ಧವೀರರಾದವರನ್ನೆಲ್ಲಾ, ನೀನಿಲ್ಲದೇನೇ ಯಾರೂ ನಾಶಹೊಂದದೆ ನಿಲ್ಲಲಾರರು. ಆದ್ದರಿಂದ ನೀನು ಏಳು. ಶತ್ರುಗಳನ್ನೆಲ್ಲಾ ಜಯಿಸಿ, ಕೀರ್ತಿಯ

ನ್ನು ಪಡಿ. ಸಮೃದ್ಧಿಯಾದಂಥಾ ರಾಜ್ಯವನ್ನು ಅನುಭವಿಸು. ಪೂರ್ವದಲ್ಲಿಯೆ ನಾನು ಇವರನ್ನೆಲ್ಲಾ ಕೊಲ್ಲುವಂತೆ ಸಂಕಲ್ಪಮಾಡಿಯಿದ್ದೇನೆ. ವಾಮಹಸ್ತದಿಂದಲೂ ಬಾಣಪ್ರಯೋಗಮಾಡುವಂಥಾ, ಆದ್ದರಿಂದಲೇ 'ಸವ್ಯಸಾಚಿ' ಎನಿಸಿಕೊಳ್ಳುವಂಥಾ, ಎಲೈ ಅರ್ಜುನ! ನೀನು ಕೇವಲ ನೆಪಮಾತ್ರಕ್ಕೆ ಇರು. ದ್ರೋಣಾಚಾರ್ಯರನ್ನೂ, ಭೀಷ್ಮಾಚಾರ್ಯರನ್ನೂ, ಜಯದ್ರಥನನ್ನೂ, ಕರ್ಣನನ್ನೂ, ಇನ್ನೂ ಅನೇಕ ಯುದ್ಧವೀರರನ್ನೂ, ನೀನು ಸಂಹರಿಸು. ಇವರನ್ನೆಲ್ಲಾ ನಾನು ಕೊಲ್ಲತಕ್ಕದ್ದೆಂದು ಆಗಲೆ ಸಂಕಲ್ಪಮಾಡಿ ಇದ್ದೇನೆ. ಯಿದಕ್ಕೆ ನೀನು ಕೊಂಚವೂ ವ್ಯಥೆಪಡಬ್ಯಾಡ. ಯುದ್ಧವನ್ನು ಮಾಡು. ಯುದ್ಧದಲ್ಲಿ ನೀನು ನಿನ್ನಶತ್ರುಗಳನ್ನು ಜಯಿಸುವಿ.

ಸಂಜಯ:—ಶ್ರೀ ಕೃಷ್ಣನ ಈ ಮಾತನ್ನು ನಡಗುತ್ತಲಿರುವ ಅರ್ಜುನನು ಕೇಳಿ, ಅಂಜಲಿಬದ್ಧನಾಗಿ, ಕೃಷ್ಣನಿಗೆನಮಸ್ಕರಿಸಿ, ಬಹಳ ಭಯದೊಡನೆ ಗದ್ಗದ ಧ್ವನಿಯಿಂದ ತಿರಿಗೀ, ಹೇಳಿದ್ದೇನೆಂದರೆ.

ಅರ್ಜುನ:—ಅಯ್ಯಾ ಕೃಷ್ಣ! ನಿನ್ನ ಶ್ರೇಷ್ಠವಾದ ಕೀರ್ತಿಯನ್ನು ಕಂಡು ಲೋಕವೆಲ್ಲವೂ ಸಂತೋಷಪಡುವುದೂ ಅಲ್ಲದೆ, ನಿನ್ನಲ್ಲಿ ಅಧಿಕಪ್ರೇಮಯುಳ್ಳದ್ದಾಗಿಯೂ ಇದೆ. ಆದರೆ ರಾಕ್ಷಸರೆಲ್ಲಾ ಭಯಪಟ್ಟುಕೊಂಡು ದಿಕ್ಕುದಿಕ್ಕಿಗೂ ಓಡಿಹೋಗುತ್ತ

ಲಿದ್ದಾರೆ. ಸಿದ್ಧರ ಸಮೂಹವೆಲ್ಲಾ ನಿನ್ನನ್ನ ನಮ ಸ್ಕರಿಸುವರು. ಇದೆಲ್ಲಾ ಸಹಜವಾದದ್ದೇ ಸರಿ. ಅಯ್ಯಾ ಮಹಾನುಭಾವನೆ! ಯಿಷ್ಟುಗೌರವನೀಯನಾಗಿ ಯೂ, ಬ್ರಹ್ಮನಿಗೂ ಆದಿ ಕರ್ತನಾಗಿಯೂ ಇರು ವಂಥಾ ನಿನಗೆ ಯಾಕೆ ನಮಸ್ಕರಿಸದೇ, ಯಿರುವರು? ಎಲ್ಲರೂ ನಿನಗೆ ನಮಸ್ಕರಿಸುವದು ಸಹಜವೆ ಇಧೆ ಯಷ್ಟೆ.ನಾಶವಿಲ್ಲದವನಾಗಿಯೂ, ದೇವತೆಗಳಿಗೆಲ್ಲಾ ಸ್ವಾಮಿಯಾಗಿಯೂ, ಜಗತ್ತಿಗೆಲ್ಲಾ ಆಧಾರ ಭೂತ ನಾಗಿಯೂ, ಇರುವ ಶ್ರೀಕೃಷ್ಣ ! ವ್ಯಕ್ತವಾದ ಸದ್ವಸ್ತುವೂನೀನೆ, ವ್ಯಕ್ತವಿಲ್ಲದ ಅಸದ್ವಸ್ತುವೂ ನೀನೆ, ಇದಕ್ಕೆಲ್ಲಾ ಶ್ರೇಷ್ಠವಾದಂಥಾ ಪರಬ್ರ ಹ್ಮನೂ ನೀನೆ, ಆದಿದೇವನೂನೀನೆ, ಪುರಾಣಪುರುಷ ನೂ ನೀನೆ, ಯಿಾಪ್ರಪಂಚಕ್ಕೆಲ್ಲಾ ಮುಖ್ಯವಾದಂಥಾ ಆಧಾರಭೂತನೂ ನೀನೆ, ಸಮಸ್ತವನ್ನೂ ತಿಳಿದವನೂ ನೀನೆ, ಸಮಸ್ತರಿಂದಲೂ ತಿಳಿಯತಕ್ಕವನೂ ನೀನೆ, ಶ್ರೇಷ್ಠವಾದಂಥಾ ಮೋಕ್ಷಸ್ಥಾನವೂನೀನೆ, ಇಪ್ರ ಪಂಚವೆಲ್ಲಾ ಅನೇಕರೂಪಗಳನ್ನುಳ್ಳಂಥಾ ನಿನ್ನಿಂದಲೆ ವ್ಯಾಪ್ತವಾಗಿ ಇಧೆ.ನೀನು ಯಲ್ಲಾ ಪದಾರ್ಥದಲ್ಲಿಯೂ ಅಂತರಾತ್ಮನಾಗಿದ್ಧಿ, ಘಾಳಿಯೂನೀನೆ, ಮೃತ್ಯುವೂ ನೀನೆ, ಬೆಂಕಿಯೂ ನೀನೆ, ವರುಣದೇವತೆಯೂ ನೀನೆ, ಚಂದ್ರನೂ ನೀನೆ, ಬ್ರಹ್ಮನೂ ನೀನೆ, ಅಂಥಾಬ್ರಹ್ಮ ನಿಗೂ ಕಾರಣಭೂತನಾದಂಥಾಪರಬ್ರಹ್ಮನೂ ನೀನೆ.

ಅಯ್ಯಾ ಸರ್ವಾಂತರ್ಯಾಮಿಯಾದ ಶ್ರೀ ಕೃಷ್ಣ! ನಿನಗೆ ಸಾವಿರಸಲ ನಮಸ್ಕರಿಸುವೆನು. ತಿರಿಗೀನಮಸ್ಕರಿಸುವೆನು. ಪುನಶ್ಚ ನಮಸ್ಕರಿಸುವೆನು. ನಿನ್ನ ಮುಂದುಗಡೆಯೂ ನಮಸ್ಕರಿಸುವೆನು. ನಿನ್ನ ಹಿಂದುಗಡೆಯೂ ನಮಸ್ಕರಿಸುವೆನು. ನಿನ್ನ ಯಲ್ಲಾ ಕಡೆಯೂ ನಮಸ್ಕರಿವೆನು. ಅಪರಿಮಿತವಾದಂಥಾ ಶಕ್ತಿಯನ್ನೂ ಪರಾಕ್ರಮವನ್ನೂ ವುಳ್ಳಂಥಾ ನೀನು, ಸಮಸ್ತವನ್ನೂ ವ್ಯಾಪಿಸಿಕೊಂಡುಇದ್ದಿ. ಆದ್ದರಿಂದಲೆಸಮಸ್ತವೂನೀನೆಎಂಬುವಂಥಾ ಸರ್ವಶಬ್ದ ವಾಚ್ಯನಾಗಿಯೂ ಇದ್ದಿ.ಅಯ್ಯಾಅಚ್ಯುತ! ನಿನ್ನನ್ನ ನಾನು ಸ್ನೇಹಿತನೆಂದು ಭಾವಿಸಿ, ನಿನ್ನ ಈಮಹಿಮೆಯನ್ನ ತಿಳಿಯದೆ,ಅಜಾಗ್ರತೆಯಿಂದ,ಹೇ ಕೃಷ್ಣ! ಹೇ ಯಾದವ! ಹೇ ಸಖ! ಎಂದು ಅಜ್ಞಾನದಿಂದಲೇಆಗಲಿ, ಸ್ನೇಹದಿಂದಲೇ ಆಗಲಿ, ಕರೆವದ್ದನ್ನೂ,ಪರಿಹಾಸ್ಯಕ್ಕೋಸ್ಕರಆಟದವೇಳೆಯಲ್ಲೆಆಗಲಿ, ಮಲಗುವ ಸಮಯದಲ್ಲೆ ಆಗಲಿ, ಜೊತೆಲಿ ಕೂತಿರುವ ಸಮಯದಲ್ಲೆ ಆಗಲಿ, ಭೋಜನ ಸಮಯದಲ್ಲೆ ಆಗಲಿ, ಒಂಟಿಯಾಗಿರುವ ಸಮಯದಲ್ಲೆ ಆಗಲಿ, ಅಥವ ಅನೇಕರಿರುವ ಸಮಯದಲ್ಲೆ ಆಗಲಿ, ಅವಮರ್ಯಾದೆಯಿಂದ ಕಾಣಲ್ಪಟ್ಟ ಎಂಬುವುದನ್ನೂ, ಇವೆಲ್ಲವನ್ನೂ, ಪರಿಮತಿ ಯಿಲ್ಲದಷ್ಟು ಮಹಿಮೆಯುಳ್ಳಂಥಾ ನಿನ್ನನ್ನ ನಾನು ಕ್ಷಮಿಸ ಬೇಕೆಂತು ವಿನಯವಾಗಿ ಬೇಡಿಕೊಳ್ಳುವೆನು, ಸ್ವಾಮಿ !

ಅಯ್ಯಾ ಸದೃಶವಿಲ್ಲದಂಥಾ ಪ್ರಭಾವವುಳ್ಳವನೆ ! ನೀನು ಸಮಸ್ತವಾದಂಥಾ ಚರಾಚರಾತ್ಮಕವಾದ ಈ ಲೋಕಕ್ಕೆ ಸೃಷ್ಟಿಕರ್ತನಾಗಿಯೂ, ಪೂಜಾರ್ಹನಾಗಿಯೂ, ಅಜ್ಞಾನಾಂಧಕಾರವನ್ನು ಹೋಗಲಾಡಿಸುವಂಥಾ ಶ್ರೇಷ್ಠನಾದ ಆಚಾರ್ಯನಾಗಿಯೂ, ಯಿರುವಿ. ಈ ಮೂರುಲೋಕದಲ್ಲಿಯೂ ನಿನಗೆ ಸಮಾನವಾದಂಥಾವರು ಯಾರೂ ಯಿಲ್ಲ. ಹೀಗಿರುವಲ್ಲಿ ನಿನಗೆ ಹೆಚ್ಚಿದಂಥವರು ಯಾರು ಯಿಧಾರೆ ? ಆದ್ದರಿಂದ ಜಗದೀಶನಾಗಿಯೂ, ಸ್ತೋತ್ರಾರ್ಹನಾಗಿಯೂ, ಯಿರುವ ನಿನ್ನನ್ನ ನಾನು ಸಾಷ್ಟಾಂಗವಾಗಿ ಪ್ರಣಾಮಮಾಡಿ, ಪ್ರಸನ್ನನಾಗಬೇಕೆಂದು ಬೇಡಿಕೊಳ್ಳುವೆನು. ಮಗನ ಅಪರಾಧವನ್ನ ತಂದೆ ಸಹಿಸಿಕೊಳ್ಳುವಂತೆಯೂ, ಸ್ನೇಹಿತನ ಅಪರಾಧವನ್ನ ಸ್ನೇಹಿತನು ಸಹಿಸಿಕೊಳ್ಳುವಂತೆಯೂ, ನನಗೆ ಅತ್ಯಂತ ಪ್ರಿಯನಾದಂಥಾ ನೀನು ಸಹಿಸಿ ಕೊಳ್ಳಬೇಕು. ಹಿಂದೆ ಎಂದಿಗೂ ನೋಡದಂಥಾ ನಿನ್ನ ಈರೂಪವನ್ನು ಕಂಡು ತುಂಬಾ ಸಂತೋಷಿಸಿದೆನು. ಆದಾಗ್ಯೂ ನನ್ನ ಮನಸ್ಸು ಬಹಳ ಭಯದಿಂದ ವ್ಯಥೆಗೊಂಡಿಧೆ. ಆದ್ದರಿಂದ, ಅಯ್ಯಾ ಜಗತ್ತಿಗೆಲ್ಲಾ ಆಧಾರಭೂತನಾದಂಥಾ ಸ್ವಾಮಿಯೆ ! ನನಿಗೆ ನೀನು ಪ್ರಸನ್ನನಾಗಿ, ಮೊದಲಿನ ರೂಪವನ್ನೇ ತೋರಿಸ ಬೇಕೆಂದು ಪ್ರಾರ್ಥಿಸುವೆನು. ನಾನು ನಿನ್ನನ್ನು ಹಿಂದೆ ನೋಡಿದಂತೆಯೇ ಕಿರೀಟಧಾ

ರಿಯಾಗಿ, ಗದಾಯುಧವನ್ನು ಹಿಡಿದುಕೊಂಡು, ಚಕ್ರವನ್ನುಧರಿಸಿಕೊಂಡು,ಯಿರುವಂತೆ ನೋಡಲಪೇಕ್ಷಿಸುತ್ತೇನೆ. ಪ್ರಪಂಚವನ್ನೆಲ್ಲಾ ಶರೀರವಾಗಿ ವುಳ್ಳಂಥಾ ಅಯ್ಯಾ ಸಹಸ್ರ ಬಾಹುವೆ! ಪೂರ್ವದಲ್ಲಿ ಕಂಡಾಥಾ ಚತುರ್ಭುಜ ವುಳ್ಳಂಥಾವನಾಗಿ ಕಾಣಿಸಿಕೊಳ್ಳಯ್ಯಾ ಸ್ವಾಮಿ!

ಶ್ರೀಭಗವಾನ್:—ಎಲೈ ಅರ್ಜುನ! ನಿನ್ನಲ್ಲಿ ಪೂರ್ಣಾನುಗ್ರಹವನ್ನಿಟ್ಟಿರುವ ನನ್ನಸತ್ಯಸಂಕಲ್ಪ ದಿಂದಲೇ ನಿನಿಗೆ ಇಂಥಾ ತೇಜೋಮಯವಾಗಿಯೂ, ಜಗತ್ಸ್ವರೂಪವಾಗಿಯೂ, ಕೊನೆಮೊದಲು ಎಂಬುವದೇ ಯಾವದೂ ಯಿಲ್ಲದೆ ಯಿರುವುದಾಗಿಯೂ, ನಿನ್ನ ಹೊರ್ತು ಮತ್ಯಾರಿಂದಲೂ ಕಾಣಲ್ಪಡದ್ದಾಗಿಯೂ, ಇರುವಂಥಾ ಶ್ರೇಷ್ಠವಾದ ಈರೂಪವು ತೋರಿಸಲ್ಪಟ್ಟಿತು. ವೇದಾಧ್ಯಯನದಿಂದಲೇ ಆಗಲಿ, ಯಜ್ಞಾಚರಣೆಯಿಂದಲೇ ಅಗಲಿ, ಅನೇಕಶ್ರೇಷ್ಠವಾದ ದಾನವನ್ನು ಮಾಡುವುದರಿಂದಲೇ ಆಗಲಿ, ನಿತ್ಯವಾದ ಕರ್ಮಗಳನ್ನ ಅನುಷ್ಟಿಸುವುದರಿಂದಲೇ ಆಗಲಿ,ಅತ್ಯುಗ್ರವಾದ ವ್ರತಾಚರಣೆಗಳಿಂದಲೇ ಆಗಲಿ, ಇಂಥಾವಿಶ್ವರೂಪಿಯಾದಂಥಾ ನಾನು,ಮನುಷ್ಯಲೋಕದಲ್ಲಿ ನಿನ್ನೊಬ್ಬನಲ್ಲದೆ ಬೇರೊಬ್ಬರಿಂದಲೂ ಕಾಣಲು ಅಶಕ್ಯನಾದವನು. ಇಂಥಾ ಭಯಂಕರವಾದ ನನ್ನ ರೂಪವನ್ನನೋಡಿ, ನಿನಗೆ ಭಯದಿಂದುಂಟಾದ ವ್ಯಥೆಯೂ

ಬ್ಯಾಡ, ಅಜ್ಞಾನದಿಂದ ಉಂಟಾದ ಸಂಶಯವೂಬ್ಯಾಡ. ನಿರ್ಭಯನಾಗಿಯೂ, ಸಂತೋಷಚಿತ್ತವುಳ್ಳವನಾಗಿಯೂ, ತಿರಿಗೀ ನೀನು ನಿನಿಗೆ ವಿಶೇಷಪರಿಚಿತವಾದಂಥಾ ನನ್ನ ಸೌಮ್ಯ ರೂಪವನ್ನೇ ನೋಡಯ್ಯಾ ಅರ್ಜುನ!

ಸಂಜಯ:—ಯೀಪ್ರಕಾರ ವಾಸುದೇವನು ಅರ್ಜುನನಿಗೆ ಹೇಳಿ, ಪುನಃ ಆ ಭಗವಂತನು ತನ್ನ ಸಹಜವಾದ ಚತುರ್ಭುಜಗಳೊಡನೆ ಕೂಡಿದ ನಿಜರೂಪವನ್ನು ತೋರಿಸಿ, ಭಯಪಟ್ಟಿದ್ದಂಥಾ ಅರ್ಜುನನಿಗೆ ಆ ಮಹಾ ಪುರುಷನು ತನ್ನ ಸೌಮ್ಯರೂಪವನ್ನ ಧರಿಸಿದವನಾಗಿ, ಸಮಾಧಾನ ಪಡಿಸಿದನು.

ಅರ್ಜುನ:—ಅಯ್ಯಾ ಜನಾರ್ದನ! ಈ ನಿನ್ನ ಸೌಮ್ಯವಾದಂಥಾ ಮನುಷ್ಯರೂಪವನ್ನು ನೋಡಿ, ಈಗತಾನೆ ಸ್ವಸ್ಥಚಿತ್ತನಾಗಿ, ನನ್ನ ಪೂರ್ವ ಸ್ವಭಾವವನ್ನ ಹೊಂದಿದೆನು.

ಶ್ರೀ ಭಗವಾನ್:—ನೀನು ನೋಡಿದಂಥಾ ನನ್ನ ಈ ವಿಶ್ವರೂಪವು ಯಾರಿಂದಲೂ ಕಾಣಲ್ಪಡತಕ್ಕದ್ದಲ್ಲ. ಬ್ರಹ್ಮಾದಿ ದೇವತೆಗಳೂಕೂಡ ನಿತ್ಯವೂ ಈ ಅದ್ಭುತವಾದ ರೂಪವನ್ನು ನೋಡಲು ಅಪೇಕ್ಷೆಯುಳ್ಳವರೇ ಹೊರ್ತು ಯಾರೂ ನೋಡಿಲ್ಲ. ನೀನು ನನ್ನನ್ನು ನೋಡಿದಪ್ರಕಾರ ಯಾರಿಂದಲೂ ನೋಡಲು ಸಾಧ್ಯವಲ್ಲ. ವೇದಾಧ್ಯಯನ ಮಾಡಿದವರಿಂದಲೇ ಆಗಲಿ, ವ್ರತಾಚರಣೆಯನ್ನು ಮಾಡಿದವರಿಂದಲೇ ಆಗಲಿ,

ದಾನಧರ್ಮಮಾಡಿದವರಿಂದಲೇ ಆಗಲಿ, ಯಾಗಮಾಡಿದವರಿಂದಲೇ ಆಗಲಿ, ನಾನು ಯಾರಿಂದಲೂ ಕಾಣತಕ್ಕವನಲ್ಲ. ದೇವತಾಂತರ ಸಂಬಂಧವಿಲ್ಲದ ಭಕ್ತಿಯಿಂದಲೇ ಹೊರತು, ಬೇರೆಯಾವುದರಿಂದಲೂ ಈ ಪ್ರಕಾರವಾಗಿರುವ ನನ್ನ ನಿಜಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕೂ, ನನ್ನ ನಿಜಸ್ವರೂಪವನ್ನು ನೋಡುವುದಕ್ಕೂ, ನಿರ್ಬಾಧಿಕವಾದ ಮೋಕ್ಷವನ್ನು ಹೊಂದುವುದಕ್ಕೂ, ಸಾಧ್ಯವಾದದ್ದಲ್ಲಾ. ಆದ್ದರಿಂದ ಎಲೈ ಅರ್ಜುನ! ಯಾವ ಮನುಷ್ಯನು ಸಮಸ್ತವಾದ ಕರ್ಮವನ್ನೂ ನನ್ನ ಆರಾಧನರೂಪವಾದದ್ದೇ ಹೊರತು ಬೇರೆಅಲ್ಲವೆಂದು ಮಾಡುವನೊ, ಎಲ್ಲಾ ಕೆಲಸಗಳಲ್ಲಿಯೂ ನಾನೇ ಮುಖ್ಯಪ್ರಾಪ್ಯನೆಂದು ತಿಳಿದಿರುವನೊ, ದೇವತಾಂತರ ಸಂಬಂಧವನ್ನು ಬಿಟ್ಟು ನನ್ನಲ್ಲಿಯೇ ಭಕ್ತಿಯಿಂದ ಕೂಡಿ ಇರುವನೋ, ಯಾವ ಪ್ರಾಣಿಗಳಲ್ಲಿಯೂ ಕೊಂಚವೂ ದ್ವೇಷವಿಲ್ಲದೆ ಇರುವನೋ, ಅಂಥಾ ಮಹಾಪುರುಷನು ನನ್ನನ್ನು ಹೊಂದುವನು.

ಈ ಪ್ರಕಾರ ವಿಶ್ವರೂಪದರ್ಶನವೆಂಬ ಹನ್ನೊಂದನೇ ಅಧ್ಯಾಯವು ಸಮಾಪ್ತವಾಯಿತು.

ಭಕ್ತಿಯೋಗವೆಂಬ ಹನ್ನೆರಡನೆ ಅಧ್ಯಾಯಪ್ರಾರಂಭ.

ಅರ್ಜುನ:—ಈ ಪ್ರಕಾರವಾಗಿ ಯಾವಾಗಲೂ ನಿನ್ನನ್ನೇ ಧ್ಯಾನಿಸಿಕೊಂಡು ಯಾವ ಭಕ್ತರು ನಿನ್ನನ್ನೇ ಆರಾಧಿಸುತ್ತಾರೆಯೋ, ಯಾರಾದರೆ ನಾಶರಹಿತನಾಗಿ

ಯೂ, ಕಣ್ಣಿಗೆ ಕಾಣಿಸಿಕೊಳ್ಳದವನಾಗಿಯೂ, ಇರುವ ನಿನ್ನನ್ನು ಆರಾಧಿಸುವರೋ, ಎರಡು ಕೂಟದವರಲ್ಲಿ ಯಾವಕೂಟದವರು ವಿಶೇಷವಾಗಿ ಯೋಗವನ್ನು ತಿಳಿದವರು.

ಶ್ರೀಭಗವಾನ್:— ನನ್ನಲ್ಲಿ ಮನಸ್ಸನ್ನಿಟ್ಟು, ಯಾರಾದರೆ ನನ್ನನ್ನು ಮುಖ್ಯೋದ್ದೇಶ್ಯವಸ್ತುವಾಗಿ ಭಾವಿಸಿ,ವಿಶೇಷವಾದಭಕ್ತಿಯಿಂದ ಕೂಡಿಗುವರೋ, ಅವರು ಯೋಗದಲ್ಲಿ ಸರ್ವಶ್ರೇಷ್ಠರೆಂದು ನನ್ನ ಅಭಿಪ್ರಾಯವು. ಯಾರಾದರೆ ನಾಶರಹಿತವಾಗಿಯೂ, ಇಂಥಾದ್ದೆಂದು ನಿರ್ಧರಿಸಕೂಡದ್ದಾಗೆಯೂ, ದೃಷ್ಟಿಗೆ ಗೋಚರವಾಗದಂಥಾದ್ದಾಗಿಯೂ, ಸಮಸ್ತದಲ್ಲಿಯೂ ವ್ಯಾಪಿಸಿರುವಂಥಾದ್ದಾಗಿಯೂ, ಚಿಂತಿಸಲೂಕೂಡ ಸಾಧ್ಯವಿಲ್ಲದ್ದಾಗಿಯೂ, ಸ್ಥಿರವಾದ್ದಾಗಿಯೂ, ಚಲಿಸದಂಥಾದ್ದಾಗಿಯೂ, ಶಾಶ್ವತವಾದದ್ದಾಗಿಯೂ, ಇರುವವಸ್ತುವನ್ನು, ಸಕಲೇಂದ್ರಿಯಗಳನ್ನೂ ನಿಗ್ರಹಿಸಿಕೊಂಡು, ಸಕಲ ಪದಾರ್ಥದಲ್ಲಿಯೂ ಸಮಬುದ್ಧಿಯುಳ್ಳವರಾಗಿ, ಆರಾಧಿಸುವರೋ,ಅಥಾ(ಸಮಸ್ತಪ್ರಾಣಿಗಳಿಗೂ ಹಿತವನ್ನೇ ಮಾಡಬೇಕಂಬ ಭುದ್ಧಿಯುಳ್ಳಂಥಾ)ಮನುಷ್ಯರು,ನನ್ನನ್ನೇ ಹೊಂದುವರು.ಆದರೆ ಈ ಅವ್ಯಕ್ತವಾದ ಪದಾರ್ಥದಲ್ಲಿ ಆಸಕ್ತರಾದಂಥಾವರಿಗೆ' ಕಷ್ಟವು ಅಧಿಕವಾಗಿ ಇರುವುದು.ಯಾಕಂದರೆ ದೇಹಾಭಿಮಾನವುಳ್ಳವರಿಗೆ ದೃಷ್ಟಿಗೆ ಗೋಚರ

ವಾಗದ ಪದಾರ್ಥದಲ್ಲಿ ಬುದ್ಧಿಪ್ರವೇಶವು ಕಷ್ಟಸಾಧ್ಯವಾದದ್ದಲ್ಲವೆ ? ಹೀಗಿಲ್ಲದೆ, ಯಾರಾದರೆ ಸಮಸ್ತ ಕರ್ಮಗಳನ್ನೂ ನನ್ನಲ್ಲಿ ಸಮರ್ಪಿಸಿ,ನನ್ನನ್ನೇ ಹೊಂದುವ ಇಚ್ಛೆಯುಳ್ಳವರಾಗಿ, ದೇವತಾಂತರದಲ್ಲಿ ಮನಸ್ಸನ್ನಿಡದೆನನ್ನಲ್ಲಿಯೇಮನಸ್ಸನ್ನಿಟ್ಟು,ನನ್ನನ್ನೇಧ್ಯಾನಿಸಿಕೊಂಡು ಆರಾಧಿಸುವರೊ, ಅಂಥವರಿಗೆ ನಾನು ಮೃತ್ಯುಸ್ವರೂಪವಾದಂಥಾ ಸಂಸಾರವೆಂಬ ಸಮುದ್ರದಿಂದ ಶೀಘ್ರದಲ್ಲೇ ಉದ್ಧಾರಮಾಡುವೆನು. ಆದ್ದರಿಂದ ನನ್ನಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಂಡು ನನ್ನಲ್ಲಿಯೇ ಮನಸ್ಸನ್ನು ಇಡು. ಹೀಗೆ ನಾನೇ ಶ್ರೇಷ್ಠವಾದಗತಿ ಎಂದು ನೀನು ಮನಸ್ಸಿನಲ್ಲಿ ನಿಶ್ಚಯಿಸಿದಮೇಲೆ ನೀನು ನನ್ನಲ್ಲಿಯೇ ವಾಸಮಾಡುವಿ.ಎಲೈ ಅರ್ಜುನ ! ನನ್ನಲ್ಲಿ ಸ್ಥಿರವಾಗಿ ಮನಸ್ಸನ್ನಿಡಲು ನಿನಿಗೆ ಶಕ್ತಿಯಿಲ್ಲದ ಪಕ್ಷದಲ್ಲಿ, ಅಭ್ಯಾಸ ಕ್ರಮೇಣ ನನ್ನನ್ನು ಹೊಂದುವುದಕ್ಕೆ ಅಪೇಕ್ಷಿಸು. ಹೀಗೆ ಅಭ್ಯಾಸಮಾಡುವುದಕ್ಕೂ ನೀನು ಅಸಮರ್ಥನಾಗಿದ್ದಪಕ್ಷದಲ್ಲಿ, ನನ್ನ ಕರ್ಮಾನುಷ್ಠಾನದಲ್ಲಿಯೇ ಆಸಕ್ತನಾಗಿರು. ನೀನು ಮಾಡುವ ಕರ್ಮಗಳನ್ನೆಲ್ಲಾ ನನಿಗೋಸ್ಕರ ಮಾಡಿದ್ದಾಗಿಯೇ ಮಾಡಿದರೂ ಸಿದ್ಧಿಯನ್ನು ಹೊಂದುವಿ. ಒಂದುವೇಳೆ ನೀನು ಇದನ್ನು ಮಾಡುವುದಕ್ಕೂ ಅಸಮರ್ಥನಾಗಿದ್ದ ಪಕ್ಷದಲ್ಲಿ, ಮಾಡುವ ಕರ್ಮಗಳನ್ನೆಲ್ಲಾ ನನ್ನಲ್ಲಿ ಸಮರ್ಪಿಸುವದೆಂಬ ಯೋಗವನ್ನು ಆಶ್ರಯಿಸಿ, ಮನಸ್ಸನ್ನು

ನಿಗ್ರಹಿಸಿಕೊಂಡು, ಸಕಲ ಕರ್ಮಗಳಲ್ಲಿಯೂ ಫಲಾಪೇಕ್ಷೆಯನ್ನು ಬಿಟ್ಟು, ಅದನ್ನೆಲ್ಲಾ ಭಗವಂತನಿಗೆ ಅರ್ಪಣೆಮಾಡಿಬಿಡು. ಶ್ರಮಸಾಧ್ಯವಾದಂಥಾ ಶಾಸ್ತ್ರಾಭ್ಯಾಸಕ್ಕಿಂತಲೂ ಜ್ಞಾನವು ಶ್ರೇಷ್ಠವಾದದ್ದು. ಈ ಜ್ಞಾನಕ್ಕಿಂತಲೂ ಧ್ಯಾನವು ಉತ್ತಮವಾದದ್ದು. ಈ ಧ್ಯಾನಕ್ಕಿಂತಲೂ ತಾನುಮಾಡುವ ಕರ್ಮಗಳಲ್ಲಿ ಫಲಾಪೇಕ್ಷೆಯನ್ನು ಬಿಟ್ಟುಬಿಡುವುದು ಬಹಳ ಮೇಲ್ಲೇದು. ಹೀಗೆ ಫಲಾಪೇಕ್ಷೆಯನ್ನು ಬಿಟ್ಟನಂತರವೇ ಪಾಪಗಳಿಂದ ಬಿಡಲ್ಪಟ್ಟು ಚಿತ್ತಶುದ್ಧಿಯನ್ನು ಹೊಂದುವಿ. ಯಾವ ಪ್ರಾಣಿಗಳಲ್ಲಿಯೂ ದ್ವೇಷವಿಲ್ಲದಂತೆಯೂ, ಎಲ್ಲರಲ್ಲಿಯೂ ಸ್ನೇಹದೊಡನೆಯೂ, ದಯೆದೊಡನೆಯೂ, ಮಮತಾರಹಿತನಾಗಿ; ತನ್ನದೆಂಬ ಅಭಿಮಾನವಿಲ್ಲದಂತೆಯೂ, ಅಹಂಕಾರವಿಲ್ಲದಂತೆಯೂ, ದುಃಖದಲ್ಲಿಯೂ ಸುಖದಲ್ಲಿಯೂ ಸಮ ಬುದ್ಧಿಯುಳ್ಳವನಾಗಿಯೂ ಎಲ್ಲವನ್ನೂ ಸಹಿಸಿಕೊಳ್ಳುವನಾಗಿಯೂ, ಯಾವಾಗಲೂ ತೃಪ್ತಿಯುಳ್ಳವನಾಗಿಯೂ, ಯೋಗಾಭ್ಯಾಸದಲ್ಲಿ ಆಸಕ್ತನಾಗಿಯೂ, ಮನಸ್ಸನ್ನು ನಿಗ್ರಹಿಸಿಕೊಂಡವನಾಗಿಯೂ, ತತ್ವಾರ್ಥಗಳಲ್ಲಿ ನಿಶ್ಚಯಜ್ಞಾನವುಳ್ಳವನಾಗಿಯೂ, ಮನಸ್ಸನ್ನೂ ಬುದ್ಧಿಯನ್ನೂ ನನ್ನಲ್ಲಿಟ್ಟವನಾಗಿಯೂ, ಫಲಾಪೇಕ್ಷೆಯನ್ನು ಬಿಟ್ಟು ನನ್ನಲ್ಲಿಭಕ್ತಿಯುಳ್ಳವನಾಗಿಯೂ, ಯಾವನು ಇರುವನೋ ಅವನೇ ನನಗೆ ಬಹಳ ಇಷ್ಟವಾದವನು ಯಾವ ಮನುಷ್ಯನು

ಲೋಕದಲ್ಲಿಯಾರನ್ನೂ ದುಃಖಪಡಿಸುವದಿಲ್ಲವೋ, ಯಾವೊನಾದರೆ ಲೋಕದಲ್ಲಿ ಇರುವ ಜನಗಳಿಂದ ದುಃಖವನ್ನು ಹೊಂದುವುದಿಲ್ಲವೋ, ಯಾವೋನು ಸಂತೋಷದಿಂದಲೂ ಕೋಪದಿಂದಲೂ ವ್ಯಸನದಿಂದಲೂ ಬಿಡಲ್ಪಟ್ಟಿದ್ದಾನೆಯೋ, ಅಂಥವನು ನನಗೆ ಪ್ರಿಯನಾದವನು. ಆಶಾರಹಿತನಾಗಿಯೂ, ಶುಚಿಯಾಗಿಯೂ, ಸಮರ್ಥನಾಗಿಯೂ, ಎಲ್ಲದರಲ್ಲಿಯೂ ಉದಾಸೀನ ಭಾವವುಳ್ಳವನಾಗಿಯೂ, ಯಾವದಕ್ಕೂ ವ್ಯಸನಪಡದಂಥಾವನಾಗಿಯೂ, ತನಗಾಗಿ ಒಂದು ಕರ್ಮವನ್ನೂ ಮಾಡದೆ ಬಿಟ್ಟವನಾಗಿಯೂ, ಇರುವ ನನ್ನ ಭಕ್ತನು ನನಗೆ ಪ್ರಿಯನಾದಂಥಾವನು. ಯಾವವೊಂದಕ್ಕಾಗಿ ಸಂತೋಷವನ್ನೇ ಆಗಲಿ, ಮತ್ತೊಂದಕ್ಕಾಗಿ ದ್ವೇಷವನ್ನೇ ಆಗಲಿ, ಹೊಂದುವದಿಲ್ಲವೋ, ಒಂದಕ್ಕೂ ದುಃಖಿಸದೆಯೂ ಆಸೆಪಡದೆಯೂ ಇದ್ದಾನೆಯೋ, ಶುಭವನ್ನೇ ಆಗಲಿ ಅಶುಭವನ್ನೇ ಆಗಲಿ ಯಾವೋನು ಗಣನೆಯಲ್ಲಿ ತರದೆ ಇರುವನೋ, ಅಂಥಾ ಭಕ್ತನು ನನಗೆ ಬಹಳ ಪ್ರಿಯನಾದವನು. ಶತೃವಿನಲ್ಲಿಯೂ ಮಿತ್ರನಲ್ಲಿಯೂ ಒಂದೇ ಸಮನಾಗಿದ್ದುಕೊಂಡು, ಮರ್ಯಾದೆಯನ್ನು ಹೊಂದಿದರೂ, ಅವಮರ್ಯಾದೆಯನ್ನು ಮಾಡಲ್ಪಟ್ಟರೂ, ಶೀತ, ಉಷ್ಣ, ಸುಖ, ದುಃಖ, ಎಂಬ ಭೇದವನ್ನು ಎಣಿಸದೆ, ಮನೋವಿಕಾರ ಹೊಂದದೇಯೂ, ಯಾರಾದರೂ ದೂಷಿಸಿದರೂ ಸ್ತೋತ್ರ ಮಾಡಿದರೂ ಒಂದೇ ಸಮವಾಗಿ ಎಣಿಸಿ.

ಕೊಂಡು, ಮೌನವ್ರತವನ್ನುತಾಳಿ, ಸಿಕ್ಕಿದ್ದರಲ್ಲಿಯೇ ತೃಪ್ತಿಯನ್ನುಹೊಂದಿ, ಗೃಹಾರಾಮಗಳಲ್ಲಿಅಭಿಮಾನವಿಲ್ಲದೆ ಭಗವಂತನಲ್ಲಿಯೇ ಸ್ಥಿರಬುದ್ಧಿಯನ್ನಿಟ್ಟಿರುವ ಭಕ್ತನು ನನಿಗೆ ಬಹಳಪ್ರಿಯನಾದವನು. ಯಾರಾದರೆ ಈ ಮೇಲೆಹೇಳಿದ, ಅಮೃತದಂತಿರುವ, ಧರ್ಮಗಳನ್ನು ಯಥಾಕ್ರಮವಾಗಿ, ಶ್ರದ್ಧೆಯಿಂದ, ನನ್ನನ್ನೇ ಮುಖ್ಯ ಪ್ರಾಪ್ಯ ವಸ್ತುವೆಂದುತಿಳಿದು, ಅನುಷ್ಠಿಸುವರೋ, ಅಂಥಾ ಭಕ್ತರು ನನಿಗೆ ಬಹಳ ಪ್ರಿಯವಾದವರು.

ಈ ಪ್ರಕಾರವಾಗಿ ಭಕ್ತಿಯೋಗವೆಂಬ ಹನ್ನೆರಡನೆ
ಅಧ್ಯಾಯಸಮಾಪ್ತವಾಯಿತು.

ಪ್ರಕೃತಪುರುಷ ನಿರ್ದೇಶಯೋಗವೆಂಬ ಹದಿಮೂರನೆ

ಅಧ್ಯಾಯ ಪ್ರಾರಂಭ.

ಅರ್ಜುನ:—ಅಯ್ಯಾ ಕೃಷ್ಣ! ಪ್ರಕೃತಿಎಂದರೆ ಏನು? ಪುರುಷನೆಂಬುವನು ಯಾರು? ಕ್ಷೇತ್ರವೆಂಬುವದುಯಾವದು ? ಕ್ಷೇತ್ರಜ್ಞನುಯಾರು ? ಜ್ಞಾನವೆಂದರೆ ಏನು ? ಜ್ಞೇಯವೆಂಬುವದುಯಾವದು ? ಇದನ್ನೆಲ್ಲಾನಾನು ನಿನ್ನಿಂದ ತಿಳಿದುಕೊಳ್ಳಬೇಕೆಂದು ಅಪೇಕ್ಷಿಸುತ್ತೇನೆ.

ಶ್ರೀ ಭಗವಾನ್:—ಎಲೈ ಅರ್ಜುನ! ಕ್ಷೇತ್ರವೆಂಬುವದು ಯೀದೇಹಕ್ಕೇನೆ ಹೆಸರು. ಈ ದೇಹವನ್ನು ಕ್ಷೇತ್ರವೆಂಧು ತಿಳಿದಂಥಾವನನ್ನೇ ಕ್ಷೇತ್ರಜ್ಞನೆಂದು (ಕ್ಷೇತ್ರಕ್ಷೇತ್ರಜ್ಞ ಜ್ಞಾನವನ್ನರಿತವರು)ಹೇಳುವರು.

ಪ್ರತಿಒಬ್ಬನ ಕ್ಷೇತ್ರವೆಂಬುವದೇಹದಲ್ಲಿಯೂ ಅಂತಃಪ್ರ ವಿಷ್ಟನಾಗಿ ಕ್ಷೇತ್ರಜ್ಞನೆಂದು ಕರೆಯಲ್ಪಡುವನು ನಾನೇ ಎಂದುತಿಳಿ. ಜ್ಞಾನವೆಂದರೆ, ದೇಹವೆಂಬುವುದ ಕ್ಕಿಂತಲೂ ಬೇರೆಯಾದದ್ದು ಆತ್ಮನು,ಎಂದು ತಿಳಿಯು ವಿಕೆ ಕ್ಷೇತ್ರವೆಂದು ಕರೆಯಲ್ಪಡುವ ದೇಹವು ಯಂಥಾದ್ದು, ಅದು ಯಾವ ವಿಧವಾದದ್ದು, ಅದು ಹ್ಯಾ ಗೆ ಹ್ಯಾಗೆ ಬಧಲಾಯಿಸುತ್ತದೆ, ಯಾವದರಿಂದ ಉಂ ಟಾಗಿಧೆ, ಅದು ಯಾತಕ್ಕೋಸ್ಕರ ಸೃಷ್ಟಿಸಲ್ಪಟ್ಟಿ ತು, ಅದರ ಸ್ವಭಾವನೆಂಥಾದ್ದು ? ಎಂಬ ವಿಚಾರಗ ಳನ್ನೆಲ್ಲಾ ಯಿಗ ನಿನಗೆ ಸೂಕ್ಷ್ಮವಾಗಿ ತಿಳಿಸುವೆನು. ನಿಧಾನವಾಗಿ ಕೇಳು. ಯಿದೂ ಅಲ್ಲದೆ ಕ್ಷೇತ್ರಜ್ಞ ನೆಂಬುವನು ಯಾರು, ಅವನಯೋಗ್ಯತೆ ಯಂಥಾದ್ದು? ಎಂಬುವುದನ್ನೂನಿನಿಗೆ ತಿಳಿಸುವೆನು. ಯಿವಿಚಾರಗಳೆ ಲ್ಲವೂ ವೇದಗಳಲ್ಲಿಯೂ, ವುಪನಿಷತ್ತುಗಳಲ್ಲಿಯೂ, ಬ್ರಹ್ಮಸೂತ್ರಗಳಲ್ಲಿಯೂ, ಸವಿಸ್ತಾರವಾಗಿ ಚನ್ನಾ ಗಿ ಚರ್ಚಿಸಲ್ಪಟ್ಟು, ಕಡೆಯಲ್ಲಿ ಅವುಗಳ ನಿರ್ಣಯ ವು ಅವುಗಳಲ್ಲಿಯೇ ಪುರಾಣ ಪ್ರಸಿದ್ಧರಾದ ಮಹಾತ್ಮ ರುಗಳಾದ ರುಷಿಗಳಿಂದ, ಯಥಾವತ್ತಾಗಿ ಮಾಡಲ್ಪ ಟ್ಟಿದೆ. ಅದನ್ನೆಲ್ಲಾ ಯಿಗ ನಿನಿಗೆ ತಿಳಿಸುವೆನು. ಯಿಕ್ಷೇತ್ರವೆಂದು ಕರೆಯಲ್ಪಡುವ ದೇಹವು ಪಂಚ ಭೂತಗಳಾದ ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ ಗಳಿಂದಲೂ, ಅಹಂಕಾರ ತತ್ವದಿಂದಲೂ, ಜ್ಞಾ

ನ ತತ್ವದಿಂದಲೂ, ಅವ್ಯಕ್ತವಾದ ಯಿಾಶ್ವರ ಶಕ್ತಿಯಿಂ ದಲೂ, ಪಂಚಜ್ಞಾನೇಂದ್ರಿಯಗಳಿಂದಲೂ, ಪಂಚಕ ರ್ಮೇಂದ್ರಿಯಗಳಿಂದಲೂ, ಮನಸ್ಸಿನಿಂದಲೂ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಗಳಿಂದಲೂ, ಮಾಡಲ್ಪ ಟ್ಟದೆ. ಯಿವುಗಳಿಗೇನೆ ಯಿಪ್ಪತ್ತನಾಲ್ಕು ತತ್ವಗಳೆಂ ದು ಹೆಸರು. ಯಿಾ ಯಿಪ್ಪತ್ತನಾಲ್ಕು ತತ್ವಗಳಿಂದಲುಂ ಟಾದ, ಕ್ಷೇತ್ರಜ್ಞನಿಗೆ ಸಂಮಂಧಪಡದ, ಯಿಾ ಕ್ಷೇ ತ್ರದ ವಿಕಾರಗಳು ಇಚ್ಛೆ ಎಂತಲೂ, ದ್ವೇಷವೆಂತಲೂ, ಸುಖವೆಂತಲೂ, ದುಃಖವೆಂತಲೂ, ದೇಹೇಂದ್ರಿಯ ಸಮುದಾಯವೆಂತಲೂ, ಯಿದರಲ್ಲಿ ವುಂಟಾಗುವ ಬು ದ್ಧಿಯಂತಲೂ, ಧೈರ್ಯವೆಂತಲೂ, ಹೇಳಲ್ಪಟ್ಟಧೆ. ದು ರಭಿಮಾನವಿಲ್ಲದೆಯೂ, ಸಹನೆಉಳ್ಳದ್ದಾಗಿಯೂ, ಕಪ ಟಸ್ವಭಾವ ಇಲ್ಲದೆಯೂ, ಗುರುಶಿಶ್ರೂಷೆಮಾಡುವಿಕೆ ಯೂ, ಡಂಭವಿಲ್ಲದೆಯೂ, ಹಿಂಸೆಪಡಿಸದೇಯೂ, ದೇಹವನ್ನೂ ಮನಸ್ಸನ್ನೂ ಶುದ್ಧವಾಗಿ ಯಿಟ್ಟುಕೊ ಳ್ಳುವಿಕೆಯೂ, ಸಂಶಯವಿಲ್ಲದ ದೃಢವಾದ ಜ್ಞಾನವ ನ್ನುಂಟಾಗಿರುವಿಕೆಯೂ, ಮನಸ್ಸನ್ನ ಸ್ವಾಧೀನ ಪಡಿ ಸಿಕೊಳ್ಳುವಿಕೆಯೂ,ಕುತ್ಸಿತ ಪುರುಷಾರ್ಥಗಳಲ್ಲಿ ಆಸ ಕ್ತಿ ಯಿಲ್ಲದೆಯೂ, ಯಾವ ವಿಧವಾದ ಅಹಂಕಾರವೂ ಯಿಲ್ಲದೆಯೂ, ಜನನದಲ್ಲಿಯೂ, ಮರಣದಲ್ಲಿಯೂ, ವಾರ್ಧಿಕ್ಯದಲ್ಲಿಯೂ, ವ್ಯಾಧಿಗಳಲ್ಲಿಯೂ, ಯಿರುವ ದುಃಖಗಳನ್ನ ಅರಿತುಕೊಳ್ಳುವಿಕೆಯೂ, ಯಾವ ನಶ್ವರ

ಪದಾರ್ಥಗಳಲ್ಲಿಯೂ ಆಸಕ್ತಿ ಯಿಲ್ಲದೆಯೂ, ಮಕ್ಕಳಲ್ಲಿಯೂ, ಮನೆಯಲ್ಲಿಯೂ, ಹೆಂಡತಿಯಲ್ಲಿಯೂ, ಯಿವೇ ಮೊದಲಾದವುಗಳಲ್ಲಿ ವಿಶ್ವಾಸವಿಲ್ಲದೆಯೂ, ಸಂತೋಷವನ್ನುಂಟುಮಾಡುವ ವಿಷಯಗಳಲ್ಲಿಯೂ, ದುಃಖವನುಂಟುಮಾಡುವ ವಿಷಯದಲ್ಲಿಯ ೂ, ಭೇದವನ್ನು ಎಣಿಸದೆ ಸಮಬುದ್ಧಿಯಿಂದ ನೋಡುವದೂ, ದೇವತಾಂತರ ಸಂಪರ್ಕವಿಲ್ಲದಂಥಾ ದೃಢವಾದ ಭಗವದ್ಭಕ್ತಿಯೂ, ಏಕಾಂತ ಪ್ರದೇಶದಲ್ಲಿ ವಾಸಮಾಡುವಿಕೆಯೂ, ಜ್ಞಾನಹೀನರ ಸಹವಾಸದಲ್ಲಿ ಪ್ರೀತಿ ಯಿಲ್ಲದೇ ಯಿರುವಿಕೆಯೂ, ಆತ್ಮಜ್ಞಾನದಲ್ಲಿಯೇ ಯಾವಾಗಲೂ ಆಸಕ್ತಿಯುಳ್ಳವನಾಗಿ ಯಿರುವಿಕೆಯೂ, ಯಿ ತತ್ವಜ್ಞಾನಗಳಿಂದುಂಟಾಗುವ ಫಲವು ಮೋಕ್ಷವೆಂದು ಅರಿಯುವಿಕೆಯೂ, ಯಿವೆಲ್ಲವೂ ಜ್ಞಾನವೆನ್ನಿಸಿಕೊಳ್ಳುವವು. ಯಿವುಗಳಲ್ಲಿ ವಂದೂ ಅಲ್ಲದೆ ಯಿರುವದು ಅಜ್ಞಾನವೆನ್ನಿಸಿಕ್ಕೊಳ್ಳುವದು. ತಿಳಿದುಕೊಳ್ಳಬೇಕಾದದ್ದು ಯಾವದೊ, ಯಾವುದನ್ನ ತಿಳಿದುಕ್ಕೊಂಡರೆ ಮೋಕ್ಷ ಸಿದ್ಧಿಸುವದೋ, ಅದನ್ನ ಹೇಳುವೆನು ಕೇಳು. ಆ ಪರಮಾತ್ಮನು ಅನಾದಿಯಾದವನು, ಅವನು 'ಸತ್' ಎಂತಲೇ ಆಗಲಿ 'ಅಸತ್' ಎಂತಲೇ ಆಗಲೀ ಹೇಳಲ್ಪಡುವುದಿಲ್ಲ. ಆ ಪರಮಾತ್ಮನಿಗೆ ಎಲ್ಲಾ ಕಡೆ ಯಲ್ಲಿಯೂ ಕೈಯ್ಯೂ ಕಾಲೂ ಯಿರುವದು. ಎಲ್ಲಾ ಕಡೆಯಲ್ಲಿಯೂ ಕಣ್ಣೂತಲೆಯೂಮುಖವೂ ಇರುವುದು. ಎಲ್ಲಾ

ಪಕ್ಕದಲ್ಲಿಯೂ ಕಿವಿಯೂ ಯಿರುವುದು. ಇಷ್ಟೇ ಅಲ್ಲದೆ ಅವನು ಎಲ್ಲಾ ಪ್ರದೇಶವನ್ನೂ ವ್ಯಾಪಿಸಿಕೊಂಡು ಕೂತುಕೊಂಡಿರುವನು. ಆ ಪರಮಾತ್ಮನು ಸಕಲೇಂದ್ರಿಯ ಜನ್ಯಜ್ಞಾನವನ್ನುಳ್ಳವನಾದ್ದಾಗ್ಯೂ ಯಾವ ಯಿಂದ್ರಿಯಗಳಿಂದಲೂ ಕೂಡಿದವನಹಾಗೆ ಯಿಲ್ಲ. ಯಾವ ವಿಷಯದಲ್ಲಿಯೂ ಆತನಿಗೆ ಆಸಕ್ತಿ ಯಿಲ್ಲದೆ ಇದ್ದಾಗ್ಯೂ, ಸಮಸ್ತವನ್ನೂ ವಹಿಸಿಕೊಂಡು, ಎಲ್ಲಕ್ಕೂ ಆತನೇ ಆಧಾರಭೂತನಾಗಿ ಇಧಾನೆ. ತಾನು ಸ್ವತಃಸತ್ವ ರಜಸ್ತಮೋ ಗುಣಗಳಲ್ಲಿ ಕಲಿಸದೆ ಇದ್ದಾಗ್ಯೂ, ಈ ಗುಣಗಳ ಅನುಭವವನ್ನು ಉಳ್ಳವನಾಗಿದ್ದಾನೆ. ಇದೂ ಅಲ್ಲದೆ ಆ ಪರಮಾತ್ಮನು ಸಮಸ್ತ ಭೂತಗಳ ಒಳಗೂ ಹೊರಗೂ ವ್ಯಾಪಿಸಿದ್ದಾನೆ. ಎಂದಿಗೂ ಚಲಿಸದಂಥವನಾಗಿಯೂ, ಎಲ್ಲೆಲ್ಲಿಯೂ ಸಂಚರಿಸುವಂಥವನಾಗಿಯೂ, ಇಧಾನೆ. ಅತಿಸೂಕ್ಷ್ಮವಾಗಿರುವುದ್ದರಿಂದ ಆ ಪರಮಾತ್ಮನು ತಿಳಿಯಕೂಡದವನಾಗಿಯೂ ಇಧಾನೆ. ಹೀಗೂ ಅಲ್ಲದೆ ಅವನು ಅಜ್ಞಾನಿಗಳಿಗೆ ಬಹಳ ದೂರದಲ್ಲಿರುವಂಥವನಾಗಿಯೂ, ಜ್ಞಾನಿಗಳಿಗೆಬಹಳ ಸಮೀಪದಲ್ಲಿರುವಂಥವನಾಗಿಯೂ, ಕಾಣಿಸಿಕೊಳ್ಳುತ್ತಾನೆ. ಮತ್ತು ಈ ಪರಮಾತ್ಮನು ಜ್ಞಾನಿಗಳಿಗೆ ಸಮಸ್ತ ಭೂತಗಳಲ್ಲಿಯೂ ಅಭೇದವಾದ ಏಕಾಕಾರವುಳ್ಳವವನಾಗಿಯೂ, ಅಜ್ಞಾನಿಗಳ ಕಣ್ಣಿಗೆ ಭೇದವನ್ನ ತೋರ್ಪಡಿಸುವನಾಗಿಯೂ, ಇರುವನು.

ಈ ಪರಮಾತ್ಮನು ಸಮಸ್ತ ಪ್ರಾಣಿಗಳನ್ನೂ ಕಾಪಾಡುವಂಥವನಾಗಿಯೂ, ಪ್ರಳಯ ಕಾಲದಲ್ಲಿ ಸಂಹರಿಸುವಂಥವನಾಗಿಯೂ, ಪುನಃ ಅವುಗಳನ್ನೆಲ್ಲಾ ಸೃಷ್ಟಿಸುವಂಥವನಾಗಿಯೂ, ಇಥಾನೆಂದು ತಿಳಿಯತಕ್ಕದ್ದು. ಹೀಗೆಯೂ ಅಲ್ಲದೇ ಈಪರಮಾತ್ಮನು ಪ್ರಕಾಶವಾಗಿರುವ ವಸ್ತುಗಳಲ್ಲಿ ಇರುವ ತೇಜಸ್ಸೆಂತಲೂ, ಅಂಧಕಾರವನ್ನು ಹಿಂದಕ್ಕೆ ಹಾಕಿದವನೆಂತಲೂ, ಹೇಳಲ್ಪಡುವನು. ಜ್ಞಾನವೂ ಅವನೇ, ತಿಳಿಯತಕ್ಕವನೂ ಅವನೇ, ಜ್ಞಾನದಿಂದ ಗೋಚರವಾಗುವನೂ ಅವನೇ, ಎಲ್ಲರ ಹೃದಯದಲ್ಲಿಯೂ ಕೂತಿರುವನೂ ಅವನೇ. ಈ ಮೇಲೆ ಹೇಳಿದ ಪ್ರಕಾರವಾಗಿ ಕ್ಷೇತ್ರವೆಂಬುವದನ್ನೂ, ಜ್ಞಾನವೆಂಬುವುದನ್ನೂ, ಜ್ಞೇಯವೆಂಬುವುದನ್ನೂ, ಸೂಕ್ಷ್ಮವಾಗಿ ವಿವರಿಸಿದ್ದಾಯಿತು. ನನ್ನ ಭಕ್ತನು ಇದನ್ನು ಚನ್ನಾಗಿ ತಿಳಿದುಕೊಂಡು, ನನ್ನ ಸ್ವಭಾವವನ್ನು ಹೊಂದುವುದಕ್ಕೆ ಅರ್ಹನಾಗುವನು. ಪ್ರಕೃತಿಯನ್ನೂ ಪುರುಷನನ್ನೂ ಆದಿರಹಿತವಾದದ್ದೆಂದು ತಿಳಿ. ಸಮಸ್ತವಾದ ಕಾಯಕ, ಮಾನಸಿಕವಿಕಾರಗಳನ್ನೂ, ಗುಣಗಳನ್ನೂ, ಪ್ರಕೃತಿಯಿಂದಲೇ ಉಂಟಾದವುಗಳೆಂದು ತಿಳಿ. ಪ್ರಕೃತಿಸಮಂಧವಾದ ಈ ದೇಹಕ್ಕೂ ಈ ದೇಹದಲ್ಲಿ ಇರುವಐದು ಕರ್ಮೇಂದ್ರಿಯ, ಐದು ಜ್ಞಾನೇಂದ್ರಿಯ, ಮನಸ್ಸೆ ಮೊದಲಾದ ತತ್ವಗಳಿಗೂ ಆಧಾರಭೂತವಾದದ್ದು,

ಪ್ರಕೃತಿಯೆಂದು ಹೇಳಲ್ಪಡುತ್ತೆ. ಈ ಪ್ರಕೃತಿ ಸಂಮಂಧವನ್ನು ಹೊಂದಿರುವ ಪುರುಷನು ಸುಖಾನುಭವಕ್ಕೂ, ದುಖಾನುಭವಕ್ಕೂ, ಕಾರಣಭೂತನೆಂದು ಹೇಳಲ್ಪಡುತ್ತೆ. ಪುರುಷನು ಪ್ರಕೃತಿ ಸಂಮಂಧವಾದ ದೇಹದಲ್ಲಿ ಕೂತುಕೊಂಡು, ಆ ಪ್ರಕೃತಿಸಂಮಂಧವಾದ ಗುಣಗಳನ್ನು ಅನುಭವಿಸುತ್ತಾನೆ. ಈ ಪುರುಷನಿಗೆ ಸದ್ಯೋನಿ ಅಸದ್ಯೋನಿ ಸಂಮಂಧವು ವುಂಟಾಗುವುದಕ್ಕೆ ಕಾರಣವು ಸತ್ವ, ರಜ, ಸ್ತಮೋ ಗುಣಗಳಲ್ಲಿ ಮಾಡುವ ಆಸಕ್ತಿಯೇ ಹೊರತು ಮತ್ತ ಬೇರೆಯಿಲ್ಲ.

ಈ ಪ್ರಕಾರವಾಗಿ ಉತ್ಕೃಷ್ಟ ನಿಕೃಷ್ಟ ದೇಹಗಳಲ್ಲಿ ಕೂತಿರುವ ಪುರುಷನು, ಈ ಪ್ರಕೃತಿಯ ಮನೊವಾಕ್ಕಾಯಗಳಿಂದ ಮಾಡಲ್ಪಡುವ ಸುಕೃತ ದುಷ್ಕೃತಗಳನ್ನು ಸಮೀಪವರ್ತಿಯಾಗಿ ನೋಡಿಕೊಂಡು, ಅಂಥಾ ಕೆಲಸಗಳಿಗೆ ತನ್ನ ಅನುಮತಿಯನ್ನು ಕೊಟ್ಟುಕೊಂಡು, ಆ ದೇಹವನ್ನ ಧಾರಣೆ ಮಾಡಿಕೊಂಡು. ಆದರಲ್ಲಿ ಕೂತಿರುವಾಗ ತನಿಗೆ ಉಂಟಾಗುವ ಸುಖ ದುಃಖಗಳನ್ನು ಅನುಭವಿಸಿಕೊಂಡು, ಸಕಲಕ್ಕೂ ಯಜಮಾನನಾಗಿ, ಪರಮಾತ್ಮನೆಂತಲೂ ಕರೆಯಲ್ಪಡುವನು. ಈ ಪುರುಷ, ಪ್ರಕೃತಿಗಳನ್ನು ಮೇಲೆ ವಿವರಿಸಿರುವ ಪ್ರಕಾರ ಯಾವೋನು ಚನ್ನಾಗಿ ತಿಳಿದುಕೊಳ್ಳುವನೋ, ಅವನು, ಎಂಥಾ ಕರ್ಮಾನುಷ್ಟಾ

ನವನ್ನುಳ್ಳವನಾಗಿದ್ದಾಗ್ಯೂ, ಮೃತಪಟ್ಟ ನಂತರ ಪು ನಃ ಈ ಭೂಮಿಯಲ್ಲಿ ಜನಿಸುವುದಿಲ್ಲ. ಕೆಲವು ಯೋಗಿಗಳು ತದೇಕಧ್ಯಾನದಿಂದಲೇ ತಮ್ಮಲ್ಲಿಯೇ ಆತ್ಮನನ್ನು ತಮ್ಮ ಮನಸ್ಸಿನಿಂದ ಸಾಕ್ಷಾತ್ಕರಿಸುವರು. ಮತ್ತು ಕೆಲವರು ಸಾಂಖ್ಯಯೋಗವೆಂಬ ಜ್ಞಾನಬಲದಿಂದಲೂ, ಇನ್ನೂ ಕೆಲವರು ಕರ್ಮಯೋಗ ಬಲದಿಂದಲೂ, ಸಾಕ್ಷಾತ್ಕರಿಸುವರು. ಈ ಮೇಲೆ ಹೇಳಿದ ಕರ್ಮ,ಜ್ಞಾನ, ಧ್ಯಾನ, ಯೋಗಗಳಿಂದ ಆತ್ಮ ಸಾಕ್ಷಾತ್ಕಾರವನ್ನು ಮಾಡಲು ಯೋಗ್ಯತೆ ಸಾಲದ ಇತರರು, ತತ್ವಜ್ಞಾನವುಳ್ಳವರಿಂದ ಕೇಳಿ, ತಿಳಿದುಕೊಂಡು, ಆತ್ಮೋಪಾಸನವನ್ನು ಮಾಡುವರು. ಇಂಥಾವರೂ ಕೂಡ ಸದ್ಗುರುವಿನ ಉಪದೇಶವನ್ನ ಅನುಸರಿಸುವುದರಿಂದ ಪಾಪರಹಿತರಾಗಿ, ಮೃತ್ಯುವನ್ನು ಅತಿಕ್ರಮಿಸುವರು. ಉಂಟಾಗಿರುವ ಚರಾಚರ ವಸ್ತುಗಳೆಲ್ಲಾ ಎದುವರಿವಿಗೆ ನೋಡಿದರೂ, ಕ್ಷೇತ್ರವೇನು, ಕ್ಷೇತ್ರಜ್ಞನೇನು, ಇವೆರಡರ ಸಂಬಂಧದಿಂದ ಉಂಟಾದದ್ದೇ ಹೊರತು ಮತ್ತು ಬೇರೆಅಲ್ಲವೆಂದು ತಿಳಿಯುಯ್ಯಾ ಅರ್ಜುನ! ಯಾವನಾದರೆ ಪರಮೇಶ್ವರನನ್ನು ಎಲ್ಲಾ ಪ್ರಾಣಿಗಳಲ್ಲಿಯೂ ಸಮಾನಾಕಾರ ಜ್ಞಾನದಿಂದ ಇರುವನೆಂತಲೂ, ಈ ದೇಹಾದಿಗಳು ನಾಶಹೊಂದಿದ ಕಾಲದಲ್ಲಿಯೂ ಆ ಪರಮಾತ್ಮನು ನಾಶಹೊಂದುವುದಿಲ್ಲವೆಂತಲೂ, ಯಾವ್ವೋನು ಚನ್ನಾಗಿ ತಿಳಿಯುವನೋ

ಅವನೇ ನಿಶ್ಚಯಜ್ಞಾನವುಳ್ಳವನು. ಸಮಸ್ತ ಪ್ರಾ
ಣಿಗಳಲ್ಲಿಯೂ ಇರುವ ಪರಮಾತ್ಮನನ್ನು ಸಮಾನ
ಜ್ಞಾನವನ್ನುಳ್ಳವನೆಂದು ತಿಳಿಯುವನು ತನ್ನನ್ನು
ತಾನೇ ನಾಶಪಡಿಸಿಕೊಳ್ಳುವದಿಲ್ಲ. ಆದರೆ ಈ ಸ
ಮತಾಜ್ಞಾನದಿಂದ ಶ್ರೇಷ್ಠವಾದ ಗತಿಯನ್ನೇ ಹೊಂ
ದುವನು. ಯಾವನಾದರೆ ಮಾಡಲ್ಪಡುವಂಥಾ ಎಲ್ಲಾ
ಕಾರ್ಯಗಳೂ ಪ್ರಕೃತಿಯಿಂದಲೇ 'ಮಾಡಲ್ಪಟ್ಟದ್ದೆಂ
ತಲೂ, ಪರಮಾತ್ಮನಿಂದ ಮಾಡಲ್ಪಟ್ಟದ್ದಲ್ಲವೆಂತಲೂ,
ತಿಳಿಯುವನೋ, ಅವನೇ ನಿಶ್ಚಯಾಂಶವನ್ನರಿತವನು.
ಯಾವಾಗಬೇರೆಬೇರೆಯಾಗಿ ಕಾಣಬರುವಂಥಾ ಎಲ್ಲಾ
ಪ್ರಾಣಿಗಳನ್ನೂ ಒಬ್ಬನಾದ ಪರಮಾತ್ಮನಲ್ಲಿರುವಂತೆ
ಯೂ, ಅಲ್ಲಿಂದಲೇ ವಿಸ್ತಾರವನ್ನು ಹೊಂದಿ ಬೇರೆ ಬೇ
ರೆಯಾಗಿ ತೋರ್ಪಡುವುದೆಂತಲೂ, ತಿಳಿಯುವನೋ,
ಆಗ ಅಂಥಾ ಮಹಾನುಭಾವನು, ಪರಬ್ರಹ್ಮಸ್ವರೂಪ
ವನ್ನು ಹೊಂದುವನು. ಈ ಪರಮಾತ್ಮನು ಆದಿರಹಿತ
ನಾದ್ದರಿಂದಲೂ, ಸತ್ವ ರಜ ಸ್ತಮೋ ಗುಣರಹಿತನಾದ್ದ
ರಿಂದಲೂ, ನಾಶರಹಿತನಾದ್ದರಿಂದಲೂ, ಈ ಪ್ರಕೃತಿಸಂ
ಮಂಧದಿಂದುಟಾದ ಶರೀರದಲ್ಲಿ ಇದ್ದುಕೊಂಡಿದ್ದರೂ,
ಯಾವದನ್ನು ಮಾಡುವದೂ ಇಲ್ಲ ಯಾವುದರಿಂದಲೂ
ಅಂಟಲ್ಪಡುವುದಿಲ್ಲ. ಹ್ಯಾಗಾದರೆ, ಎಲ್ಲೆಲ್ಲಿಯೂ ವ್ಯಾಪಿಸಿ
ಕೊಂಡಿರುವ ಆಕಾಶವು ಅತಿಸೂಕ್ಷ್ಮವಾಗಿರುವು
ದ್ದರಿಂದ, ಯಾವುದರಿಂದಲೂ ಅಂಟಲ್ಪಡುವುದಿಲ್ಲವೋ

ಹಾಗೆಯೇ ಪರಮಾತ್ಮನು ಎಲ್ಲಾವಿಧವಾದ ಶರೀರಗಳಲ್ಲಿಯೂ ಇದ್ದುಕೊಂಡು ಇದ್ದಾಗ್ಯೂ ಯಾವುದರಿಂದಲೂ ಅಂಟಲ್ಪಡುವುದಿಲ್ಲ. ಸೂರ್ಯನು ಒಬ್ಬನಾಗಿದ್ದಾಗ್ಯೂ ಸಮಸ್ತ ಪ್ರಪಂಚಕ್ಕೂ ಹ್ಯಾಗೆ ಬೆಳಕನ್ನು ಕೊಡುತ್ತಾನೆಯೊ, ಅದೇಪ್ರಕಾರ ಈ ಶರೀರಗಳಿಗೆಲ್ಲಾ ಯಜಮಾನನಾದ ಕ್ಷೇತ್ರಿಯನ್ನಿಸಿಕೊಳ್ಳುವ ಪರಮಾತ್ಮನೂ ಕೂಡ ಅವನು ಪ್ರವೇಶಿಸುವ ದೇಹಗಳನ್ನೆಲ್ಲಾ ಹಾಗೆಯೇ ಪ್ರಕಾಶಪಡಿಸುತ್ತಾನೆ. ಯಾರಾದರೆ ಕ್ಷೇತ್ರಕ್ಕೂ ಕ್ಷೇತ್ರಜ್ಞನಿಗೂ ಇರುವ ಭೇದವು ಮೇಲೆ ವಿವರಿಸಿ ಇರುವಂಥಾದ್ದೆಂದು ತಮ್ಮ ಜ್ಞಾನವೆಂಬುವ ಕಣ್ಣಿನಿಂದ ಅರಿಯುವರೊ, ಮತ್ತು ಯಾಥಾದರೆ ಪಕೃತಿ ಸಂಬಂಧದಿಂದುಂಟಾದ ಸಮಸ್ತ ಸ್ಥೂಲಾಕಾರಗಳ ವಿಮೋಚನೆಯು ಮೇಲೆ ಹೇಳಿ ಇರುವ ಪ್ರಕಾರವೇ ಆಗತಕ್ಕದ್ದೆಂತ ಚನ್ನಾಗಿ ತಿಳಿಯುವರೋ, ಅಂಥಾವರು ಪರಮಾತ್ಮನನ್ನು ಹೊಂದುವರು.

ಈ ಪ್ರಕಾರ ಕ್ಷೇತ್ರಕ್ಷೇತ್ರಜ್ಞ ವಿಭಾಗಯೋಗವೆಂಬ ಹದಿಮೂರನೆ ಅಧ್ಯಾಯವು ಸಮಾಪ್ತವಾಯಿತು.

ಗುಣತ್ರಯ ವಿಭಾಗಯೋಗವೆಂಬ ಹದಿನಾಲ್ಕನೆ ಅಧ್ಯಾಯ ಪ್ರಾರಂಭಃ.

ಶ್ರೀ ಭಗವಾನ್ :—ಈ ಸಂಸಾರ ಬಂಧದಿಂದ ಬಿಡಲ್ಪಟ್ಟು, ಶ್ರೇಷ್ಠವಾದ ಗತಿಯನ್ನು ಎಲ್ಲಾಋಷಿಗ

ಳೂ ಯಾವಜ್ಞಾನ ಸಂಪಾದನೆಯಿಂದ ಹೊಂದಿದರೋ,
ಅಂಥಾ ಸರ್ವ ಶ್ಲಾಘ್ಯವಾದ ಜ್ಞಾನವನ್ನುತಿರಗಿ ನಿನಿಗೆ
ಉಪದೇಶಿಸುವೆನು. ಈ ಜ್ಞಾನವನ್ನು ಅನುಸರಿಸಿ ನಡೆ
ದವರು ನನ್ನಲ್ಲಿ ಐಕ್ಯವನ್ನ ಹೊಂದಿಇರುತ್ತಾರೆ! ಆದ್ದ
ರಿಂದ ಅವರು ಸೃಷ್ಟಿಕಾಲದಲ್ಲಿ ಹುಟ್ಟುವುದೂ ಇಲ್ಲ,
ಪ್ರಳಯಕಾಲದಲ್ಲಿ ನಾಶವನ್ನು ಹೊಂದುವದೂ ಇಲ್ಲ.
ಎಲೈ ಅರ್ಜುನ! ನನ್ನ ಗರ್ಭಸ್ಥಾನವು ಮಹಾ ಬ್ರಹ್ಮ
ನೆಂತಲೂ, ಅವನಲ್ಲಿ ನಾನು ಸೃಷ್ಟಿ ಕ್ರಿಯೆಯನ್ನು
ಮಾಡುತ್ತೇನೆಂತಲೂ, ಅದರಿಂದ ಸಮಸ್ತ ಪ್ರಾಣಿಗಳ
ಉತ್ಪತ್ತಿಯು ಆಗುತ್ತೆಂತಲೂ, ತಿಳಿ. ಯಾವ ಯಾವ
ಯೋನಿಗಳಲ್ಲಿ ಯಾವ ಯಾವ ಚೇತನಗಳು ಉಂಟಾ
ದರೂ, ಆ ಚೇತನಗಳಿಗೆಲ್ಲಾ ಬ್ರಹ್ಮನು ಗರ್ಭಸ್ಥಾನ
ವೆಂತಲೂ, ನಾನು ಬೀಜಪ್ರದಾನಮಾಡುವ ಪಿತಾವೆಂತ
ಲೂ, ತಿಳಿ. ಅಯ್ಯಾ ಮಹಾಬಾಹುವೇ! ಪ್ರಕೃತಿ
ಸಂಮಂಧದಿಂದುಂಟಾವ ಸತ್ವ ರಜಸ್ತಮೋಗುಣಗಳೆಂ
ಬ ಮೂರು ಗುಣಗಳೂ ಈ ದೇಹದಲ್ಲಿ ಕೂತುಕೊಂ
ಡು, ನಾಶರಹಿತನಾಗಿ ಇರುವ ಪರಮಾತ್ಮನನ್ನು ಬಂಧಿ
ಸುತ್ತವೆ. ಈ ಮೂರು ಗುಣಗಳಲ್ಲಿ, ಸತ್ವಗುಣವು
ಶುದ್ಧವಾಗಿ ಇರುವದ್ದರಿಂದ, ಎಲ್ಲಾ ವಿಷಯಗಳನ್ನೂ
ಯಥಾವತ್ತಾಗಿ ಕಾಣಿಸುವಂತೆಮಾಡಿ, ಸುಖಕರವಾ
ಗಿ ಇದ್ದುಕೊಂಡು, ಈ ಸುಖ ಸಂಮಧದಿಂದಲೂ,
ಜ್ಞಾನಸಂಮಂಧದಿಂದಲೂ, ಬಾಧಿಸುವದು. ಎಲೈ ಕುಂ

ತೀ ಪುತ್ರನಾದ ಅರ್ಜುನ ! ರಜೋಗುಣವು ಕಾ ಮಿಕ ಸ್ವಭಾವವಾಗಿಯೂ, ಅಧಿಕ ಆಸೆಗೂ, ಅಂಥಾ ಆಸೆಗೊಳಿಸುವ ಪದಾರ್ಥಗಳಲ್ಲಿ ವ್ಯಾಮೋಹವನ್ನು ಉಂಟುಮಾಡುವುದಕ್ಕೂ, ಕಾರಣವಾದದ್ದೆಂದು ತಿಳಿ. ಈ ದೇಹದಲ್ಲಿ ಕುಂತಿರುವ ಆತ್ಮನನ್ನ, ಕಾಮ್ಯ ಫಲ ಗಳನ್ನಿ ಕೊಡುವಕರ್ಮಗಳ ಸಂಮಂಧದಿಂದ, ರಜೋ ಗುಣವು ಬಾಧಿಸುತ್ತದೆ. ತಮೋಗುಣವನ್ನ ಅಜ್ಞಾನ ದಿಂದ ಉಂಟಾದ್ದೆಂತಲೂ, ಸಮಸ್ತ ಪ್ರಾಣಿಗಳನ್ನೂ ಭ್ರಾಂತಿಪಡಿಸುವಂಥಾದ್ದೆಂತಲೂ, ತಿಳಿ. ತಮೋಗು ಣವು ಆತ್ಮನನ್ನ ಅಜಾಗ್ರತೆಯಿಂದಲೂ, ಸೋಮಾರಿ ತನದಿಂದಲೂ, ನಿದ್ರೆಯಿಂದಲೂ, ಬಂಧಿಸುತ್ತದೆ. ಸ ತ್ವ. ಗುಣವು ಸುಖಾಪೇಕ್ಷೆಯನ್ನುಂಟುಮಾಡುತ್ತ ದೆ. ರಜೋಗುಣವು ಕಾಮ್ಯಕರ್ಮಗಳಲ್ಲಿ ಆಸಕ್ತಿ ಯನ್ನುಂಟುಮಾಡುವದು. ತಮೋಗುಣವು ಜ್ಞಾನವ ನ್ನು ಮರೆಮಾಡಿ, ಪ್ರಮಾದವನ್ನು ಉಂಟುಮಾಡುವ ದು. ಈ ಪ್ರಕಾರವಾಗಿ ಈ ಮೂರು ಗುಣಗಳು ಆತ್ಮನನ್ನ ಬಂಧಿಸುತ್ತವೆ. ಸತ್ವಗುಣವು ಕೆಲವು ಸ ಮಯಗಳಲ್ಲಿ ರಜೋಗುಣ ತಮೋಗುಣ ಇವೆರಡು ಗಳನ್ನು ಅತಿಕ್ರಮಿಸಿ, ಸತ್ವವೇ ಪ್ರಧಾನವಾಗುತ್ತದೆ. ಅದೇಪ್ರಕಾರ ರಜೋಗುಣವು ಸತ್ವಗುಣವನ್ನೂ ತ ಮೋಗುಣವನ್ನೂ ಹಿಂದುಹಾಕುತ್ತದೆ. ಹಾಗೆಯೆ ತಮೋಗುಣವೂ ಕೂಡ ಕೆಲವು ಕಾಲಗಳಲ್ಲಿ ಸತ್ವ

ಗುಣವನ್ನೂ ರಜೋಗುಣವನ್ನೂ ಹಿಂದಕ್ಕೆ ಹಾಕಿ, ತಮೋಗುಣವೇ ಪ್ರಧಾನವಾಗುತ್ತದೆ. ಜ್ಞಾನವು, ಯಾವ ಕಾಲದಲ್ಲಿ ಕಣ್ಣು ಕಿವಿ ಮೊದಲಾದ ಈ ದೇಹದ ಜ್ಞಾನ ದ್ವಾರಗಳಲ್ಲಿ ಪ್ರಕಾಶವನ್ನು ಹೊಂದಿ, ವಿಷಯಗಳನ್ನ ಯಥಾವತ್ತಾಗಿ ತಿಳಿಯುತ್ತದೆಯೊ, ಆ ಕಾಲದಲ್ಲಿ ಸತ್ವಗುಣವು ತಲೆ ಎತ್ತಿ ಇಧೆ ಎಂದು ಎಣಿಸಬೇಕು. ಅಧಿಕ ಆಸೆಯೂ, ಕಾರ್ಯದಲ್ಲಿ ಆಸಕ್ತಿಯೂ, ಕಾರ್ಯಾನುಭವವೂ, ಸಮಾಧಾನವಿಲ್ಲದೇ ಇರುವಿಕೆಯೂ, ಕಂಡದ್ದೆಲ್ಲಾ ನನಿಗೆ ಬೇಕೆಂಬ ಅಪೇಕ್ಷೆಯೂ, ಯಾವಕಾಲದಲ್ಲಿ ಒಂದು ಮನುಷ್ಯನಲ್ಲಿ ತಲೆ ಎತ್ತುತ್ತದೆಯೋ, ಅಗ ಅವನಲ್ಲಿ ರಜೋಗುಣವು ಪ್ರಧಾನವಾಗಿಥೆ ಎಂದು ತಿಳಿಯಬೇಕು. ಯಾವ ಕಾಲದಲ್ಲಿ ಜ್ಞಾನವಿಕಾಸವುಂಟಾಗದೆ, ಯಾವ ಕೆಲಸದಲ್ಲಿಯೂ ಬುದ್ಧಿ ಪ್ರೋಡದೆ, ಅಜಾಗ್ರತೆಯಲ್ಲಿಯೂ ಭ್ರಮೆಯಲ್ಲಿಯೂ ಮನುಷ್ಯನು ಬೀಳುವನೊ, ಆ ಕಾಲದಲ್ಲಿ ಆತನಲ್ಲಿ ತಮೋಗುಣವು ವೃದ್ಧಿ ಹೊಂದಿಥೆ ಎಂದು ತಿಳಿಯಬೇಕು. ಸತ್ವಗುಣವು ತಲೆ ಎತ್ತಿ ಇರುವ ಕಾಲದಲ್ಲಿ ಈ ಪ್ರಾಣಿಯು ಮರಣವನ್ನು ಹೊಂದಿದರೆ, ಆತ್ಮಜ್ಞಾನಿಗಳು ಹೊಂದುವಂಥಾ ಪರಿಶುದ್ಧವಾದ ಲೋಕವನ್ನು ಹೊಂದುವನು. ರಜೋಗುಣವು ತಲೆ ಎತ್ತಿ ಇರುವ ಕಾಲದಲ್ಲಿ ಮರಣವನ್ನು ಹೊಂದಿದವನು, ಕಾಮ್ಯ ಕರ್ಮಗಳನ್ನ ಮಾಡುವರ

ಕುಲದಲ್ಲಿ ಹುಟ್ಟುವನು. ಹಾಗೆಯೇ ತಮೋಗುಣವು ವೃದ್ಧಿಯನ್ನು ಹೊಂದಿರುವ ಕಾಲದಲ್ಲಿ ಮರಣವು ಪ್ರಾಪ್ತವಾದದ್ದೇ ಆದರೆ, ಮೂಢ ಜಂತುಗಳಾದ ಮೃಗಾದಿಗಳ ಕುಲದಲ್ಲಿ ಹುಟ್ಟುವನು. ಸತ್ಕಾರ್ಯಗಳಿಗೆಲ್ಲಾ ಪರಿಶುದ್ಧವಾದಂಥಾ ಸತ್ವಗುಣ ವಿಶಿಷ್ಟವಾದ ಫಲವೆಂತಲೂ, ರಜೋಗುಣಕ್ಕೆ ಸುಖವು ಸ್ವಲ್ಪವಾಗಿಯೂ ದುಃಖವು ಅಧಿಕವಾಗಿಯೂ ಇರುವ ಸಾಂಸಾರಿಕ ಫಲವೆಂತಲೂ, ತಮೋಗುಣಕ್ಕೆ ಅಜ್ಞಾನಾಂಧಕಾರಪರಂಪರೆಯೇ ಫಲವೆಂತಲೂ,ತಿಳಿದಂಥಾ ಜ್ಞಾನಿಗಳು ಹೇಳುವರು. ಸತ್ವಗುಣದಿಂದ ಶ್ರೇಷ್ಠವಾದಂಥಾ ನಿಜಜ್ಞಾನವೂ, ರಜೋಗುಣದಿಂದ ಅಧಿಕ ಆಸೆಯೂ, ತಮೋಗುಣದಿಂದ ಅಜಾಗ್ರತೆಯೂ, ಅಜ್ಞಾನವೂ, ವಿಪರೀತಜ್ಞಾನವೂ, ಉಂಟಾಗುವದು. ಸತ್ವಗುಣವನ್ನವಲಂಭಿಸಿರುವರು ಕ್ರಮೇಣ ವೃದ್ಧಿಯನ್ನು ಹೊಂದಿ,ಮೋಕ್ಷವನ್ನು ಹೊಂದುವರು. ರಜೋಗುಣಪ್ರಧಾನರು ಮಧ್ಯ ಪ್ರದೇಶವಲ್ಲಿ ಇದ್ದುಕೊಂಡು, ಸ್ವಲ್ಪ ಎಕ್ಕುತ್ತಲೂ, ಸ್ವಲ್ಪ ಇಳಿಯುತ್ತಲೂ, ಇರುವರು. ತಾಮಸಗುಣ ವಿಶಿಷ್ಟರು ನೀಚಕಾರ್ಯಗಳಲ್ಲಿ ಆಸಕ್ತರಾಗಿ ಇದ್ದುಕೊಂಡು, ಕಾಲಕ್ರಮದಲ್ಲಿ ಅತಿ ನೀಚವಾದಂಥಾ ಜನ್ಮವನ್ನ ಅವಲಂಬಿಸಿ, ಕೆಟ್ಟುಹೋಗುವರು. ಯಾವಾಗ ಜ್ಞಾನಿಯಾದವನು ಎಲ್ಲಾ ಕಾರ್ಯಗಳೂ ಸತ್ವರಜಸ್ತಮೋಗುಣಕ್ಕೆ

ತಗಳೇ ಹೊರತು ಅನ್ಯಥಾ ಅಲ್ಲವೆಂತಲೂ, ಈ ತ್ರಿಗುಣಗಳಿಗಿಂತಲೂ ಬೇರೆಯಾದವನೇ ಪರಮಾತ್ಮನೆಂತಲೂ, ತಿಳಿಯುವನೋ, ಅಂಥವನೇ ನನ್ನ ಸ್ವಭಾವವನ್ನು ಹೊಂದುವನು. ಈ ಪ್ರಕೃತಿ ಸಂಬಂಧದಿಂದ ದೇಹದಲ್ಲಿ ಉಂಟಾದ ಈ ಮೂರು ಗುಣಗಳನ್ನೂ ಅತಿಕ್ರಮಿಸಿದಂಥಾ ಪುರುಷನು ಜನನ ಮರಣ, ವಾರ್ಧಿಕ್ಯಾದಿ ದುಃಖಗಳಿಂದ ಬಿಡಲ್‌ಪಟ್ಟವನಾಗಿ ಮೋಕ್ಷವನ್ನು ಹೊಂದುವನು.

ಅರ್ಜುನ:—ಅಯ್ಯಾ ಪ್ರಭುವೆ! ಈ ಮೂರು ಗುಣಗಳನ್ನು, ಅತಿಕ್ರಮಿಸಿದಂಥಾ ಪುರುಷನನ್ನು ಯಾವಗುರುತುಗಳಿಂದ ತಿಳಿದುಕೊಳ್ಳಬಹುದು? ಅವನ ಆಚರಣೆಯು ಎಂಥಾದ್ದಾಗಿಇರುವದು ? ಅವನು ಯಾವವುಪಾಯದಿಂದ ಈ ಮೂರುಗುಣಗಳನ್ನೂ ಅತಿಕ್ರಮಿಸಿಇರುವನು?

ಶ್ರೀಭಗವಾನ್ :—ಜ್ಞಾನವೂ, ಕಾಮ್ಯಕರ್ಮಪ್ರವೃತ್ತಿಯೂ, ಮೋಹವೂ, ಈ ಜೀವನನಿಗೆ ಉಂಟಾದ ಕಾಲದಲ್ಲಿ ದ್ವೇಷವಿಲ್ಲದೆಯೂ, ಅವುಗಳು ಇವನನ್ನು ಬಿಟ್ಟುಹೋಗಿಇರುವ ಕಾಲದಲ್ಲಿ ಅವುಗಳಲ್ಲಿ ಅಪೇಕ್ಷೆ ಇಲ್ಲದೆಯೂ, ಇರುವುದೇ ಅವನಿಗೆ ಗುರುತೆಂದು ತಿಳಿಯಯ್ಯಾ ಅರ್ಜುನಾ! ಅವನು ಯಾವ ಗುಣಗಳಿಂದಲೂ ಕೊಂಚವೂಚಲಿಸದೆ, ಎಲ್ಲಾ ಗುಣಗಳವಿಷಯದಲ್ಲಿಯೂ ತಟಸ್ಥನಾಗಿ, ಆಯಾಗುಣಗಳು ಅವುಗಳಿಗೆ

ಅನುರೂಪವಾದ ಕಾರ್ಯಗಳಲ್ಲಿ ಪ್ರವರ್ತಿಸುತ್ತದೆ, ಎಂದು ದೃಢವಾದ ಜ್ಞಾನದಿಂದ, ಉದಾಸೀನಭಾವವನ್ನು ಹೊಂದಿಇರುವನು. ಅವನ ಆಚರಣೆಯು ಇಂಥಾದ್ದೆಂದು ತಿಳಿಯತಕ್ಕದ್ದು. ಇದೂ ಅಲ್ಲದೆ ಅಂಥವನಿಗೆ ಸುಖಪ್ರಾಪ್ತಿಯಾದರೂ, ದುಃಖಪ್ರಾಪ್ತಿಯಾದರೂ ಕೊಂಚವೂ ಚಲಿಸದೆ, ತನಗೆ ಪರಮಾತ್ಮನಲ್ಲಿ ಒಂದೇ ಮಾದ್ರಿಯಾಗಿರುವ ಪ್ರೀತಿಯಿಂದ ತನ್ನಲ್ಲಿಯೇ ತಾನು ನೆಮ್ಮದಿಯಾಗಿರುವನು. ಮಣ್ಣು ಹೆಂಟೆಯಲ್ಲಿಯೂ, ಕಲ್ಲಿನಲ್ಲಿಯೂ, ಭಂಗಾರದಲ್ಲಿಯೂ, ತಾರತಮ್ಯಜ್ಞಾನವನ್ನಿಡದೆ, ಒಂದೇಸಮನಾಗಿ ಭಾವಿಸುವನು. ತನಗೆ ಹಿತವಾದ್ದು ಪ್ರಾಪ್ತವಾದರೂ, ಅಹಿತವಾದ್ದು ಸಂಭವಿಸಿದ್ಧರೂ, ಅವುಗಳಿಗೆ ಚಲಿಸದೆ, ಆವೆರಡನ್ನೂ ಒಂದೇಸಮನಾಗಿ ಭಾವಿಸುವನು. ಎಲ್ಲಾ ಅವಸ್ಥೆಯಲ್ಲಿಯೂ, ಅಂಥವನು ಧೈರ್ಯವನ್ನು ಅವಲಂಬಿಸೇ ಇರುವನು. ಯಾರಾದರೂ ಅವನನ್ನು ದೂಷಿಸಿದರೂ, ಅವನನ್ನು ಕೊಂಡಾಡಿದರೂ, ಅದರಲ್ಲಿ ಒಂದು ವ್ಯತ್ಯಾಸವನ್ನು ಎಣಿಸದೆ, ಸಮಬುದ್ಧಿಯಿಂದ ಇರುವನು. ಇಂಥವನಿಗೆ ಯಾರು ಮರ್ಯಾದೆ ಮಾಡಿದರೂ, ಯಾರು ಅವಮಾನಪಡಿಸಿದರೂ, ಎರಡಕ್ಕೂ ಉದಾಸೀನನಾಗಿಯು, ಇರುವನು. ಮಿತ್ರಪಕ್ಷದಲ್ಲಿಯೂ ಶತ್ರುಪಕ್ಷದಲ್ಲಿಯೂ ಒಂದೇಸಮವಾಗಿರುವನು., ಮತ್ತು ಯಾವ ಫಲೋದ್ದಿಷ್ಟವಾದ ಕಾರ್ಯವನ್ನು ಮಾಡಲೂ

ಅವನು ಯತ್ನಿಸುವದಿಲ್ಲ. ಕೇವಲ ಕುಟುಂಬ ಭರಣಕ್ಕಾಗಿ ಎಷ್ಟ ಅವಶ್ಯಕವೊ ಅಷ್ಟುಮಟ್ಟಗೇನೇ ಕಾರ್ಯಗಳಲ್ಲಿ ಆಸಕ್ತನಾಗುವನೆಂದು ತಾತ್ಪರ್ಯವು. ಇಂಥಾವನೇ ಸತ್ವರಜಸ್ತಮೋಗುಣಗಳಿಂವ ಅತಿಕ್ರಮಿಸಿದವನೆಂದು ಹೇಳಲ್ಪಡುವನು. ದೇವತಾಂತರಗಳಲ್ಲಿ ಯಾವನಾವರೆ ಭಕ್ತಿಯನ್ನು ಮಾಡದೆ,ನನ್ನನ್ನೇ ಪೂರ್ಣವಿಶ್ವಾಸದಿಂದ ಆರಾಧಿಸುವನೋ, ಅಂಥವನೇ ಈ ಮೂರುಗುಣಗಳನ್ನೂ ಅತಿಕ್ರಮಿಸಿ, ಬ್ರಹ್ಮಸ್ವರೂಪವನ್ನು ಹೊಂದುವನು. ಇದೇ ತ್ರಿಗುಣಗಳನ್ನು ಅತಿಕ್ರಮಿಸುವ ವುಪಾಯವು. ಸ್ವರೂಪಭೇದವನ್ನೂ ನಾಶವನ್ನೂಹೊಂದದ ಪರಮಾತ್ಮನಿಗೂ ಶಾಶ್ವತವಾದಂಥಾ ಧರ್ಮಗಳಿಗೂ ನಾನೇ ವಾಸಸ್ಥಾನವಾಗಿರುವದ್ದರಿಂದಲೂ, ಏಕಾಂತಸುಖವಾದ ಮೋಕ್ಷಕ್ಕೂ ನಾನೇ ಕಾರಣ ಭೂತನಾಗಿರುವುದ್ದರಿಂದಲೂ, ತ್ರಿಗುಣಾತೀತನು ಬ್ರಹ್ಮ ಸ್ವರೂಪವನ್ನು ಹೊಂದುವನೆಂದು ಮೇಲೆ ಹೇಳಿದ್ದಕ್ಕೆಸಂದೇಹವೇ ಇಲ್ಲ.

ಇತಿ ಗುಣತ್ರಯ ವಿಭಾಗಯೋಗವೆಂಬ ಹದಿನಾಲ್ಕನೇ ಅಧ್ಯಾಯವು ಸಮಾಪ್ತವಾಯಿತು.

ಪುರುಷೋತ್ತಮ ಯೋಗವೆಂಬ ಹದಿನೈದನೇ ಅಧ್ಯಾಯ ಪ್ರಾರಂಭಃ.

ಶ್ರೀಭಗವಾನ್:—ಈ ಅಶ್ವತ್ಥವೆಂಬ ಸಂಸಾರ

ವೃಕ್ಷವನ್ನು ಮೇಲೆ, ಅಂದರೆ, ಬ್ರಹ್ಮನಲ್ಲಿ ಬೇರನ್ನುಳ್ಳದ್ದಾಗಿಯೂ, ಕೆಳಗೆ, ಅಂದರೆ, ನಮ್ಮಗಳಲ್ಲೆಲ್ಲಾ ರೆಂಬೆಗಳನ್ನುಳ್ಳದ್ದಾಗಿಯೂ, ಎಂದಿಗೂ ನಾಶಹೊಂದದ್ದಾಗಿಯೂ, ಛಂದೋಬದ್ಧವಾದ ವೇದಗಳಲ್ಲಿ ಎಲೆಗಳನ್ನುಳ್ಳದ್ದಾಗಿಯೂ, ಹೇಳುವರು. ಈ ತತ್ವವನ್ನು ತಿಳಿದಂಥವನೇ ವೇದವನ್ನೆಲ್ಲಾ ಅರಿತವನು. ಈ ಅಶ್ವತ್ಥವೃಕ್ಷದ ರೆಂಬೆಗಳು ಕೆಳಗೆಯೂ ಮೇಲೆಯೂ, ಅಂದರೆ ಭೂಲೋಕದಲ್ಲಿಯೂ, ದೇವಲೋಕದಲ್ಲಿಯೂ, ಹರಡಿಕೊಂಡು ಇವೆ. ಈ ವೃಕ್ಷವು ತ್ರಿಗುಣಗಳಿಂದಲೇ ವೃದ್ಧಿಯನ್ನು ಹೊಂದತಕ್ಕದ್ದು. ವಿಷಯಗಳನ್ನೇ ಬೇರುಗಳನ್ನಾಗಿಯೂ, ವುಳ್ಳದ್ದು. ಮೇಲೂ ರೆಂಬೆಗೆ, ಕೆಳಗೆಮೂಲಾಧಾರವಾದದ್ದು ಮನುಷ್ಯಲೋಕದಲ್ಲಿ ನಮ್ಮಿಂದ ಮಾಡಲ್ಪಡುವ ಪುಣ್ಯ ಪಾಪ ಕರ್ಮಗಳೆಂದೇತಿಳಿಯಬೇಕು. ಈ ಸಂಸಾರವೃಕ್ಷವು ಈ ಮೇಲೆ ಹೇಳಿರುವ ಸ್ವರೂಪವುಳ್ಳದ್ದೆಂದು ಈಲೋಕದ ಜನರು ಸಾಧಾರಣವಾಗಿ ತಿಳಿಯುವುದಿಲ್ಲ. ಹಾಗೆಯೇ ಇದರ ಆದಿಕಾರಣವೇನು, ಅಂತ್ಯವು ಹ್ಯಾಗೆ, ಈಗ ಇರುವಂಥಾದ್ದು ಯಾವರೀತಿಯಾದ್ದು, ಎಂಬುದೊಂದನ್ನೂ ಈ ಜನರು ಅರಿಯರು. ಈ ಮೇರೆಗೆ ಚನ್ನಾಗಿ ಬೇರುಬಿಟ್ಟುಕೊಂಡಿರುವ ಈ ಸಂಸಾರವೆಂಬ ಅಶ್ವತ್ಥವೃಕ್ಷವನ್ನು, ಸತ್ವರಜಸ್ತಮೋಗುಣಗಳ ಸಮಂಥವನ್ನು ಬಿ

ಡುವುದೆಂಬಖಡ್ಗದಿಂದ ಚನ್ನಾಗಿ ಕತ್ತರಿಸಿ, ಅನಂತರ, ವೈರಾಗ್ಯದಿಂದಲೇ, ಯಾವಸ್ಥಾನವನ್ನು ಹೊಂದಿದ ತರುವಾಯ ಹಿಂತಿರುಗಿ ಬರುವದಿಲ್ಲವೋ, ಅಂಥಾಸ್ಥಾನವನ್ನು ಹುಡುಕಬೇಕು. ಯಾವಮೂಲಪುರುಷನಿಂದ ಈ ಸಂಸಾರವೃಕ್ಷವು ಬಹುಕಾಲದಿಂದ ವಿಸ್ತಾರವನ್ನು ಹೊಂದಿತೋ, ಅಂಥಾ ಆದಿಪುರುಷನನ್ನು ರಕ್ಷಕನನ್ನಾಗಿ ಹೊಂದತಕ್ಕದ್ದು. ಆ ಶಾಶ್ವತವಾದಂಥಾ ಸ್ಥಾನವನ್ನು ಯಾರು ಹೊಂದುತ್ತಾರೆಂದರೆ,ಅಹಂಕಾರದಿಂದಲೂ, ಅಜ್ಞಾನದಿಂದಲೂ, ಬಿಡಲ್ಪಟ್ಟವರಾಗಿಯೂ, ಯಾವದನ್ನೂ ಅಂಟಿಸಿಕೊಳ್ಳದವರಾಗಿಯೂ, ಆತ್ಮೈಕಪರರಾಗಿಯೂ, ಫಲಾಪೇಕ್ಷೆ ಇಲ್ಲದವರಾಗಿಯೂ,ಸುಖದುಃಖವೆಂದುಕರೆಯಲ್ಪಡುವಂಥಾ ಎರಡು ಭಾವನೆಗಳಿಂದ ಬಿಡಲ್ ಪಟ್ಟವರಾಗಿಯೂ,ಇರುವ ಮಹಾತ್ಮರುಗಳು ಹೊಂದತ್ತಾರೆಂದು ತಿಳಿಯಬೇಕು. ಯಾವಸ್ಥಾನವನ್ನು ಹೊಂದಿದನಂತರ ಪುನಃ ಈ ಭೂಲೋಕದಲ್ಲಿ ಜನಿಸುವದಿಲ್ಲವೋ, ಅಂಥಾಸ್ಥಾನವನ್ನು ಸೂರ್ಯನೂ, ಚಂದ್ರನೂ, ಅಗ್ನಿಯೂ, ಯಾರೂಪ್ರಕಾಶ ಪಡಿಸಲಾರರು. ಆ ಸ್ಥಾನವನ್ನು ನನ್ನ ತೇಜಸ್ಸ್ವರೂಪವಾದದ್ದೆಂದು ತಿಳಿ. ನನ್ನ ಪರಮಾತ್ಮಾಂಶವೆ ಈ ಜೀವರೂಪವಲ್ಲಿ ಪ್ರಕೃತಿಸಮಂಧ ಪಟ್ಟಂಥಾ ದೇಹದಲ್ಲಿ, ಜೀವಭೂತಗಳಾಗಿ ಇದ್ದುಕೊಂಡು, ಪಾಂಚಭೂತಿಕವಾದ ದೇಹಗಳಲ್ಲಿ ಇರುವ ಪಂಚೇಂ

ದ್ರಿಯಗಳನ್ನೂ ಮನಸ್ಸನ್ನೂ ಎಳೆಯುತ್ತದೆ. ಘಾಳಿ ಯುಗಂಧವನ್ನು ಯಾವರೀತಿಯಾಗಿ ತೆಗದುಕೊಂಡು ಹೋಗುತ್ತದೆಯೋ, ಅದೇಮೇರೆಗೆ ಈ ನನ್ನ ಪರಮಾತ್ಮಾಂಶವೂಕೂಡಯಾವಶರೀರವನ್ನುಹೊಕ್ಕರೂ, ಯಾವಶರೀರವನ್ನು ಬಿಟ್ಟುಹೋದರೂ, ಆ ಪಂಚೇಂದ್ರಿಯಗಳನ್ನೂ, ಮನಸ್ಸನ್ನೂ, ಕರ್ಮಾನುಸಾರವಾಗಿ ಎಳದುಕೊಂಡು ಹೋಗುತ್ತದೆ.ಈ ಪಂಚೇಂದ್ರಿಯಗಳು ಯಾವವೆಂದರೆ:- ಕಿವಿ, ಕಣ್ಣು,ತ್ವಕ್ಕು,ನಾಲಗೆ, ಮೂಗು.ಈ ಪಂಚೇಂದ್ರಿಯಗಳಿಗೂ,ಮೇಲಾದ ಮನಸ್ಸನ್ನೂ ಕೂಡವಶಮಾಡಿಕೊಂಡು,ಸಮಸ್ತ ವಿಷಯಗಳನ್ನೂ ನನ್ನಪರಮಾತ್ಮಾಂಶವೇ ಅನುಭವಿಸುತ್ತದೆ.ಸತ್ವರಜಸ್ತಮೋಗುಣಗಳಿಂದ ಕೂಡಿಕೊಂಡು ವಿಷಯಾನುಭವವನ್ನು ಮಾಡುವಂಥವನೆಂದೇಆಗಲಿ, ಸಮಸ್ತದೇಹಗಳಲ್ಲಿಯೂಕೂತಿರುವಂಥವನೆಂದೇಆಗಲಿ, ಆ ದೇಹಗಳನ್ನುಬಿಟ್ಟುಹೋಗುತ್ತಿರುವಂಥವನೆಂದೇ ಆಗಲಿ,ಅಜ್ಞಾನಿಗಳು ನನ್ನನ್ನು ಅರಿಯರು.ಆದರೆಪರಮಾತ್ಮಜ್ಞಾನಿಗಳು ಅವರುಗಳ ಜ್ಞಾನದೃಷ್ಟಿಯಿಂದ ಹೀಗೆಲ್ಲಾ ಇರುವಂಥಾ ನನ್ನನ್ನು ತಿಳಿದುಕೊಳ್ಳುವರು. ಯೋಗಾಭ್ಯಾಸದಲ್ಲಿ ನಿಷ್ಠರಾದ ಯೋಗಿಗಳು ತಮ್ಮಲ್ಲಿಯೇ ಪರಮಾತ್ಮನು ವಾಸಮಾಡಿಕೊಂಡು ಇಥಾನೆಂದು ತಿಳಿಯುವರು. ಯೋಗಾನಿಷ್ಟರಾಗಿದ್ದರೂ ಕೂಡ ಮನಃ ಪರಿಪಕ್ವವನ್ನ ಹೊಂದದ ಅಜ್ಞಾನಿಗಳು.

ಈ ಪ್ರಕಾರವಾಗಿರುವ ನನ್ನನ್ನು ತಿಳಿದುಕೊಳ್ಳಲಾ ರರು. ಜಗತ್ತನ್ನೆಲ್ಲಾ ಪ್ರಕಾಶಪಡಿಸುವಂಥಾ ಸೂ ರ್ಯನಲ್ಲಿ ಇರುವ ತೇಜಸ್ಸೂ; ಚಂದ್ರನಲ್ಲಿಯೂ, ಅಗ್ನಿ ಯಲ್ಲಿಯೂ, ಇರುವಕಾಂತಿಯೂ ; ಸಮಸ್ತವೂ ನ ನ್ನಿಂದಲೇ ಉಂಟಾದದ್ದೆಂದುತಿಳಿ. ಭೂಮಿಯನ್ನು ವ್ಯಾಪಿಸಿಕೊಂಡು ನಾನೇ ನನ್ನ ಪರಾಕ್ರಮದಿಂದಲೇ ಎಲ್ಲಾ ಪ್ರಾಣಿಗಳನ್ನೂ ಕಾಪಾಡುತ್ತೇನೆ. ತಣ್ಣಗಿರು ವ ಕಿರಣಗಳುಳ್ಳಂಥಾ ಚಂದ್ರನಾಗಿಯೂ, ನಾನೇ ಎ ಲ್ಲಾ ಹಸುರುಗಳನ್ನೂವೃದ್ಧಿಪಡಿಸುತ್ತೇನೆ. ನಾನೇ ಸ ಮಸ್ತ ಜೀವಕೋಟಿಗಳ ದೇಹಗಳಲ್ಲಿಯೂ ಜಠರಾ ಗ್ನಿಯಾಗಿದ್ದುಕೊಂಡು,ನಾಲ್ಕುವಿಧವಾದಅನ್ನವನ್ನೂ, ಅಂದರೆ, ಕಡಿದು ತಿನ್ನತಕ್ಕದ್ದನ್ನೂ,ಕಡಿಯದೇ ತಿನ್ನತ ಕ್ಕದ್ದನ್ನೂ,ನುಂಗತಕ್ಕದ್ದನ್ನೂ,ಕುಡಿಯತಕ್ಕದ್ದನ್ನೂ, ಪ್ರಾಣಾಪಾನಗಳೇ ಮೊದಲಾದ ವಾಯುಗಳೊಡನೆ ಕೂಡಿದವನಾಗಿ ಜೀರ್ಣಮಾಡುತ್ತೇನೆ. ನಾನು ಸ ಮಸ್ತಪ್ರಾಣಿಗಳ ಹೃದಯ ಗುಹೆಯಲ್ಲಿಯೂ ಕೂತು ಕೊಂಡಿರುವೆನು. ನನ್ನಿಂದಲೇ ಜ್ಞಾಪಕವೂ, ಜ್ಞಾ ನವೂ, ಅರಿಯುವಿಕೆಯೂ, ವುಂಟಾಗುತ್ತದೆ. ಸಮ ಸ್ತವಾದ ವೇದಗಳಿಂದ ತಿಳಿದುಕೊಳ್ಳತಕ್ಕಂಥಾ ವೇದ ವಿತ್‌ಎಂಬುವನೂನಾನೆ. ಈ ಪ್ರಪಂಚದಲ್ಲಿ ಎರಡು ಬಗೆಯಾದ ಪುರುಷರು ಇರುವರು. ಅವರಿಗೆ ಕ್ಷರ ವೆಂತಲೂ ಅಕ್ಷರವೆಂತಲೂ, ಹೆಸರು. ಸಮಸ್ತ

ಪ್ರಾಣಿಗಳೂನಾಶಹೊಂದತಕ್ಕಂಥಕ್ಷರವೆನ್ನಿಸಿಕೊಳ್ಳುವರು. ಈ ಪ್ರಾಣಿಕೂಟಗಳಲ್ಲಿ ನೆಟ್ಟಿರುವ ಮತ್ತು ಗೂಟದಂತೆ ಕೂತಿರುವ ಮಾಯಾಪುರುಷನು, ನಾಶರಹಿತವಾದ ಅಕ್ಷರವೆಂತಲೂ, ಹೇಳಲ್ಪಡುವನು.

ಇವೆರಡುಗಳಿಗೂ ಬೇರೆಯಾದ ಪರಮ ಶ್ರೇಷ್ಠವಾದ ಪುರುಷನು ಪರಮಾತ್ಮನೆಂದು ಹೇಳಲ್ಪಡುವನು. ಈ ಮಹಾ ಸ್ವಾಮಿಯಾದಂಥಾ ಈಶ್ವರನು ಮೂರು ಲೋಕಗಳನ್ನೂ ಪ್ರವೇಶಿಸಿ ಕಾಪಾಡಿಕೊಂಡು ಬರುತ್ತಾನೆ. ಯಾವಕಾರಣದಿಂದ ನಾನು ನಾಶಹೊಂದತಕ್ಕವನಲ್ಲವೊ,ನಾಶರಹಿತವಾದಮಾಯೆಗಿಂತಲೂಶ್ರೇಷ್ಠನಾದವನೋ, ಅದರಿಂದಲೇ ಈ ಪ್ರಪಂಚದಲ್ಲಿಯೂ, ವೇದಗಳಲ್ಲಿಯೂ, ಪುರುಷೋತ್ತಮನೆಂದೇ ಪ್ರಸಿದ್ಧಿಯನ್ನುಹೊಂದಿರುವೆನು. ಎಲೈ ಅರ್ಜುನ ! ಯಾವನಾದರೆನನ್ನನ್ನಕ್ಷರನಲ್ಲವೆಂತಲೂ,ಅಕ್ಷರನಾದಮಾಯೆ ಗಿಂತಲೂ ಶ್ರೇಷ್ಠನಾದವನೆಂತಲೂ,ಸಾಕ್ಷಾತ್ ಪುರುಷೋತ್ತಮನೆಂತಲೂ, ಮೌಢ್ಯವಿಲ್ಲದೆ ಜ್ಞಾನದಿಂದ ತಿಳಿಯುವನೊ,ಅಂಥವನೇಸಮಸ್ತವನ್ನೂತಿಳಿದವನೂಅಲ್ಲದೆನನ್ನನ್ನು ಸಮಸ್ತಪ್ರಕಾರವಾಗಿಯೂಈಮೇಲೆವಿವರಿಸಿರುವಪ್ರಕಾರವಾಗಿಯೂಆರಾಧಿಸುವನು. ಪರಮ ರಹಸ್ಯವಾದಂಥಾ ಶಾಸ್ತ್ರವು ಸಾಕ್ಷಾತ್ ಪರಮಪುರುಷನಾದನನ್ನಿಂದಲೇ ಇಂಥಾಜ್ಞಾನೋಪದೇಶಕ್ಕೆ ಯೋಗ್ಯನಾಗಿಯೂ,ಪಾಪರಹಿತನಾಗಿಯೂ,ಇರುವನಿಗೆಉಪದೇಶಿಸ

ಲ್ಪಟ್ಟಿತು ಇದನ್ನೆಲ್ಲಾ ಚನ್ನಾಗಿ ತಿಳಿದುಕೊಂಡರೆ ಬುದ್ಧಿವಂತನೂ, ಕೃತಕೃತ್ಯನೂ, ಆಗಬಹುದಯ್ಯಾ ಅರ್ಜುನಾ!

ಈ ಪ್ರಕಾರವಾಗಿ ಪುರುಷೋತ್ತಮ ಯೋಗವೆಂಬ ಹದಿನೈದನೇ ಅಧ್ಯಾಯವು ಸಮಾಪ್ತವಾಯಿತು.

ದೇವಾಸುರ ಸಂಪದ್ವಿಭಾಗ ಯೋಗವೆಂಬ ಹದಿನಾರನೆ ಅಧ್ಯಾಯ ಪ್ರಾರಂಭ.

ಶ್ರೀಭಗವಾನ್ :—ಅಯ್ಯಾ ಅರ್ಜುನನೆ! ದೇವತೆಗಳ ಸಂಪತ್ತನ್ನು ಅನುಭವಿಸತಕ್ಕವನು ಎಂಥಾ ಗುಣಗಳನ್ನು ಉಳ್ಳವನಾಗಿ ಇರುವವನೆಂದರೆ :- ಅವನು ಭಯವಿಲ್ಲದೆಯೂ, ಪರಿಶುದ್ಧಾತ್ಮನಾಗಿಯೂ, ನಿಶ್ಚಲವಾದ ಜ್ಞಾನವುಳ್ಳವನಾಗಿಯೂ, ಯೋಗದಲ್ಲಿ ನಿಷ್ಠೆಯುಳ್ಳವನಾಗಿಯೂ, ಧಾರಾಳವಾದ ಮನಸ್ಸುಳ್ಳವನಾಗಿಯೂ, ಇರುವನು. ಮನೋನಿಗ್ರಹವನ್ನುಳ್ಳವನಾಗಿಯೂ ಇರುವನು. ಯಜ್ಞಗಳಲ್ಲಿಯೂ, ವೇದಾಧ್ಯಯನಗಳಲ್ಲಿಯೂ, ವ್ರತಾಚರಣೆಗಳಲ್ಲಿಯೂ, ನಿರತನಾಗಿರುವನು. ಮನಸ್ಸಿನಲ್ಲಿಯೂ, ವಾಕ್ಕಿನಲ್ಲಿಯೂ, ಕಾರ್ಯದಲ್ಲಿಯೂ, ಒಂದೇವಿಧವಾಗಿ ಇರುವನು. ಯಾರಿಗೂ ವಂದು ತೊಂದರೆಯನ್ನೂ ಮಾಡನು, ಯಾವಾಗಲೂ ನಿಜವನ್ನೇ ಹೇಳುವನು. ಎಂದಿಗೂ ಕೋಪವಿಲ್ಲದೇ ಇರುವನು. ಸಮಸ್ತ ಅಭಿಮಾನಗಳನ್ನೂ ಬಿಟ್ಟು ಮನಸ್ಸಮಾಧಾನ ವುಳ್ಳವನಾಗಿಯೂ, ಚಾಡೀ ಮಾತುಗಳನ್ನು ಹೇಳದವನಾಗಿಯೂ, ಇರುವನು ಸ

ಮಸ್ತ ಪ್ರಾಣಿಗಳ ವಿಷಯದಲ್ಲಿಯೂ ಪರಿತಾಪವುಳ್ಳವನಾಗಿಯೂ, ಯಾವದರಲ್ಲಿಯೂಚಾಪಲ್ಯವಿಲ್ಲದೆಯೂ, ಮೃದು ಮನಸ್ಕನಾಗಿಯೂ, ಇರುವನು. ತಪ್ಪು ಕೆಲಸಮಾಡಲು ಲಜ್ಜೆಪಡುವಂಥಾವನಾಗಿಯೂ, ಚಿತ್ತದಲ್ಲಿ ಚಾಪಲ್ಯವಿಲ್ಲದಯೂ, ಪರಾ ಕ್ರಮಶಾಲಿಯಾಗಿಯೂ, ಇರುವನು. ಎಲ್ಲವನ್ನೂ ಸಹಿಸಿಕೊಳ್ಳುವಂಥಾ ಗುಣವನ್ನು ಉಳ್ಳವನಾಗಿಯೂ, ಧೈರ್ಯವನ್ನುಅವಲಂಬಿಸಿ ಇರುವನಾಗಿಯೂ, ಅಂತಃಶುದ್ಧಿಯನ್ನೂ, ಬಾಹ್ಯಶುದ್ಧಿಯನ್ನೂ, ವುಳ್ಳವನಾಗಿಯೂ, ಯಾರಿಗೂಕೇಡನ್ನ ಎಣಿಸದೆಯೂ, ಮತ್ತೂ ಎಂದಿಗೂ ಅಹಂಕಾರಪಡೆದೆಯೂ, ಇರುವನು. ಅಸುರ ಸಂಪತ್ತಿಗೆ ಅರ್ಹರಾದವರಿಗೆ ಇರತಕ್ಕಗುಣಗಳು ಯಾವವಂದರೆ :- ಡಾಂಭಿಕವೂ, ಅಹಂಕಾರವೂ, ವಿಷಯ ವ್ಯಾಮೋಹವೂ, ಕೋಪವೂ, ಕಠಿಣೋಕ್ತಿಯೂ, ಮತ್ತೂ ಮೌಢ್ಯವೂ. ದೈವಸಂಪತ್ತಿಗೆಅರ್ಹವಾದಗುಣಗಳು ಮೋಕ್ಷವನ್ನು ಕೊಡುವುದಕ್ಕೆ ಅರ್ಹವಾದವುಗಳು. ಹಾಗಿಲ್ಲದ ಅಸುರಸಂಪತ್ತು ಸಂಸಾರವೆಂಬ ಶರೆಯಲ್ಲಿ ಮನುಷ್ಯರನ್ನು ಹಾಕಲು ಸಮರ್ಥವಾದಂಥಾದ್ದು.

ಅಯ್ಯಾ ಅರ್ಜುನ ! ಈ ಮೇಲೆ ಹೇಳಿದ ಎರಡು ವಿಧವಾದ ಗುಣಗಳಲ್ಲಿ ನೀನು ಯಾವಥಕ್ಕೆ ಸೇರಿದವನೋ ಎಂದು ಭಯಪಡಕೆಲಸವಿಲ್ಲ. ಯಾಕಂದರೆ,

ನೀನು ದೈವಸಂಪತ್ತನ್ನು ಹೊಂದಲು ತಕ್ಕ ಗುಣಗಳನ್ನುಂಟಾಗಿರುವಿ. ಈ ಭೂಲೋಕದಲ್ಲಿ ಸಮಸ್ತ ಸೃಷ್ಟಿಯೂ ದೇವಾರ್ಹವೆಂತಲೂ, ರಾಕ್ಷಸಾರ್ಹವೆಂತಲೂ, ಎರಡು ಬಗೆಯಾಗಿ ಇರುವದು. ದೇವಾರ್ಹವಾದದ್ದನ್ನೆಲ್ಲಾ ಹಿಂದೆ ವಿಸ್ತಾರವಾಗಿಹೇಳಿಧೆ. ಆದ್ದರಿಂದ ಪ್ರಕೃತದಲ್ಲಿ ರಾಕ್ಷಸಾರ್ಹವಾದ ಸೃಷ್ಟಿಯ ವಿಚಾರವನ್ನು ವಿಸ್ತರಿಸಿ ಹೇಳುವೆನು, ಕೇಳು. ಅಸುರಸಂಪತ್ತುಳ್ಳವರು ಯಾವ ಕೆಲಸದಲ್ಲಿ ಪ್ರವರ್ತಿಸಬೇಕೊ, ಮತ್ತೂ ಯಾವ ಕೆಲಸದಿಂದ ನಿವರ್ತಿಸಬೇಕೊ, ಯಾವದನ್ನೂ ತಿಳಿದವರಲ್ಲ. ಅವರಲ್ಲಿ ಮನಶ್ಶುದ್ಧಿಯೂ ದೇಹಶುದ್ಧಿಯೂ ಇರುವುದಿಲ್ಲ. ಅವರಿಗೆ ಯಾವ ಕ್ರಮಾಚರಣೆಯೂ ಇಲ್ಲ. ಇದಕ್ಕೆ ತಕ್ಕಹಾಗೆಯೆ ಸತ್ಯವೆಂಬುವದು ಅವರಲ್ಲಿ ಇಲ್ಲವೇಇಲ್ಲ. ಅವರು ಜಗತ್ತನ್ನೇ ಸುಳ್ಳೆಂತಲೂ, ಆಧಾರವಿಲ್ಲದ್ದೆಂತಲೂ, ನಾಥನಿಲ್ಲದ್ದೆಂತಲೂ, ಹೇಳುವರು. ಕಾಮಾತುರರಾದ ಸ್ತ್ರೀಪುರುಷರಸಂಯೋಗದಿಂದ ಈ ಜಗತ್ತುವುಂಟಾದದ್ದೆ ಹೊರತು ಬೇರೇವಿಧವಾಗಿ ವುಂಟಾದದ್ದಲ್ಲವೆಂತಲೂ ಅವರು ಹೇಳುವರು. ಈ ಪ್ರಕಾರವಾದಂಥಾ ಬುದ್ಧಿಯನ್ನು ಅವರು ಅವಲಂಬಿಸಿ, ಪರಮಾತ್ಮಜ್ಞಾನವಿಲ್ಲದವರಾಗಿಯೂ, ವಿವೇಕ ವಿಲ್ಲದವರಾಗಿಯೂ, ಪ್ರಪಂಚಕ್ಕೆ ಹಾನಿಕರವಾಗಿಯೂ, ಅಮಂಗಳಕರವಾಗಿಯೂ, ಇರುವ ಕಾರ್ಯಗಳನ್ನು ಮಾ

ಡಲು ಉದ್ಯುಕ್ತರಾಗಿರುತ್ತಾರೆ. ಇಂಥಾ ಪ್ರಜೆಗಳು ತೃಪ್ತಿಯನ್ನು ಹೊಂದಲು ಅಶಕ್ಯವಾದಂಥಾ ಆಶೆಗಳಲ್ಲಿ ಮನಸ್ಸಿಟ್ಟು, ಅತಿ ಜಂಭದಿಂದಲೂ, ಅಹಂಕಾರದಿಂದಲೂ, ಮದದಿಂದಲೂ, ಕೂಡಿದವರಾಗಿ, ಅಜ್ಞಾನವಶಾತ್ ಸನ್ಮಾರ್ಗವಲ್ಲದ್ದನ್ನೆಲ್ಲಾ ಅಂವಲಬಿಸಿ, ತದನುಗಣವಾದಂಥಾ ಅಶಾಸ್ತ್ರೀಯವಾದ ವ್ರತಗಳನ್ನಾಚರಿಸುವವರಲ್ಲಿ ಉದ್ಯುಕ್ತರಾಗುವರು. ಅಳವಿಲ್ಲದ್ದಾಗಿಯೂ, ದೀರ್ಘಕಾಲದಲ್ಲಿ ಸಾಧಿಸತಕ್ಕದ್ದಾಗಿಯೂ, ಇರುವ ವಿಷಯಗಳಲ್ಲಿ ಆಸಕ್ತರಾಗಿ, ವಿಷಯಾನುಭವವನ್ನೇ ಮಾಡುವದರಲ್ಲಿ ಆಸಕ್ತರಾಗಿ ಇದ್ದುಕೊಂಡು, ಅದಕ್ಕೆ ಮೇಲಾದದ್ದು ಇಲ್ಲವೆಂಬ ಬುದ್ಧಿಯಿಂದಲೂ, ಇರುವರು. ಅನೇಕ ವಿಧಗಳಾದ ಆಶೆಗಳೆಂಬ ಕಟ್ಟುಗಳಿಂದ ಕಟ್ಟಲ್ಪಟ್ಟವರಾಗಿ, ಕಾಮಕ್ರೋಧಗಳಲ್ಲಿ ಅತ್ಯಾಸಕ್ತರಾಗಿ, ಸ್ವೇಛ್ಛಾವಿಹಾರಕ್ಕಾಗಿ, ನ್ಯಾಯಾನ್ಯಾಯ ಪರಾಮರಿಶೆಮಾಡದೆ, ದ್ರವ್ಯ ಸಂಪಾದನೆ ಮಾಡುವುದರಲ್ಲಿ ಆಸಕ್ತರಾಗುತ್ತಾರೆ. ಇದನ್ನ ಈಗ ನಾನು ಸಂಪಾದಿಸಿದೆನು. ನಾಳೆ ಅದನ್ನ ನಾನುಸಂಪಾದಿಸುವೆನು. ಇದು ಈಗ ನನಿಗೆ ಇರುವದ್ರವ್ಯವು. ನಾಳೆಇನ್ನೂ ಅನೇಕವು ನನ್ನದಾಗುತ್ತದೆ. ಈ ಶತ್ರುವನ್ನು ನಾನು ಹತಮಾಡಿದೆನು. ಇನ್ನೂ ಅನೇಕರನ್ನ ಹೀಗೆಯೆ ,ನನ್ನ ಸಾಮರ್ಥ್ಯದಿಂದಲೆ ನಾನುಧ್ವಂಸಮಾಡುವೆನು. ನಾನು

ಯಜಮಾನನು. ಎಲ್ಲಾ ಸುಖಾನುಭವವೂ ನನ್ನದು. ಸಮ
ಸ್ತ ಕಾರ್ಯಸಿದ್ಧಿಯನ್ನು ಹೊಂದಿದವನೂ ನಾನೆ. ಶಕ್ತಿ
ವಂತನೂ ನಾನೆ. ಸುಖಪುರುಷನೂ ನಾನೆ. ಅಧಿಕ ಹಣ
ವಂತನೂ ನಾನೆ. ಒಳ್ಳೆ ಕಾಲದಲ್ಲಿ ಹುಟ್ಟಿದವನೂ ನಾನೆ.
ನನಿಗೆ ಸಮಾನನಾದವನು ಯಾವನು ಇದ್ದಾನೆ ? ಯಾಗ
ವನ್ನು ಮಾಡುವನೂ ನಾನೆ, ಕರ್ಣತ್ಯಾಗವನ್ನು ಮಾ
ಡುವನೂ ನಾನೆ, ಸಂತೋಷ ಭರಿತನಾದವನೂ ನಾನೆ,
ಎಂಬದಾಗಿ ಅಜ್ಞಾನದಿಂದ ಭ್ರಮೆಗೊಂಡು, ಅನೇಕವಿ
ಧವಾದ ಬುದ್ಧಿ ಭ್ರಮೆಯನ್ನುಳ್ಳವರಾಗಿ, ಅಜ್ಞಾನವೆಂಬ
ಬಲೆಯಲ್ಲಿ ಸಿಕ್ಕಿಕೊಂಡು, ತುಚ್ಛ ವಿಷಯಾನುಭವಗಳ
ಲ್ಲಿ ಆಸಕ್ತಿವುಳ್ಳವರಾಗಿ, ಘಾಪಿಷ್ಠವಾದ ನರಕದಲ್ಲಿ ಬೀ
ಳುವರು. ತಮ್ಮನ್ನು ತಾವೇ ಕೊಂಡಾಡಿಕೊಂಡು, ಪೂ
ರ್ಣಕಾಮರಂತೆಯೂ, ಕೃತಕೃತ್ಯರಂತೆಯೂ, ತಟಸ್ಥ
ರಾಗಿದ್ದುಕೊಂಡು, ಧನದಿಂದಲೂ ಅಹಂಕಾರದಿಂದ
ಲೂ ಕೊಬ್ಬಿದವರಾಗಿ, ಸೋಮಯಾಜಿಗಳೆಂಬ ಹೆಸ
ರನ್ನು ಮಾತ್ರ ಪಡೆಯುವ ಪ್ರಸಿದ್ಧಿಶ್ಯವಾಗಿ, ಶಾಸ್ತ್ರ
ಸಮ್ಮತವಾದ ಕ್ರಮವನ್ನಂಗೀಕರಿಸದೆ, ಹೆಸರಿಗೆ
ಮಾತ್ರ ಯಜ್ಞವೆನ್ನಲ್ಪಡುವ ಕರ್ಮವನ್ನ ಅತಿ
ಡಾಂಭಿಕದೊಡನೆ ಈ ಅಸುರ ಪ್ರಕೃತಿಯನ್ನು
ಳ್ಳವರು ಮಾಡುವರು. ಅಹಂಕಾರ ವೇನು, ತನ್ನ ಬಾ
ಹುಬಲವೇನು, ಕೊಬ್ಬೇನು, ದುರಾಶೆಯೇನು, ಕೋ
ಪವೇನು, ಇವುಗಳನ್ನೆಲ್ಲಾ ಚನ್ನಾಗಿ ಆಶ್ರಯಿಸಿಕೊಂ
ಡು ಪರಮಾತ್ಮನಾಗಿಯೂ ತನ್ನ ದೇಹದಲ್ಲಿಯೂ,

ಯಿತರರ ದೇಹಗಳಲ್ಲಿಯೂ ಕೂತಿರುವನನ್ನನ್ನು ಕುರಿತು ಅಸೂಯೆಪಡುತ್ತಾ, ನನ್ನನ್ನು ದ್ವೇಷಿಸುಸುವರು. ಹೀಗೆ ನನ್ನಲ್ಲಿ ದ್ವೇಷವನ್ನು ಮಾಡುವಂಥಾ ಅತಿಕ್ರೂರವಾದ ಪಾಪಿಷ್ಠ ಜನಗಳನ್ನು, ಎಂದಿಗೂ ಅಮಂಗಳಕರವಾದಂಥಾ ರಾಕ್ಷಸ ಯೋನಿಗಳಲ್ಲಿ ಹುಟ್ಟುತ್ತಲೂ ಸಾಯುತ್ತಲೂ, ತಿರಿಗಿ ಹುಟ್ಟುತ್ತಲೂ ಸಾಯುತ್ತಲೂ ಇರುವಂಥಾ ಕಷ್ಟವಾದ ಸಂಸಾರದಲ್ಲಿ ತಳ್ಳುವೆನು. ಈ ಅಸುರಯೋನಿಯನ್ನು ಹೊಂದಿ, ಈ ಮೂಢಾತ್ಮರುಗಳು ಪ್ರತಿಜನ್ಮದಲ್ಲಿಯೂ ನನ್ನನ್ನು ಹೊಂದದೇನೆ, ಹಿಂದಿನ ಜನ್ಮಕ್ಕಿಂತಲೂ ಕೇಡಾದ ಜನ್ಮವನ್ನೆ ಎತ್ತಿ, ಅಧೋಗತಿಯನ್ನ ಹೊಂದುವರು. ಆತ್ಮನಾಶಕರವಾದಂಥಾ ಈ ಅಸುವರ ಪ್ರಕೃತಿ ಎಂಬ, ನರಕಕ್ಕೆ ಮೂರು ವಿಧವಾದ ಮಾರ್ಗಗಳುಂಟು. ಅವು ಯಾವವೆಂದರೆ:—ವಿಷಯ ಚಾಪಲ್ಯವು, ಕೋಪವು, ಮತ್ತೂ ಲುಬ್ಧಸ್ವಭಾವವು. ಹೀಗಿರುವದ್ದರಿಂದ ಈ ಮೂರು ದುರ್ಗುಣಗಳನ್ನೂ ಬಿಡತಕ್ಕದ್ದು.

ಅಯ್ಯಾ ಅರ್ಜುನ:—ಯಾವನಾದರೆ ನಾಶಕರವಾದಂಥಾ ಈ ಮೂರು ದುರ್ಗುಣಗಳಿಂದಲೂ ಬಿಡಲ್ಪಡುತ್ತಾನೊ, ಅಂಥವನೆ ತನಗೆ ಶ್ರೇಯಸ್ಕರವಾದ ಕಾರ್ಯಗಳನ್ನು ಮಾಡಿ, ಕಡೆಗೆ ಶ್ರೇಷ್ಠವಾದಂಥಾ ಗತಿಯನ್ನು ಹೊಂದುವನು. ಹೀಗೆಮಾಡದೆ, ಯಾವನು ಶಾಸ್ತ್ರದಲ್ಲಿ ವಿಧಿಸಿರುವ ವಿಧಿಯನ್ನು ಬಿಟ್ಟು ಬಿ

ಟ್ಟು, ತನಗೆ ಮನಸ್ಸು ಬಂದಂತೆ ನಡೆಯುವನೋ, ಅಂಥವನು ಯೆಂದಿಗೂ ಕಾರ್ಯಸಿದ್ಧಿಯನ್ನೂ ಹೊಂದಲಾರನು, ಸುಖವನ್ನೂ ಹೊಂದಲಾರನು, ಶ್ರೇಷ್ಠವಾದ ಗತಿಯಂತು ಅವನಿಗೆ ಇಲ್ಲನೇ ಇಲ್ಲವಷ್ಟೆ. ಆದ್ದರಿಂದ ನೀನು ಮಾಡತಕ್ಕ ಕಾರ್ಯಗಳು ಯಾವವು, ಮಾಡದೇ ಬಿಡತಕ್ಕಂಥಾ ಕಾರ್ಯಗಳು ಯಾವವು, ಎಂಬುವ ವಿಚಾರದಲ್ಲಿ ವೇದಶಾಸ್ತ್ರವನ್ನೇ ನೀನು ಪ್ರಮಾಣವನ್ನಾಗಿ ಅಂಗೀಕರಿಸಬೇಕು. ಹೀಗೆ ನೀನು ಶಾಸ್ತ್ರಗಳಿಂದ ಕೃತ್ಯಾಕೃತ್ಯ ವಿವೇಚನೆಯನ್ನು ಮಾಡಿ, ಮಾಡತಕ್ಕದ್ದನ್ನೆಲ್ಲಾ ಕ್ರಮವಾಗಿ ಈ ಭೂಲೋಕದಲ್ಲಿ ಮಾಡಲೇಬೇಕು.

ಹೀಗೆ ದೈವಾಸುರ ಸಂಪತ್‌ವಿಭಾಗ ಯೋಗವೆಂಬ
ಹದಿನಾರನೇ ಅಧ್ಯಾಯ ಸಮಾಪ್ತಃ.

ಶ್ರದ್ಧಾತ್ರಯ ವಿಭಾಗಯೋಗವೆಂಬ
ಹದಿನೇಳನೇ ಅಧ್ಯಾಯ ಪ್ರಾರಂಭಃ.

ಅರ್ಜುನ:—ಅಯ್ಯಾ ಶ್ರೀ ಕೃಷ್ಣ! ಯಾರಾದರೆ ಶಾಸ್ತ್ರದಲ್ಲಿ ವಿಧಿಸಿರುವ ನಿಬಂಧನೆಗಳನ್ನು ಅನುಸರಿಸದೆ, ಕರ್ಮದಲ್ಲಿ ಅಕ್ಕರೆಯನ್ನು ಮಾತ್ರವುಳ್ಳವರಾಗಿ, ಯಾಗಾದಿ ಕರ್ಮಗಳನ್ನು ಮಾಡುವರೋ, ಅಂಥವರ ಕರ್ಮನಿಷ್ಠೆಯು ಸಾತ್ವಿಕವಾಗಿರುವದೊ, ರಾಜಸವಾಗಿರುವದೊ, ಅಥವ ತಾಮಸವಾಗಿರುವದೊ, ತಿಳಿಯಲಪೇಕ್ಷಿಸುತ್ತೇನೆ.

ಶ್ರೀಭಗವಾನ್:—ಅಯ್ಯಾ ಅರ್ಜುನ! ಅದನ್ನ ವಿವರಿಸುವೆನುಕೇಳು. ಈ ಕರ್ಮಶ್ರದ್ಧೆಎಂಬುವದು ಮೂರು ವಿಧವಾಗಿರುವದು. ಇದು ಎಲ್ಲಾ ಪ್ರಾಣಿಗಳಿಗೂ ಸ್ವಾಭಾವಿಕವಾಗಿ ಹುಟ್ಟುತ್ತಲೇ ಬರುವುದು. ಇವುಗಳಿಗೆ ಸಾತ್ವೀಕವೆಂತಲೂ ರಾಜಸವೆಂತಲೂ ತಾಮಸವೆಂತಲೂ ಹೆಸರುಂಟು. ಪ್ರತಿ ಒಬ್ಬನಿಗೂ ಅವನವನ ಶ್ರದ್ಧೆಯು ಅವನವನ ಶುದ್ಧಿಅಥವಾ ಪ್ರಕೃತಿ ಇದ್ದಂತೆ ಇರುವದು. ಎಲ್ಲಾ ಮನುಷ್ಯರೂ ಅವರಸ್ವಭಾವದಂತೆಯೇ, ಶ್ರದ್ಧಾಬದ್ಧರಾಗಿರುವವರು. ಯಾರಯಾರ ಶ್ರದ್ಧೆಯು ಎಂಥೆಂಥಾದ್ದಾಗಿರುವದೋ ಅವರವರ ಶ್ರದ್ಧೆಯು ಅಂಥಂಥಾದ್ದೆಂದು ತಿಳಿದುಕೊಳ್ಳಬೇಕು. ಸಾತ್ವೀಕರು ಶ್ರೇಷ್ಠವಾದ ದೇವತೆಗಳನ್ನಾರಾಧಿಸುವರು. ರಾಜಸರು ಅವರ ಗುಣಾನುಸಾರವಾದ ರಾಜಸ ಶ್ರದ್ಧೆಯೊಡನೆ ಯಕ್ಷರನ್ನೂ ರಾಕ್ಷಸರನ್ನೂ ಆರಾಧಿಸುವರು. ಹೀಗೂ ಇಲ್ಲದೆಶುದ್ಧ ತಾಮಸ ಸ್ವಭಾವವುಳ್ಳವರು ಕೇವಲ ಭೂತಪ್ರೇತ ಪಿಶಾಚಿಗಳನ್ನ ಆರಾಧಿಸುವರು. ಇಂಥಾವರ ಶ್ರದ್ಧೆಯು ತಾಮಸ ಶ್ರದ್ಧೆ ಎಂದು ತಿಳಿಯತಕ್ಕದ್ದು. ಯಾರಾದರೆ ಅಶಾಸ್ತ್ರೀಯವಾಗಿಯೂ ಅತ್ಯುಗ್ರವಾಗಿಯೂ ಇರುವ ತಪಸ್ಸನ್ನು, ಅಹಂಕಾರದೊಡನೆಯೂ, ಡಾಂಭಿಕ ಸ್ವಭಾವದೊಡನೆಯೂ, ಕಾಮಿಕರಾಗಿಯೂ, ವಿಷಯಾನುಭವಚಾಪಲ್ಯ

ವುಳ್ಳವರಾಗಿಯೂ ಆಚರಿಸುವರೊ, ಅಂಥವರು ಆ ಶರೀರ ಸಂಮಂಧವಾದಪಂಚಭೂತಗಳನ್ನು ಅಧಿಕವಾಗಿ ಕ್ಲೇಶಪಡಿಸುವದರಿಂದಲೂ, ಅವರಲ್ಲಿ ಅಂತರ್ಯಾಮಿಯಾಗಿ ಕೂತಿರುವನನ್ನು ಅಧಿಕವಾಗಿ ಶ್ರಮಪಡಿಸುವುದರಿಂದಲೂ, ಶುದ್ಧವಾಗಿ ಜ್ಞಾನವಿಲ್ಲದ ಅಂಥಾ ಜನರನ್ನು ಅಸುರ ಸ್ವಭಾವವನ್ನುಳ್ಳವನೆಂದು ತಿಳಿ. ಸಮಸ್ತ ಜನಗಳ ಆಹಾರವೂ ಕೂಡ ಮೂರು ವಿಧವಾದ್ದಾಗಿಯೂ, ಅವರವರ ಗುಣಾನುರೂಪವಾಗಿ ರುಚಿವುಳ್ಳದ್ದಾಗಿಯೂ,ಇದೆ. ಇದೇ ಮೇರೆಗೇನೆ ಆಯಾ ಗುಣವಿಶಿಷ್ಟರಾದ ಜನಗಳು ಮಾಡುವ ಯಜ್ಞಗಳೂ, ತಪಸ್ಸೂ,ದಾನವೂ,ಮೂರುವಿಧವಾದ್ದಾಗಿ ಇರುವದೆಂದುತಿಳಿದುಕೊಳ್ಳತಕ್ಕದ್ದು.ಮನುಷ್ಯನುಪ್ರಾಣವುನ್ನೂ, ಮನೋಧೈರ್ಯವನ್ನೂ, ಭುಜಬಲವನ್ನೂ,ದೇಹಾರೋಗ್ಯವನ್ನೂ, ಸ್ವಸ್ಥಚಿತ್ತತೆಯನ್ನೂ, ದೇಹಸೌಖ್ಯವನ್ನೂ, ನೈಜವಾದ ಪ್ರೇಮವನ್ನೂ, ವೃದ್ಧಿಮಾಡುವಂಥಾ ರಸಭರಿತವಾಗಿಯೂ, ಸಾರಭೂತವಾಗಿಯೂ, ಪುಷ್ಟಿಕರವಾಗಿಯೂ, ಮನೋಜ್ಞವಾಗಿಯೂ,ಇರುವ ಆಹಾರಗಳು, ಸಾತ್ವಿಕ ಗುಣವಿಶಿಷ್ಟರಾದವರಿಗೆ ಪ್ರೀತಿಕರವಾದದ್ದೆಂದು ತಿಳಿ.ಹೀಗಿಲ್ಲದೆ ಬಾಯಲ್ಲಿ ಹಾಕಲಾಗದಷ್ಟು ಖೈಯಾಗಿಯೂ,ಹುಳಿಯಾಗಿಯೂ, ಉಪ್ಪಾಗಿಯೂ ಅಧಿಕಬಿಸಿಯಾಗಿಯೂ,ಅಧಿಕತಣ್ಣಗಿರುವಂಥಾದ್ದಾಗಿಯೂ, ದೇಹವನ್ನ ಒಣಗಿಸುವಂಥಾದ್ದಾ

ಗಿಯೂ,ಸಹಿಸಕೂಡದವಂಥಾ ಖಾರವುಳ್ಳದ್ದಾಗಿಯೂ,ಇರುವಂಥಾದುಃಖವನ್ನೂ,ಹಿಂಸೆಯನ್ನೂ,ವ್ಯಾಧಿಯನ್ನೂ ಉಂಟುಮಾಡುವಂಥಾಆಹಾರಗಳು ರಾಜಸಸ್ವಭಾವವನ್ನುಳ್ಳವರಿಗೆ ಪ್ರಿಯವಾದದ್ದೆಂದು ತಿಳಿಯತಕ್ಕದ್ದು.ಹೀಗೂಅಲ್ಲದೆಅಧಿಕವಾಗಿಆರಿ ಹೋದದ್ದಾಗಿಯೂ,ಸಾರ ಹೋದಿದ್ದಾಗಿಯೂ, ದುರ್ಗಂಧವುಳ್ಳದ್ದಾಗಿಯೂ, ಹಳಸಿಹೋದಿದ್ದಾಗಿಯೂ, ಎಂಜಲು ಮಾಡಿಮಿಕ್ಕದ್ದಾಗಿಯೂ, ಬುದ್ಧಿಯನ್ನು ಕೆಡಿಸುವಂಥಾದಾಗಿಯೂ, ಇರುವ ಆಹಾರವು, ತಾಮಸ ಸ್ವಭಾವವುಳ್ಳವರಿಗೆ ಇಷ್ಟವಾಗಿ ಇರುವುದೆಂದು ತಿಳಿಯತಕ್ಕದ್ದು. ಯಾವನಾದರೆ ಫಲಾಪೇಕ್ಷೆಯನ್ನು ಬಿಟ್ಟು, ಶಾಸ್ತ್ರದಲ್ಲಿ ವಿಧಿಸಿರುವ ಪ್ರಕಾರವಾಗಿ ಯಾಗವನ್ನು ಮಾಡತಕ್ಕದ್ದು ತನಗೆ ಸಹಜವಾದ ಧರ್ಮವೆಂದು ತಿಳಿದು, ಯಾಗವನ್ನು ಮಾಡುವನೋ ಅಂಥವನ ಯಾಗವು ಸಾತ್ವೀಕಯಾಗವೆನಿಸಿಕೊಳ್ಳುವದು. ಹಾಗಿಲ್ಲದೆ ಯಾವನಾದರೆ ಫಲಾಪೇಕ್ಷೆಯುಳ್ಳವನಾಗಿಯೂ ಡಾಂಭಿಕಸ್ವಭಾವದೊಡನೆಯೂ, ಯಾಗವನ್ನು ಮಾಡುವನೊ, ಅಂಥಾವನ ಯಾಗವು ರಾಜಸಗುಣ ವಿಶಿಷ್ಟವಾದದ್ದೆಂದು ತಿಳಿಯತಕ್ಕದ್ದು. ಹೀಗೂ ಅಲ್ಲದೆ ಶಾಸ್ತ್ರೋಕ್ತವಾದ ಕ್ರಮವನ್ನು ಬಿಟ್ಟು ಬ್ರಾಹ್ಮಣ ಭೋಜನದಿಂದ ತೃಪ್ತಿಮಾಡಿಸದೆಯೂ, ವೇದಮಂತ್ರವನ್ನ ಕ್ರಮವಾಗಿ ವುಚ್ಚರಿಸದೆಯೂ, ಭೂರಿದಕ್ಷಿಣೆಯನ್ನ ಕೊಡದೆಯೂ,

ಮಾಡಿದ ಯಾಗವು ತಾಮಸ ಸ್ವಭಾವವುಳ್ಳದ್ದೆಂದು ಹೇಳಲ್ಪಡುವದು. ಮೇಲೆ ಹೇಳಿದ ಪ್ರಕಾರ ತಪಸ್ಸೂ ಕೂಡ ಮೂರು ವಿಧವಾದದ್ದು. ಅದರಲ್ಲಿಯೂ ಆ ತಪಸ್ಸು ಕಾಯಕ ತಪಸ್ಸೆಂತಲೂ, ವಾಚಕತಪಸ್ಸೆಂತಲೂ, ಮಾನಸಿಕ ತಪಸ್ಸೆಂತಲೂ, ಮೊದಲು ವಿಭಾಗ ಮಾಡಿ, ನಂತರ ಅವುಗಳಲ್ಲಿ ಸಾತ್ವಿಕ ರಾಜಸ ತಾಮಸಸ್ವಭಾವ ವುಳ್ಳವುಗಳೆಂದು ಹೇಳಲ್ಪಡುತ್ತದೆ. ಭಗವದಾರಾಧನ, ಬ್ರಾಹ್ಮಣ ಪೂಜೆ, ಆಚಾರ್ಯರ ಶಿಶ್ರೂಷೆ, ಜ್ಞಾನಿಗಳ ಪುಪುಚಾರ, ದೇಹ ಶುದ್ಧಿ, ಮನೋವಾಕ್ ಕಾಯದಲ್ಲಿ ಒಂದೇ ವಿಧವಾಗಿಯೂ ಇರುವನಡತೆ, ಸ್ತ್ರೀಲೋಲನಾಗದೆಇರುವಿಕೆ, ಪ್ರಾಣಿಗಳನ್ನು ಹಿಂಸಿಸದೆ ಇರವ ಸ್ವಭಾವ, ಇವೆಲ್ಲಾ ಶರೀರಸಂಮಂಧವಾದ ತಪಸ್ಸೆಂದು ಹೇಳಲ್ ಪಡುತ್ತವೆ. ಇತರರಮನಸ್ಸನ್ನು ವ್ಯಥೆಪಡಿಸದಂಥಾ,ವಾಕ್ಯವೂ ಸುಳ್ಳಲ್ಲದ ನಿಜವಾದ ಮಾತೂ, ಕೇಳುವುದಕ್ಕೆ ಪ್ರಿಯವಾಗಿಯೂ ಆತ್ಮಹಿತವಾಗಿಯೂ ಇರುವ ವಾಕ್ಯವೂ, ವೇದಾಧ್ಯಯನವೂ, ವಾಚಕಸಂಮಂಧವಾದ ತಪಸ್ಸೆಂದುಹೇಳಲ್ಪಡುತ್ತದೆ. ಆದರೆ ಎಲ್ಲರಿಗೂಹಿತಕರವಾದ ಮನಸ್ಸೂ, ಶಾಂತಿಗುಣವೂ, ಅಧಿಕ ಪ್ರಸಂಗಕ್ಕೆ ಅವಕಾಶವನ್ನು ಕೊಡದ ಮೌನಸ್ವಭಾವವೂ,ತನ್ನನ್ನುತಾನೆ ನಿಗ್ರಹಿಸಿಕೊಳ್ಳುವಿಕೆಯೂ,ಮನಶ್ಶುದ್ಧಿಯೂ, ಇವೇ ಮೊದಲಾದುವುಗಳು ಮನಸ್ಸಂಬಂಧವಾದ ತಪಸ್ಸುಗ

ಳೆಂದು ಹೇಳಲ್ಪಡುತ್ತವೆ. ಇವುಗಳಲ್ಲಿ ಯಾವತಪ ಸ್ಸೇ ಆಗಲಿ ಅಧಿಕಅಕ್ಕರೆಯಿಂದಲೂ,ಫಲಾಪೇಕ್ಷೆ ಇಲ್ಲ ದೆಯೂ, ಸ್ವಾಭಾವಿಕಧರ್ಮವೆಂಬ ಜ್ಞಾನದಿಂದಲೂ, ಮಾಡಲ್ಪಡುತ್ತದೆಯೊ ಅಂಥಾ ಕಾಯಕ ವಾಚಕ ಮಾನಸಿಕತಪಸ್ಸು,ಸಾತ್ವಿಕ ಲಕ್ಷಣವುಳ್ಳ ತಪಸ್ಸೆಂದು ಹೇಳಲ್ಪಡುತ್ತದೆ. ಹೀಗಿಲ್ಲದೆ ಯಾವ ತಪಸ್ಸಾದರೆ ಇತರರಿಂದ ಆದರಿಸಲ್ಪಡುವುದಕ್ಕೂ, ಗೌರವಿಸಲ್ಪಡು ವುದಕ್ಕೂ, ಪೂಜಿಸಲ್ಪಡುವುದಕ್ಕೂ, ಡಂಭಾರ್ಥವಾಗಿ ಯೂ, ಮಾಡಲ್ಪಡುತ್ತದೆಯೊ, ಆ ತಪಸ್ಸು ರಾಜಸ ಲಕ್ಷಣವುಳ್ಳದ್ದೆಂತಲೂ, ಅಸ್ಥಿರವಾದದ್ದೆಂತಲೂ, ನಾಶ ಹೊಂದತಕ್ಕದ್ದೆಂತಲೂ, ಹೇಳಲ್ಪಡುತ್ತದೆ. ಹೀಗೂ ಅ ಲ್ಲದೆ,ಮುಟ್ಠಾಳರ ಮಾತುಗಳನ್ನು ಕೇಳಿಕೊಂಡೇ ಆ ಗಲಿ,ಮನಸ್ಸಂಕಟಗಳನ್ನೂ,ದೇಹಲಂಪಟವನ್ನೂ,ಅಧಿ ಕವಾಗಿ ಉಂಟುಮಾಡತಕ್ಕದ್ದೇ ಆಗಲಿ, ಇತರ ಪ್ರಾ ಣಿಗಳ ಪೀಡನ್ನು ಉದ್ದೇಶಿಸಿ ಯತ್ನಿಸುವ ಕಾಯಕ ವಾಚಕ ಮಾನಸಿಕ ರೂಪವಾದ ತಪಸ್ಸೇ ಆಗಲಿ, ಇ ವುಗಳೆಲ್ಲಾ ತಾಮಸ ಲಕ್ಷಣವುಳ್ಳ ತಪಸ್ಸೆಂದು ಹೇಳಲ್ಪ ಡುತ್ತೆ. ಈ ಪ್ರಕಾರವೇ ಯಾವದಾನವೂ, ದಾನಕೊ ಡುವುದೇ ಮನುಷ್ಯನಿಗೆ ಸ್ವಭಾವವೆಂಬುದಾಗಿಯೂ, ಉಪಕಾರಕ್ಕೆ ಪ್ರತ್ಯುಪಕಾರವಲ್ಲದೆಯೂ, ಸತ್ ಪಾ ತ್ರನಿಗೆ ಸತ್ಕಾಲದಲ್ಲಿ ತಕ್ಕ ಸ್ಥಳದಲ್ಲಿ ಕೊಡಲ್ಪಡುತ್ತ ದೆಯೋ,ಅಂಥಾದಾನವೇ ಸಾತ್ವೀಕಲಕ್ಷಣವುಳ್ಳ ದಾನ

ವೆಂದು ಹೇಳಲ್ಪಡುತ್ತದೆ. ಹಾಗಲ್ಲದೆ, ಯಾವದಾನ ವಾದರೆ ಉಪಕಾರಕ್ಕೆ ಪ್ರತ್ಯುಪಕಾರವಾಗಿಯೇ ಆ ಗಲಿ, ಫಲಾಪೇಕ್ಷೆಯಿಂದಲೇ ಆಗಲಿ, ಇಷ್ಟವಿಲ್ಲದೆ ಯೇ ಆಗಲಿ, ಕೊಡಲ್ಪಡುತ್ತದೆಯೊ, ಆ ದಾನವು ರಾ ಜಸಗುಣವಿಶಿಷ್ಟವಾದದ್ದೆಂದು ಹೇಳಲ್ಪಡುತ್ತದೆ. ಹಾ ಗೂ ಅಲ್ಲದೆ, ಯಾವದಾನವು ಸತ್ಪಾತ್ರನಲ್ಲದವನಿಗೇ ನೇ ಆಗಲಿ, ಅಕಾಲದಲ್ಲಿಯೇ ಆಗಲಿ, ಸ್ಥಳಾಸ್ಥಳ ವಿ ವೇಚನೆಯಿಲ್ಲದೆಯೇ ಆಗಲಿ, ಮರ್‍ಯಾದಾ ಪುರಸ್ಸರವಾ ಗದೆಯೇ ಆಗಲಿ,ಅಲಕ್ಷ್ಯದಿಂದಲೇ ಆಗಲಿ,ಕೊಡಲ್ಪಡು ತ್ತದೆಯೊ, ಅಂಥಾ ದಾನವು ತಾಮಸ ಲಕ್ಷಣದೊಡನೆ ಕೂಡಿದ್ದೆಂದು ತಿಳಿದುಕೊಳ್ಳತಕ್ಕದ್ದು. 'ಓಂ' ಎಂಬು ವದೂ, 'ತತ್' ಎಂಬುವದೂ, 'ಸತ್' ಎಂಬುವದೂ, ಈ ಮೂರೂ ಬ್ರಹ್ಮನ ಮೂರು ಹೆಸರಾಗಿ ಹೇಳಲ್ಪ ಟ್ಟಿಧೆ. ಈ ಮೂರು ನಾಮಗಳಲ್ಲಿ 'ಓಂ' ಎಂಬುವನಾ ಮದಿಂದ ಬ್ರಾಹ್ಮಣರೂ,ವೇದಗಳೂ, ಯಜ್ಞಗಳೂ, ಪೂರ್ವದಿಂದಲೆ ಏರ್ಪಡಿಸಲ್ಪಟ್ಟವು. ಆದ್ದರಿಂದ 'ಓಂ' ಎಂಬುವ ಪದವನ್ನು ಆರಂಭದಲ್ಲಿ ಹೇಳಿಕೊಂಡು, ಯಜ್ಞವೇನು, ದಾನವೇನು,ತಪಸ್ಸೇನು,ಇವುಗಳೆಲ್ಲಾ ಯಥಾಕ್ರಮವಾಗಿ ಬ್ರಹ್ಮವಾದಿಗಳಿಂದ ಮಾಡಲ್ಪಡು ತ್ತವೆ. ಹಾಗಿಲ್ಲದೆ ಮೋಕ್ಷಕಾಮಿಗಳಾದವರು ಫಲಾ ಪೇಕ್ಷೆ ಇಲ್ಲದೆ ಮಾಡುವ ಯಜ್ಞವೇನು, ದಾನವೇನು, ತಪಸ್ಸೇನು, ಇವೇ ಮೊದಲಾದ ಕಾರ್‍ಯಗಳನ್ನೆಲ್ಲ

ವನ್ನೂ 'ತತ್' ಎಂಬುವ ಶಬ್ದವನ್ನೆ ಮೊದಲು ಹೇಳಿ ಕೊಂಡು ಮಾಡುವರು. ಆದರೆ 'ಸತ್' ಎಂಬುವ ಶಬ್ದವು ಇಥೆ ಎಂಬುವ ಅರ್ಥದಲ್ಲಿಯೂ, ಒಳ್ಳೇದೆಂ ಬುವ ಅರ್ಥದಲ್ಲಿಯೂ, ಪ್ರಯೋಗಿಸಲ್ಪಡುತ್ತದೆ. ಅ ದೇ ಪ್ರಕಾರವೆ ಶ್ರೇಷ್ಠವಾದ ಕರ್ಮ ದೊಡನೆಯೂ ಕೂಡ 'ಸತ್' ಎಂಬುವ ಪದವು ಆರಂಭದಲ್ಲಿಯೇ ಸೇ ರಿಸಲ್ಪಡುತ್ತದೆ. ಯಜ್ಞಾಚರಣೆಯಲ್ಲಿಯೂ, ವ್ರತಾ ಚರಣೆಯಲ್ಲಿಯೂ, ದಾನಕ್ರಿಯೆಯಲ್ಲಿಯೂ, ಇರುವಿ ಕೆಯೇ 'ಸತ್' ಸ್ತಿತಿಯೆಂದು ಹೇಳಲ್ಪಡುತ್ತದೆ. ಆದ್ದ ರಿಂದ ಇವುಗಳಿಗೆ ಸಂಮುಂಧಪಟ್ಟ ಕರ್ಮಗಳೆಲ್ಲಾ ಸತ್ ಕರ್ಮವೆಂದೇ ಹೇಳಲ್ಪಡುತ್ತದೆ. ಹೀಗಿಲ್ಲದೆ ಅಕ್ಕರೆ ಇಲ್ಲದೆಮಾಡಿದ ಯಾಗವೇ ಆಗಲಿ,ಕೊಟ್ಟದಾನವೇ ಆ ಗಲಿ, ಆಚರಿಸಿದ ವ್ರತವೇ ಆಗಲಿ, ಇನ್ಯಾವ ಕಾ ರ್ಯ ಮಾಡಿದಾಗ್ಯೂ, ಅಯ್ಯಾ ಅರ್ಜುನ ! ಅದೆಲ್ಲಾ 'ಅಸತ್'ಅಂದರೆ'ಸತ್'ಅಲ್ಲದ್ದೆಂದು ಹೇಳಲ್ಪಡುತ್ತದೆ. ಅಂಥಾ ಕ್ರಿಯೆಗಳು ಈ ಭೂಲೋಕದಲ್ಲಿಯೂ ಸಾ ರ್ಥಕವಾದವಲ್ಲ ; ಈ ಲೋಕವನ್ನ ಬಿಟ್ಟು ಹೋದ ತರುವಾಯ ಮೋಕ್ಷಕ್ಕೂ ಕೊಂಚವೂ ಸಾಧಕವಾ ದವಲ್ಲಾ.

ಇತಿ ಶ್ರದ್ಧಾತ್ರಯ ವಿಭಾಗಯೋಗವೆಂಬ
ಹದಿನೇಳನೇ ಅಧ್ಯಾಯ ಸಂಪೂರ್ಣ.

ಸನ್ಯಾಸಯೋಗವೆಂಬ
ಹದಿನೆಂಟನೇ ಅಧ್ಯಾಯ ಪ್ರಾರಂಭ.

ಅರ್ಜುನ:—ಅಯ್ಯಾ ಮಹಾ ಪರಾಕ್ರಮಶಾಲಿ
ಯಾದಂಥಾ ಶ್ರೀಕೃಷ್ಣಾ! ಸನ್ಯಾಸವೆಂಬ ಪದಕ್ಕೂ,
ತ್ಯಾಗವೆಂಬ ಪದಕ್ಕೂ, ಬೇರೆ ಬೇರೆಯಾಗಿ ನಿಶ್ಚಯ
ವಾದ ವೇದಾಂತಾರ್ಥವನ್ನು ತಿಳಿದುಕೊಳ್ಳಲು ಅಪೇ
ಕ್ಷಿಸುತ್ತೇನೆ.

ಶ್ರೀಭಗವಾನ್:—ಫಲಾಪೇಕ್ಷೆಯಿಂದ ಮಾಡತ
ಕ್ಕಕರ್ಮಗಳನ್ನೆಲ್ಲಾ ಬಿಟ್ಟುಬಿಡುವದೇಸನ್ಯಾಸವೆಂದುಕೆ
ಲವರುಹೇಳುವರು. ಮತ್ತು ಕೆಲವರು ಸಮಸ್ತಪ್ರಕಾ
ರವಾದ ಕರ್ಮಗಳ ಫಲಾಪೇಕ್ಷೆಯನ್ನೂ ಬಿಟ್ಟು, ಸಕಲ
ಕರ್ಮವನ್ನೂ ಮಾಡುವುದೇತ್ಯಾಗವೆನ್ನುವರು. ಇತ
ರರುಕರ್ಮವನ್ನೇ ದೋಷಯುಕ್ತವಾದದ್ದೆಂದುತಿಳಿದು,
ಸಕಲಕರ್ಮವನ್ನೂಬಿಟ್ಟುಬಿಡಬೇಕೆಂದು ಹೇಳುವರು.
ಅನ್ಯರು ಯಜ್ಞದಾನಾದಿ ಕರ್ಮವನ್ನು ಬಿಡತಕ್ಕ
ದ್ದಲ್ಲವೆಂದು ಹೇಳುವರು. ಹೀಗಿರುವದ್ದರಿಂದ, ಎಲೈ
ಭರತ ಶ್ರೇಷ್ಠನೆ! ತ್ಯಾಗ ಶಬ್ದದ ನಿಶ್ಚಯವಾದ ಅ
ರ್ಥವನ್ನು ನಾನು ಹೇಳುವೆನು ಕೇಳು. ತ್ಯಾಗವು
ಮೂರು ವಿಧವಾದದ್ದೆಂದು ಹೇಳಲ್ಪಟ್ಟಿಧೆ. ಯಜ್ಞ
ದಾನಾದಿ ಕರ್ಮಗಳು ಎಂದಿಗೂ ಬಿಡತಕ್ಕದ್ದಲ್ಲವು.
ಆ ಕರ್ಮಗಳನ್ನೆಲ್ಲಾ ಮಾಡಿಯೇ ತೀರಬೇಕು. ಅ
ವೆಲ್ಲವೂ ಮನುಷ್ಯನ ಜ್ಞಾನಗಳನ್ನೆಲ್ಲವನ್ನೂ ಪರಿಶು

ದ್ಧಮಾಡತಕ್ಕವುಗಳು. ಸ್ವಭಾವವಾಗಿ ಫಲಾಪೇಕ್ಷೆ ಕರ್ತೃತ್ವಾಹಂಕಾರಗಳಿಂದ ಕೂಡಿದ ಕರ್ಮಗಳು,ಮನುಷ್ಯನನ್ನ ನಿರ್ಬಂಧದಲ್ಲಿ ಹಾಕುವುಗಳಾದಾಗ್ಯೂ, ಈಎಲ್ಲಾ ಕರ್ಮಗಳನ್ನೂ ತಾನು ಮಾಡುವಂಥಾದ್ದು ಎಂಬುವಂಥಾ ತನ್ನ ಸಮ್ಮಂಧವನ್ನೂ, ಫಲಾಪೇಕ್ಷೆಯನ್ನೂ, ಬಿಟ್ಟು, ಖಂಡಿತವಾಗಿ ಮಾಡಲೇಬೇಕೆಂದು ನನ್ನ ಉತ್ತಮವಾಗಿಯೂ ನಿಶ್ಚಯವಾಗಿಯೂ ಇರುವ ಅಭಿಪ್ರಾಯವು. ಮನುಷ್ಯನಿಗೆ ವಿಧಿಸಿರುವ ನಿತ್ಯನೈಮಿತ್ತಿಕ ಕರ್ಮಗಳನ್ನು ಇವನು ಎಂದಿಗೂ ಬಿಡತಕ್ಕದ್ದಲ್ಲ. ಕರ್ಮಗಳು ಬಂಧನರೂಪವಾದ್ದೆಂಬ ಅಜ್ಞಾನದಿಂದ ಅವುಗಳನ್ನ ಮಾಡತಕ್ಕದ್ದಲ್ಲವೆಂದು ಬಿಡುವದು ಕೇವಲತಾಮಸ ಸ್ವಭಾವದಿಂದ ವುಂಟಾದದ್ದೆಂದು ಹೇಳಲ್ಪಟ್ಟದೆ.ಹಾಗಿಲ್ಲದೆ, ಕರ್ಮಾನುಷ್ಠಾನವು ದೇಹಾಯಾಸವನ್ನೂ ಮನಸ್ಸಂಕಟವನ್ನೂ,ಉಂಟುಮಾಡುತ್ತದೆ ಎಂಬದಾಗಿ ಕರ್ಮವನ್ನ ಮಾಡದೇ ಬಿಟ್ಟರೆ, ಆ ತ್ಯಾಗವನ್ನ ರಾಜಸಸ್ವಭಾವವುಳ್ಳತ್ಯಾಗವೆಂದುಹೇಳುವರು.ಅಂಥಾ ತ್ಯಾಗದಿಂದ ತ್ಯಾಗ ಫಲವು ಎಂದಿಗೂ ಉಂಟಾಗಲಾರದು. ಆದರೆ ಶಾಸ್ತ್ರೋಕ್ತವಾದ ಕರ್ಮವನ್ನುಮಾಡತಕ್ಕದ್ದೇ ಧರ್ಮವೆಂದು ತಿಳಿದು,ಅದರಲ್ಲಿ ತನ್ನ ಸಂಬಂಧವನ್ನೂ, ಫಲಾಪೇಕ್ಷೆಯನ್ನೂ, ಇವೆರಡನ್ನು ಮಾತ್ರ ಬಿಟ್ಟು, ಕರ್ಮವನ್ನು ಮಾಡುವದು ಸಾತ್ವಿಕ ತ್ಯಾಗವೆನಿಸಿಕೊಳ್ಳುವದು. ಇಂಥಾ ಸತ್ವಗುಣ ವಿಶಿಷ್ಟನಾಗಿ

ಯೂ, ಒಳ್ಳೇ ಜ್ಞಾನವುಳ್ಳವನಾಗಿಯೂ, ನಿಸ್ಸಂದೇಹ ಯುಕ್ತನಾದ ಫಲತ್ಯಾಗಿಯು, ಅಜ್ಞಾನಿಯನ್ನ ಜನನ ಮರಣರೂಪವಾದ ಬಂಧದಲ್ಲಿ ಸೆಳೆದು ಹಾಕುವಂಥಾ ದ್ದರಿಂದಲೇ ಕ್ಷೇಮಕರವಲ್ಲದ(ಅಕಾಮ್ಯ ಕರ್ಮಗಳಲ್ಲಿ) ದ್ವೇಷವನ್ನು ಮಾಡುವುದೂ ಇಲ್ಲ, ಹಾಗಿಲ್ಲದೆ ಇವನಿಗೆ ಯಶಸ್ಕರವಾದ ನಿತ್ಯನೈಮಿತ್ತಕರ್ಮಗಳಲ್ಲಿಯೂ ಪ್ರೀತಿಯನ್ನೂ ಇಡುವುದಿಲ್ಲ. ಸಮಸ್ತ ಕರ್ಮವನ್ನೂ ಶುದ್ಧಾಂಗವಾಗಿ ಬಿಟ್ಟುಬಿಡುವದು ಈ ದೇಹಸಂಬಂಧವಿರುವವರಿವಿಗೂ ಈ ಚೇತನನಿಗೆ ಸಾಧ್ಯವಲ್ಲವು. ಆದ್ದರಿಂದ, ಯಾವನಾದರೆ ಕರ್ಮದಲ್ಲಿ ಫಲಾಪೇಕ್ಷೆಯನ್ನು ಬಿಡುವನೊ ಅವನೇ ತ್ಯಾಗಿ 'ಎನಿಸಿಕೊಳ್ಳುವನು' ಈ ಕರ್ಮಾನುಷ್ಠಾನದ ಇಷ್ಟಫಲವೂ, ಅನಿಷ್ಟಫಲವೂ, ಇಷ್ಟಾನಿಷ್ಟಮಿಶ್ರವಾದ ಈ ಮೂರು ವಿಧವಾದ ಫಲವೂ, ಫಲಾಪೇಕ್ಷೆಯನ್ನು ಬಿಡದವರಿಗೆ ಜನ್ಮಾಂತರದಲ್ಲಿ ಉಂಟಾಗುವದು. ಆದರೆ ಫಲಾಪೇಕ್ಷೆಯನ್ನು ಬಿಟ್ಟವರಿಗೆ ಈ ಮೇಲೆ ಹೇಳಿದಂಥಾ ಯಾವನಿರ್ಬಂಧ ರೂಪವಾದ ಫಲವೂ, ಎಂದಿಗೂ, ಉಂಟಾಗುವದಿಲ್ಲ. ಸಮಸ್ತ ಕಾರ್ಯಸಿದ್ಧಿಗೂ ಐದು ಕಾರಣಗಳುಂಟೆಂದು ಕರ್ಮಕ್ಕೆ ಎಲೆಯಾದಂಥಾ ಸಾಂಖ್ಯವೆಂಬುವ ವೇದಾಂತ ಶಾಸ್ತ್ರದಲ್ಲಿ ಹೇಳಿದೆ. ಅದನ್ನು ನಾನು ನಿನಿಗೆ ಹೇಳುವೆನು ಕೇಳ್ಳೆಯ್ಯಾ ಅರ್ಜುನ! ಮನುಷ್ಯನು ಕಾಯಕ ವಾಚಕ ಮಾನಸಿಕವಾದಂಥಾ ಯಾವ ಸತ್ ಕರ್ಮವ

ನ್ನು ಮಾಡಿದರೂ, ದುಷ್ಕರ್ಮವನ್ನು ಮಾಡಿದರೂ, ಅ ವೆಲ್ಲಕ್ಕೂ ಐದು ಕಾರಣಗಳು ಅವಶ್ಯಕವಾಗಿರುವವು. ಅವು ಯಾವುವೆಂದರೆ:—ದೇಹವೂ,ಚೇತನನೂ,ಇಂದ್ರಿ ಯಂಗಳೂ, ಪ್ರಾಣವಾಯುವಿನ ಅನೇಕ ಬಗೆಯಾದ ವ್ಯಾಪಾರಗಳೂ, ಮತ್ತು ಇವೆಲ್ಲಕ್ಕೂ ಅಧಿಪತಿಯಾದ ದೈವವೂ,ಹೀಗ್ಗಿರುವಲ್ಲಿ ಯಾವೊನಾದರೆ ತಾನೇ ಕರ್ಮ ವನ್ನು ಮಾಡುವೆನೆಂದು ಭಾವಿಸುತ್ತಾನೆಯೋ, ಅಂಥಾ ಜ್ಞಾನಶೂನ್ಯನಾದವನು, ವಿವೇಕವಿಲ್ಲದ್ದರಿಂದ ಕರ್ತಾ ಇಂಥಾವನೆಂದು ತಿಳಿಯಲಾರನು. ಹೀಗಿಲ್ಲದೆ,ಯಾ ರೆಬುದ್ಧ್ಯಾಕರ್ತತಾನೇ ಎಂಬುವುದಾಗಿ ಇಲ್ಲವೋ,ಆ ಕರ್ತೃತ್ವವಿಲ್ಲದ್ದರಿಂದ ಅದರ ಫಲಾಪೇಕ್ಷೆಯಲ್ಲಿ ಸಂ ಬ್ಬಂಧವು ಯಾವನು ಇಟ್ಟುಕೊಳ್ಳುವುದಿಲ್ಲವೋ ಅಂ ಥಾಪುರುಷನು ಈ ಜಗತ್ತನ್ನೆಲ್ಲಾ ನಾಶಮಾಡಿದಾಗ್ಯೂ, ಅವನು ನಾಶಮಾಡಿದವನೂ ಅಲ್ಲ, ಅದರ ಫಲವು ಅವ ನನ್ನು ಬಂಧಿಸುವದೂಇಲ್ಲ. ಕರ್ಮದಲ್ಲಿಮನುಷ್ಯರನ್ನು ಪ್ರ ವರ್ತಿಸುವಂತೆ ಮಾಡುವಂಥಾದ್ದು ಜ್ಞಾನವೆಂತಲೂ, ಜ್ಞಾನಕ್ಕೆ ವಿಷಯ ಭೂತವಾದಂಥಾದ್ದು ಜ್ಞಾನ ಪದಾ ರ್ಥವೆಂತಲೂ, ಈ ಜ್ಞಾನದಿಂದ ಸಕಲವನ್ನೂ ತಿಳಿ ಯುವನು ಜೀವಾತ್ಮನೆಂತಲೂ, ಮೂರುವಿಧವಾಗಿಧೆ ಎಂದು ತಿಳಿಯತಕ್ಕದ್ದು. ಇದೇ ಪ್ರಕಾರ ಕರ್ಮವೂ ಕೂಡ ಸಂಗ್ರಹವಾಗಿ ಮೂರು ವಿಧವಾಗಿಇರುವದು. ಅವು ಯಾವುವೆಂದರೆ:-ಕರ್ಮಕ್ಕೆ ಸಾಧನಭೂತವಾದ

ಕರಣ ಕಳೇಬರಗಳೂ, ಇವುಗಳಿಂದ ಮಾಡಲ್ಪಡುವ ಕರ್ಮವೂ, ಈ ಕರ್ಮಗಳನ್ನೆಲ್ಲಾ ಮಾಡುವ ಜೀವಾತ್ಮನೂ. ಈ ಮೇಲೆ ಹೇಳಿರುವ ಜ್ಞಾನವೂ. ಕರ್ಮವೂ, ಕರ್ತನಾದ ಜೀವಾತ್ಮನೂ, ಸತ್ವರಜಸ್ತಮೋಗುಣ ಭೇದಗಳಿಂದ ಮೂರು ವಿಧವಾಗಿರುವುವೆಂದು ಹೇಳಲ್ಪಡುತ್ತೆ. ಅದನ್ನು ಯಥಾವತ್ತಾಗಿ ತಿಳಿಸುವೆನು ಕೇಳೈಯ್ಯಾ ಅರ್ಜುನ ! ಯಾವ ಜ್ಞಾನದಿಂದ ಮನುಷ್ಯನು ಸಮಸ್ತ ಪ್ರಾಣಿಗಳಲ್ಲಿಯೂ ನಾಶರಹಿತವಾದಂಥಾದ್ದಾಗಿಯೂ, ಬೇರೆಬೇರೆಯಾಗಿ ಕಾಣಿಸುವ ಪದಾರ್ಥಗಳಲ್ಲಿಯೂ ಕೂಡ ವಿಭಾಗ ಮಾಡಲಸಾಧ್ಯವಾದಂಥಾದ್ದಾಗಿಯೂಇರುವ, ಏಕಭಾವವನ್ನು ನೋಡುವನೊ, ಅಂಥಾ ಜ್ಞಾನವನ್ನು ಸಾತ್ವಿಕ ಜ್ಞಾನವೆಂದು ತಿಳಿಯತಕ್ಕದ್ದು.ಯಾವ ಜ್ಞಾನವಾದರೆ ಸಮಸ್ತ ಪ್ರಾಣಿಗಳಲ್ಲಿಯೂ ಬೇರೆಬೇರೆ ವಿಧವಾಗಿ ಇರುವಂಥಾದ್ದಾಗಿಯೂ,ಅನೇಕ ಅಕಾರಗಳನ್ನುಳ್ಳಂಥಾದ್ದಾಗಿಯೂ, ತಿಳಿಯುವದೊ ಅಂಥಾ ಜ್ಞಾನವನ್ನು ರಾಜಸ ಜ್ಞಾನವೆಂದು ತಿಳಿ.ಹೀಗೂ ಅಲ್ಲದೆ, ಯಾವ ಜ್ಞಾನವಾದರೆ ಒಂದು ಕಾರ್ಯದಲ್ಲೇ ಆಸಕ್ತಿಯುಳ್ಳದ್ದಾಗಿಯೂ,ಕೊಂಚವೂ ಕಾರಣವಿಲ್ಲದೇನೆ ಆವಂದು ಕಾರ್ಯವೆ ಸಮಸ್ತ ವಿಧವಾದ ಫಲವನ್ನುಉಂಟುಮಾಡುವಂಥಾದ್ದೆಂತಲೂ ತತ್ವಾರ್ಥ ಜ್ಞಾನವಿಲ್ಲದೆಯೂ, ಅಲ್ಪವಾಗಿಯೂ, ಇರುವದೋ ಅಂಥಾಜ್ಞಾನವನ್ನ ತಾಮಸಜ್ಞಾನ

ವೆಂದು ತಿಳಿ. ಇದೇ ಪ್ರಕಾರ ಕರ್ಮಭೇಧವನ್ನೂ ವಿವರಿಸುತ್ತಾರೆ. ಅದು ಹ್ಯಾಗಂದರೆ:- ಯಾವ ಕರ್ಮವಾದರೆ ತನಗೆ ಶಾಸ್ತ್ರದಲ್ಲಿ ನಿಯಮಿಸಲ್‌ಪಟ್ಟದ್ದೊ, ತಾನು ಮಾಡುವದೆಂಬ ಸಂಬಂಧವನ್ನು ಬಿಟ್ಟದ್ದೊ, ಇಚ್ಛಾದ್ವೇಷಗಳಿಂದ ಮಾಡಲ್ ಪಟ್ಟದ್ದಲ್ಲವೊ, ಫಲಾಪೇಕ್ಷೆ ಇಲ್ಲದೇ ನೆಮಾಡಿದ್ದೊ, ಅಂಥಾ ಕರ್ಮವನ್ನು ಸಾತ್ವೀಕ ಕರ್ಮವೆಂದು ಹೇಳುವರು. ಯಾವ ಕರ್ಮವಾದರೆ ಫಲಾಪೇಕ್ಷೆ ಇಂದಲೇ ಆಗಲಿ, ಅಹಂಕಾರದಿಂದಲೇ ಆಗಲಿ, ಅಧಿಕ ಶ್ರಮದೊಡನೆ ಮಾಡಲ್‌ಪಡುತ್ತದೆಯೊ, ಆ ಕರ್ಮವು ರಾಜಸ ಕರ್ಮವೆಂದು ಹೇಳಲ್ ಪಡುವದು. ಹಾಗೂ ಅಲ್ಲದೆ ಯಾವ ಕಾರ್ಯವಾದರೆ ಪೂರ್ವಾಪರ ಆಲೋಚನೆ ಇಲ್ಲದ್ದಾಗಿಯೂ, ನಾಶಕರವೆಂದು ತಿಳಿಯದೆಯೂ ಹಿಂಸಾ ರೂಪವಾದದ್ದೆಂದು ಅರಿಯದೆಯೂ, ತನಗೆ ನಿರ್ವಾಹ ಶಕ್ತಿ ಉಂಟೆ, ಇಲ್ಲವೆ ಎಂಬ ವಿಚಾರಮಾಡದೆಯೂ, ಕೇವಲ ಅಜ್ಞಾನದಿಂದ ಆರಂಭಿಸಲ್ ಪಡುತ್ತದೆಯೊ, ಅಂಥಾ ಕರ್ಮವನ್ನ ತಾಮಸ ಕರ್ಮವೆಂದು ಹೇಳುವರು. ಇದೇ ಪ್ರಕಾರ ಕರ್ತಾ ಕೂಡ ಮೂರು ವಿಧವಾದವನೆಂದು ಹೇಳಲ್ ಪಡುವನು. ಅದು ಹ್ಯಾಗಂದರೆ:-ಯಾವ ಕರ್ತಾವಾದವನು ಕರ್ಮದಲ್ಲಿ ತನ್ನನ್ನ ಸಂಬಂಧಿಸಿಕೊಳ್ಳದೆಯೂ, ಅಹಂಕಾರವಿಲ್ಲದೆಯೂ, ಆ ಕರ್ಮದಲ್ಲಿ ಅನುಭವಿಸತಕ್ಕ ಶ್ರಮವನ್ನೆಲ್ಲಾ ಅನುಭವಿಸುವುದಕ್ಕೆ ಬೇಕಾದ ಧೈರ್ಯದೊಡನೆಯೂ

ಉತ್ಸಾಹದೊಡನೆಯೂ, ಕೂಡಿದವನಾಗಿ ಕಾರ್ಯಸಿದ್ಧಿಸಿದರೂ, ಸಿದ್ಧಿಸದೇಹೋದರೂ, ಅದರಿಂದ ವಿಕಾರವನ್ನು ಹೊಂದದೆಯೂ, ಇರುವನೋ, ಅಂಥಾಕರ್ತಾವಾದವನು ಸಾತ್ವಿಕನೆಂದು ಹೇಳಲ್ಪಡುವನು.

ಹೀಗಿಲ್ಲದೆ, ಕರ್ಮದಲ್ಲಿ ಒಂದುವಿಧವಾದ ಅನುರಾಗದಿಂದಲೂ, ಫಲಾಪೇಕ್ಷೆಇಂದಲೂ, ಧಾರಾಳ ಬುದ್ಧಿಇಲ್ಲದೆಯೂ, ಸಂತೋಷದಿಂದಲೂ ದುಃಖದಿಂದಲೂ ಕೂಡಿದವನಾಗಿಯೂ, ಇರುವ ಕರ್ತಾವಾದವನು ರಾಜಸನೆಂದು ಹೇಳಲ್ ಪಡುವನು. ಹೀಗೂ ಅಲ್ಲದೆ, ಯಾವ ಕರ್ತಾವಾದವನು ತನಗೆ ಶಾಸ್ತ್ರದಲ್ಲಿ ವಿಧಿಸಿ ಇರುವ ಕರ್ಮದಲ್ಲಿ ಸಂಮಂಧಿಸದೇಲೂ, ಮುಠ್ಠಾಳನಂತೆಯೂ, ಕೆಲಸದಲ್ಲಿ ಬುದ್ಧಿ ಓಡದೆಯೂ, ಕೆಟ್ಟಸ್ವಭಾವದೊಡನೆಯೂ, ಮೋಸಬುದ್ಧಿ ಇಂದಲೂ, ಸೋಮಾರಿತನದಿಂದಲೂ, ಯಾವಾಗಲೂ ಸಂತೋಷವಿಲ್ಲದೆ ಕೇವಲ ದುಃಖದಿಂದಲೂ, ಇತರರನ್ನು ಕೆಡಿಸುವುದರಲ್ಲಿ ಅತಿ ದೀರ್ಘಾಲೋಚನೆಯುಳ್ಳವನಾಗಿಯೂ, ಇರುವನೊ, ಅಂಥಾಕರ್ತಾವಾದವನು ತಾಮಸ ಸ್ವಭಾವವುಳ್ಳವನೆಂದು ಹೇಳಲ್ ಪಡುವನು. ಇದೇ

ಮೇರೆಗೆ ಬುದ್ಧಿಯಲ್ಲಿಯೂ, ಧೈರ್ಯದಲ್ಲಿಯೂ, ಇರುವ ಮೂರುವಿಧವಾದ ಗುಣಗಳನ್ನು ಬೇರೆಬೇರೆಯಾಗಿ ನಿನಗೆ ವಿಸ್ತರಿಸಿ ಹೇಳುವೆನೈಯ್ಯಾ ಅರ್ಜುನ! ಅದನ್ನ ನೀನುಕೇಳು. ಪ್ರವರ್ತಿ ಮಾರ್ಗವು. ಇಂಥಾದ್ದೆಂ

ತಲೂ, ಈ ಕೆಲಸವೂಡತಕ್ಕದ್ದೆಂತಲೂ, ಇದು ಮಾಡತಕ್ಕದ್ದಲ್ಲವೆಂತಲೂ, ಯಾವದಕ್ಕಾಗಿ ಭಯಪಡತಕ್ಕದ್ದು, ಯಾವದಕ್ಕೆ ಭಯಪಡಕೆಲಸವಿಲ್ಲವೆಂತಲೂ, ಯಾವದು ಸಂಸ್ಕಾರಬಂಧನ ರೂಪವಾದದ್ದು, ಯಾವದು ಮೋಕ್ಷವನ್ನು ಕೊಡುವಂಥಾದ್ದು, ಎಂಬುವದನ್ನು ಯಾವಬುದ್ಧಿಯಾದರೆ ತಿಳಿಯುತ್ತದೆಯೊ, ಅಂಥಾ ಬುದ್ಧಿಯನ್ನು ಸಾತ್ವಿಕಬುದ್ಧಿಎಂದು ಹೇಳುವರು. ಯಾವ ಬುದ್ಧಿಯಾದರೆ ಧರ್ಮಾಧರ್ಮವನ್ನೂ, ಕಾರ್ಯಾಕಾರ್ಯವನ್ನೂ, ಯಥಾವತ್ತಾಗಿ ತಿಳಿಯುವುದಿಲ್ಲವೊ, ಅಂಥಾ ಬುದ್ಧಿಯನ್ನು ರಾಜಸಬುದ್ಧಿಎಂದು ತಿಳಿಯಯ್ಯಾ ಅರ್ಜುನ! ಹೀಗೂ ಅಲ್ಲದೆ, ಯಾವ ಬುದ್ಧಿಯು ಅಜ್ಞಾನದಿಂದ ಮುಚ್ಚಲ್ ಪಟ್ಟದ್ದಾಗಿ, ಧರ್ಮವಲ್ಲದ್ದನ್ನು ಧರ್ಮವೆಂತಲೂ,ಎಲ್ಲವನ್ನೂ ವಿಪರೀತವಾಗಿಯೂ, ತಿಳಿಯುವದೋ, ಆಬುದ್ಧಿಯನ್ನು ತಾಮಸಬುದ್ಧಿಎಂದು ತಿಳಿಯತಕ್ಕದ್ದು. ಯಾವ, ಭಗವದೇಕಪರವಾದ ಯೋಗಸಮಾಧಿಇಂದ ಕೂಡಿದ, ಧೈರ್ಯದಿಂದ ಮನಸ್ಸೇನು, ಪಂಚಪ್ರಾಣಗಳೇನು, ಇಂದ್ರಿಯಗಳೇನು, ಇವೆಲ್ಲವುಗಳ ವ್ಯಾಪಾರಗಳನ್ನೂ ತಕ್ಕವಿಷಯಗಳಲ್ಲಿ ನಿಲ್ಲಿಸಿಕೊಳ್ಳುವನೊ, ಆಧೈರ್ಯವನ್ನು ಸಾತ್ವೀಕಲಕ್ಷಣವುಳ್ಳದ್ದೆಂದು ತಿಳಿ. ಹಾಗಲ್ಲದೆ, ಯಾವ ಧೈರ್ಯದಿಂದ ಮನೇಂದ್ರಿಯ ವ್ಯಾಪಾರಗಳನ್ನೂ, ಪ್ರಾಣಾಪಾನಮೊದಲಾದ ವಾಯುಗಳವ್ಯಾಪಾ

ರಗಳನ್ನೂ, ಇಂದ್ರಿಯ ವ್ಯಾಪಾರಗಳನ್ನೂ, ಧರ್ಮ ಸಾಧನವಾಗಿಯೂ, ಅರ್ಥಪರವಾಗಿಯೂ, ಕಾಮಿಕಫಲಪ್ರದವಾಗಿಯೂ, ಅಧಿಕಫಲಾಪೇಕ್ಷೆಇಂದಲೂ, ನಿಲ್ಲಿಸಿಕೊಳ್ಳುವನೊ, ಅಂಥಾ ಧೈರ್ಯವನ್ನ ರಾಜಸಗುಣವಿಶಿಷ್ಟವಾದದ್ದೆಂದು ಹೇಳುವರು. ಹೀಗೂ ಅಲ್ಲದೆ, ಯಾವ ಧೈರ್ಯದಿಂದ ನಿದ್ರೆಯನ್ನೂ, ಭಯವನ್ನೂ, ವ್ಯಸನವನ್ನೂ, ಮದವನ್ನೂ, ದುಷ್ಟಬುದ್ಧಿಯುಳ್ಳ ಮನುಷ್ಯನು ಬಿಡುವುದಿಲ್ಲವೊ, ಅಂಥಾ ಧೈರ್ಯವನ್ನು ತಾಮಸ ಸ್ವಭಾವವುಳ್ಳದ್ದೆಂದು ಹೇಳುವರು. ಅಯ್ಯಾ ಭರತಶ್ರೇಷ್ಠ! ಯಾವ ಸುಖವು ಅನುಭವಿಸಿದಷ್ಟೂ ರುಚಿಯಾಗಿಯೆ ಇರುತ್ತದೆಯೊ, ದುಃಖಕ್ಕೆ ಸೀಮಾಭೂಮಿ,ಅಂದರೆ, ಕೊನೆ,ಯಾಗಿಯೂ ಇರುತ್ತದೆಯೋ, ಅಂಥಾಸುಖವೂ ಕೂಡ ಮೂರು ವಿಧವಾಗಿರುವುದನ್ನು ತಿಳಿಸುವೆನು ಕೇಳು. ಯಾವ ಸುಖವಾದರೆ ಆರಂಭದಲ್ಲಿ ಕಷ್ಟಪಡಿಸುವಂಥಾದ್ದಾಗಿಯೂ, ಅಂತ್ಯದಲ್ಲಿ ಬ್ರಹ್ಮಾಂಡವನ್ನು ಕೊಡುವಂಥಾದ್ದಾಗಿಯೂ, ಇರುವದೊ, ಅಂಥಾಪರಮಾತ್ಮ ಜ್ಞಾನವನ್ನುಂಟುಮಾಡುವ ಸುಖವು ಸಾತ್ವಿಕವೆಂದು ಹೇಳಲ್ ಪಡುವದು. ಯಾವ ಸುಖವು ವಿಷಯಗಳಲ್ಲಿ ಇಂದ್ರಿಯಗಳ ಸಂಬಂಧ ಉಂಟಾದಕೂಡ್ಲೆ ಅಮೃತಪ್ರಾಯವಾಗಿ ಕಾಣಬರುವದೊ, ಆದರೆ ಅಂತ್ಯದಲ್ಲಿ ಅಷ್ಟೂ ಅಷ್ಟುಕೆಟ್ಟದ್ದಾಗಿರುವದೂ, ಅಂಥಾಸುಖವು,

ರಾಜಸ ಸುಖವೆಂದು ಹೇಳಲ್ಪಡುವದು. ಆದರೆ ಯಾವಸುಖವು ಆರಂಭದಲ್ಲಿಯೂ, ಅಂತ್ಯದಲ್ಲಿಯೂ, ನಿದ್ರೆಯೇನು, ಸೋಮಾರಿತನವೇನು, ಅಜಾಗ್ರತೆಯೇನು, ಇವುಗಳಿಂದುಂಟಾದದ್ದಾಗಿಯೂ, ಆತ್ಮವನ್ನು ಮೋಹಗೊಳಿಸುವಂಥಾದ್ದಾಗಿಯೂ, ಇರುವದೋ, ಅಂಥಾಸುಖವು ತಾಮಸ ಸುಖವೆಂದು ಹೇಳಲ್ಪಡುವದು. ಈ ಪ್ರಕಾರವಾಗಿ ಮೇಲೆ ವಿವರಿಸಿಇರುವಪ್ರಕೃತಿಜನ್ಯವಾದ ಸತ್ವರಜಸ್ತಮೋ ಗುಣಗಳೆಂಬಮೂರುಗುಣಗಳಿಂದಲೂ ಬಿಡಲ್ಪಟ್ಟಂಥಾ ಜೀವರಾಶಿಯು ಭೂಲೋಕದಲ್ಲೇ ಆಗಲಿ ದೇವಲೋಕದಲ್ಲೇ ಆಗಲಿ ಇಲ್ಲವೇಇಲ್ಲ. ಅಯ್ಯಾ ಅರ್ಜುನ! ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರಿಗೆಲ್ಲಾ, ಸ್ವಭಾವಜನ್ಯವಾದ ಗುಣಗಳಿಂದ ಕರ್ಮಗಳು ವಿಭಾಗಮಾಡಲ್ಪಟ್ಟಿರುವವು. ಶಾಂತಿಗುಣವೂ,ಇಂದ್ರಿಯನಿಗ್ರಹವೂ, ವ್ರತಾಚರಣೆಯೂ, ಮನೋವಾಕ್ಕಾಯಶುದ್ಧಿಯೂ, ಕ್ಷಮಾಗುಣವೂ, ವ್ರತವಿಲ್ಲದೆ ರುಜುವಾಗಿರುವಿಕೆಯೂ, ಲೌಕಿಕವಿಷಯಕವಾದ ಜ್ಞಾನವೂ, ಪರಮಾತ್ಮವಿಷಯಕವಾದ ಜ್ಞಾನವೂ, ಶಾಸ್ತ್ರದಲ್ಲಿ ಪ್ರಮಾಣಿಕತೆಯೂ, ಇವೆಲ್ಲವೂ, ಬ್ರಾಹ್ಮಣರಿಗೆ ಸ್ವಭಾವಸಿದ್ಧವಾದ ಕರ್ಮಗಳು. ಸಾಮರ್ಥ್ಯವೂ,ಕೀರ್ತಿಯೂ, ಧೈರ್ಯವೂ, ಬುದ್ಧಿವಂತಿಕೆಯೂ, ಯುದ್ಧರಂಗದಿಂದ ಓಡಿಪೋಗದೆಇರುವಿಕೆಯೂ, ದಾನಮಾಡುವಿಕೆಯೂ, ಪ್ರಜೆಗಳನ್ನು

ಆಳುವಿಕೆಯೂ, ಇವೆಲ್ಲವೂ, ಕ್ಷತ್ರಿಯನ ಸ್ವಭಾವಸಿದ್ಧವಾದ ಧರ್ಮಗಳು. ಹೀಗಿಲ್ಲದೆ, ಭೂಮಿಯನ್ನು ವ್ಯವಸಾಯ ಮಾಡುವಿಕೆಯೇನು, ಗೋವುಗಳನ್ನು ರಕ್ಷಿಸುವದೇನು, ವ್ಯಾಪಾರಮಾಡುವದೇನು, ಇವೆಲ್ಲವೂ ವೈಶ್ಯನಿಗೆ ಸ್ವಭಾವಸಿದ್ಧವಾದ ಕರ್ಮಗಳು ಆದವೆ, ಶೂದ್ರನಿಗೆ ಸ್ವಭಾವಜನ್ಯವಾದ ಕರ್ಮವು, ಈ ಮೇಲೆ ವಿವರಿಸಲ್ಪಟ್ಟ ಬ್ರಹ್ಮ ಕ್ಷತ್ರಿಯ ವೈಶ್ಯರಿಗೆಲ್ಲಾ ಸೇವಕಾವೃತ್ತಿಯನ್ನು ಮಾಡುವುದೆಂದು ತಿಳಿಯತಕ್ಕದ್ದು. ಆಯಾ ಜಾತ್ಯನುಗುಣವಾಗಿ ವಿಧಿಸಿರುವ ಕರ್ಮಗಳಲ್ಲಿ ಆಸಕ್ತಿಯುಳ್ಳ ಜನರು, ಸಿದ್ಧಿಯನ್ನು ಹೊಂದಲು ಸಂದೇಹವೇ ಇಲ್ಲ. ಅದು ಹ್ಯಾಗೆಂದು ಕೇಳುವ ಪಕ್ಷದಲ್ಲಿ, ಹೇಳುವೆನು, ಕೇಳು. ಸಮಸ್ತ ಪ್ರಾಣಿಗಳಿಗೂ ಯಾವ ಪರಮಾತ್ಮನಿಂದ ಉತ್ಪತ್ತಿ ಉಂಟಾಯಿತೋ, ಯಾವ ಪರಮಾತ್ಮನಿಂದ ಈ ಜಗತ್ತೆಲ್ಲಾ ವ್ಯಾಪ್ತವಾಗಿದೆಯೋ, ಅಂಥಾ ಪರಮಾತ್ಮನನ್ನು ಆಯಾ ಜಾತಿಸ್ವರೂಪಾನುರೂಪವಾಗಿ, ಶಾಸ್ತ್ರದಲ್ಲಿ ವಿಧಿಸಿರುವ ಕರ್ಮಗಳಿಂದ ಆ ಪರಮಾತ್ಮನನ್ನೇ ಆರಾಧಿಸಿ, ಮನುಷ್ಯನು ಮೋಕ್ಷವನ್ನೇ ಹೊಂದುವನು. ತನ್ನತನ್ನ ಧರ್ಮವು ಎಂಥಾದ್ದಾಗಿದ್ದರೂ, ಇತರರ ಧರ್ಮವನ್ನು ತಾನು ಅನುಷ್ಟಿಸುವುದಕ್ಕಿಂತಲೂ, ಸ್ವಧರ್ಮಾನುಷ್ಠಾನವೇ ಮೇಲಾದದ್ದೆಂದು ತಿಳಿಯಬೇಕು. ತನಗೆ ವಿಧಿಸಿರುವ ಕರ್ಮವನ್ನು ತಾನು ಮಾಡಿ, ಪಾ

ರೂಪಾಪವನ್ನು ಹೊಂದುವದಿಲ್ಲ. ಎಲೈ ಅರ್ಜುನ! ನಿನಿಗೆ ಸ್ವಭಾವಸಿದ್ಧವಾದಂಥಾ ಕರ್ಮವು ದೋಷದಿಂದಕೂಡಿವ್ದಾಗಿದ್ದರೂ, ಅದನ್ನು ನೀನು ಬಿಡತಕ್ಕದ್ದಲ್ಲ. ಅದು ಯಾಕಂದರೆ, ಸಮಸ್ತ ಕರ್ಮವೂ ತ್ರಿಗುಣಾತ್ಮಕವಾಗಿರುವುದ್ದರಿಂದ, ಬೆಂಕಿಯು ಹೊಗೆಯಿಂದ ಹ್ಯಾಗೆ ಸುತ್ತಿಕೊಳ್ಳಲ್ಪಟ್ಟಿಧೆಯೋ, ಹಾಗೆಯೇ ಆ ಕರ್ಮವೂಕೂಡ ದೋಷದಿಂದ ಸುತ್ತಿಕೊಳ್ಳಲ್ಪಟ್ಟಿಧೆ. ಯಾವವಿಷಯದಲ್ಲಿಯೂ, ಸಂಬಂಧಪಡಿಸದಂಥಾ ಭುದ್ಧಿಯುಳ್ಳವನಾಗಿಯೂ, ಮನೋನಿಗ್ರಹವನ್ನುಳ್ಳವನಾಗಿಯೂ, ಆಶಾರಹಿತನಾಗಿಯೂ, ಕರ್ತೃತ್ವತ್ಯಾಗ, ಫಲತ್ಯಾಗ, ಮಮತಾ ತ್ಯಾಗವನ್ನು ಮಾಡಿದವನಾಗಿ, ಶ್ರೇಷ್ಟವಾದ ಜ್ಞಾನಶುದ್ಧಿಯನ್ನು ಹೊಂದುವನು. ಅಯ್ಯಾ ಅರ್ಜುನ! ಈ ಪ್ರಕಾರವಾಗಿ ಜ್ಞಾನ ಶುದ್ಧಿಯನ್ನು ಹೊಂದಿದವನು, ಹ್ಯಾಗಾದರೆ ಜ್ಞಾನಕ್ಕೆ ಎಲ್ಲೇಭೂಮಿಯಾಗಿಯೂ, ಫಲನಾಗಿಯೂ, ಇರುವ ಪರಮಾತ್ಮನನ್ನು ಹೊಂದುವನೋ, ಆ ಪ್ರಕಾರವನ್ನು ಸೂಕ್ಷ್ಮವಾಗಿ ನನ್ನಿಂದ ನೀನು ತಿಳಿದುಕೊ. ಯಥಾವತ್ತಾದ ಜ್ಞಾನದಿಂದ ಕೂಡಿದವನಾಗಿಯೂ, ಧೈರ್ಯದಿಂದ ಮನಸ್ಸನ್ನು ಅಡಗಿಸಿಕ್ಕೊಂಡವನಾಗಿಯೂ, ಶಬ್ದಾದಿ ವಿಷಯಗಳಲ್ಲಿ ಆಸಕ್ತಿಯನ್ನುಬಿಟ್ಟು, ರಾಗದ್ವೇಷಗಳನ್ನು ಚನ್ನಾಗಿತೊಲಗಿಸಿ, ಏಕಾಂತಪ್ರದೇಶವನ್ನು ಆಶ್ರಯಿಸಿದವನಾಗಿ,

ಮಿತವಾಗಿ ಆಹಾರವನ್ನು ತೆಗದುಕೊಂಡು, ಮನೋವಾಕ್ಕಾಯಗಳನ್ನು ದಂಡಿಸಿಕೊಂಡು, ಯಾವಾಗಲೂ ಭಗವಧ್ಯಾನದಲ್ಲಿಯೂ, ಯೋಗದಲ್ಲಿಯೂ, ಇರುವಂಥಾವನಾಗಿ, ಭಗವದೇತರವಿಷಯಗಳಲ್ಲಿ ಆಸಕ್ತಿ ಇಲ್ಲದವನಾಗಿ, ಅಹಂಕಾರವನ್ನೂ, ತದನುಗುಣವಾದ ಬಲವನ್ನೂ, ದೊಡ್ಡವರನ್ನು ಅಡಗಿಸುಹಂಥಾ ದರ್ಪವನ್ನೂ, ದುರಾಶೆಯನ್ನೂ, ಕ್ರೋಧವನ್ನೂ, ಕಂಡದ್ದನ್ನೆಲ್ಲಾ ತನ್ನದೆಂದು ಪರಿಗ್ರಹಿಸುವಿಕೆಯನ್ನೂ, ಚನ್ನಾಗಿ ಬಿಟ್ಟು ಬಿಟ್ಟು, ಯಾವದನ್ನೂ ತನ್ನದೆಂಬುವ ದುರಭಿಮಾನವಿಲ್ಲದವನಾಗಿಯೂ, ಶಾಂತನಾಗಿಯೂ, ಇರುವ ಪುರುಷನು, ಪರಬ್ರಹ್ಮನ ಸ್ವಭಾವವನ್ನು ಹೊಂದಲು ಅರ್ಹನಾಗುವನು. ಇಂಥಾ ಪರಬ್ರಹ್ಮಸ್ವರೂಪವನ್ನು ಹೊಂದಿದ, ಕೋಪಾಟೋಪವಿಲ್ಲದ, ತಿಳಿವಾದ ಮನಸ್ಸುಳ್ಳವನು, ಯಾವದಕ್ಕಾಗಿಯೂ ದುಃಖಿಸುವದೂ ಇಲ್ಲ. ಯಾವದನ್ನೂ ಅಪೇಕ್ಷಿಸುವದೂ ಇಲ್ಲ. ಸಮಸ್ತ ಪ್ರಾಣಿಗಳ ವಿಷಯದಲ್ಲಿಯೂ, ಒಂದೇರೀತಿಯಾಗಿರುವನು. ಇಂಥಾ ಮಹಾನುಭಾವನು ನನ್ನ ಶ್ರೇಷ್ಟವಾದ ಭಕ್ತಿಯನ್ನು ಹೊಂದುವನು. ನನ್ನಲ್ಲಿ ಅತನು ಇಂಥಾ ಭಕ್ತಿಯನ್ನು ಮಾಡಿದತರುವಾಯ, ನಾನು ಯಾರು ? ಎಂಥಾ ಪುರುಷನು ? ಎಂಬುವದನ್ನು ತಿಳಿದುಕೊಳ್ಳುವನು. ಹಾಗೆ ತಿಳಿದುಕೊಂಡನಂತರ, ಅವನು ನನ್ನಲ್ಲಿ ಐಕ್ಯವನ್ನು ಹೊಂದುವನು. ನಿತ್ಯ

ನೈಮಿತ್ತಿಕವೇ ಮೊದಲಾದ ಸಕಲ ಕರ್ಮಗಳನ್ನೂ
ಸರ್ವಕಾಲದಲ್ಲಿಯೂ ಮಾಡಿಕೊಂಡು, ಆ ಸಮಸ್ತ ಕ
ರ್ಮಗಳನ್ನೂ ಭಗವಂತನಿಗೇನೇ ಸಮರ್ಪಿಸಿ, ಆ ಭಗವಂ
ತನಾದ ನನ್ನ ಅನುಗ್ರಹ ಬಲದಿಂದಲೇ ಎಂದಿಗೂನಾಶ
ವಿಲ್ಲದಂಥಾ ಶಾಶ್ವತವಾದ ಪರಮಪದವನ್ನು ಹೊಂದು
ವನು. ಆದ್ದರಿಂದ, ಎಲೈ ಅರ್ಜುನ! ನೀನೂ ಕೂಡ ಸಕ
ಲವಿಧವಾದ ಕರ್ಮವನ್ನೂ ನಿನ್ನ ಶುದ್ಧಜ್ಞಾನದಿಂದ ನನ
ಗೇನೆ ಅರ್ಪಿತಮಾಡಿ, ನನ್ನ ಪರವಾಗ ಇದ್ದುಕೊಂಡು,
ಧ್ಯಾನಯೋಗವನ್ನು ಅವಲಂಬಿಸಿಕೊಂಡು, ಯಾವಾ
ಗಲೂ ನನ್ನಲ್ಲಿ ಲಯಿಸಇರುವ ಮನಸ್ಸುವುಳ್ಳವನಾಗಿ
ಇರು. ಹೀಗೆ ನನ್ನಲ್ಲಿಯೇ ಮನಸ್ಸನ್ನಿಟ್ಟು, ನೀ
ನು ನನ್ನಕಟಾಕ್ಷದಿಂದಲೇ ಸಮಸ್ತ ಸಾಂಸಾರಿಕ
ಕಷ್ಟಗಳನ್ನೂ ದಾಟುವಿ. ಹೀಗಿಲ್ಲದೆ, ನೀನು ಅಹಂಕಾ
ರದಿಂದ ಕೂಡಿದವನಾಗಿ, ನನ್ನ ಉಪದೇಶಕ್ಕೆ ಕಿವಿಕೊ
ಡದ ಪಕ್ಷದಲ್ಲಿ, ಅನ್ಯಾಯವಾಗಿ ನಾಶವನ್ನು ಹೊಂ
ದುವಿ. ಒಂದುವೇಳೆ ನೀನು ಅಹಂಕಾರ ಪಟ್ಟುಕೊಂ
ಡು, ನಾನು ಯುದ್ಧ ಮಾಡುವದಿಲ್ಲವೆಂದು ಎಣಿಸಿದಪಕ್ಷ
ದಲ್ಲಿ, ಅಂಥಾ ನಿನ್ನ ಮನೋಭಿಪ್ರಾಯವು ಸುಳ್ಳಾ
ಗಿಹೋಗುವುದು. ಯಾಕಂದರೆ, ನಿನ್ನ ಪ್ರಕೃತಿಸ್ವ
ರೂಪವು ನಿನ್ನನ್ನು ಯುದ್ಧಮಾಡುವಂತೆ ಕೊಂಡು
ಹೋಗಿ ಬಿಡುವದು. ನಿನ್ನ ಸ್ವಭಾವಸಿದ್ಧವಾದ
ಕ್ಷತ್ರಿಯಧರ್ಮದಿಂದ ನೀನು ಕಟ್ಟಲ್ಪಟ್ಟವನಾಗಿ,

ನೀನು ನಿನ್ನ ಅಜ್ಞಾನದಿಂದ, ಈಗ ಕೊಂಚವೂ ಇಷ್ಟಪಡದೆಇದ್ದಾಗ್ಯೂ, ಕೋಪಕ್ಕೆ ಪರವಶನಾಗಿ, ಯುದ್ಧವನ್ನು ಮಾಡಿಯೇ ತೀರುವಿ. ಇದು ಹ್ಯಾಗೆಂದುಕೇಳುವಪಕ್ಷದಲ್ಲಿ ಹೇಳುವೆನು ಕೇಳು. ಪರಮಾತ್ಮನು ಸಕಲ ಪ್ರಾಣಿಗಳ ಹೃದಯ ಗುಹೆಯಲ್ಲಿಯೂ ಪ್ರಕೃತಿಸಂಬಂಧ ಪಟ್ಟಂಥಾ ಸಮಸ್ತ ಪ್ರಾಣಿಗಳನ್ನೂ ತನ್ನ ಮಾಯೆಯಿಂದಲೇ ಮೋಹಗೊಳಿಸಿಕೊಂಡು ಕೂತಿರುವನು. ಹೀಗಿರುವುದ್ದರಿಂದ, ಸಮಸ್ತ ಪ್ರಕಾರದಿಂದಲೂ ನೀನು ಆ ಪರಮಾತ್ಮನಾದಂಥಾ ನನ್ನನ್ನೇ ರಕ್ಷಕನೆಂದು ಹೊಂದು. ನಂತರ ನನ್ನ ಅನುಗ್ರಹದಿಂದಲೇನೀನು ಶ್ರೇಷ್ಟವಾದ ನೆಮ್ಮದಿಯನ್ನೂ, ಎಂದಿಗೂ ಕ್ಷಿತಿಇಲ್ಲದಂಥಾ ಮೋಕ್ಷಪದವಿಯನ್ನೂ, ಹೊಂದುವಿ. ಈಪ್ರಕಾರವಾಗಿ ನನ್ನಿಂದ ನಿನಗೆ ಅತಿಗೋಪ್ಯವಾದಂಥಾಪರಮಾತ್ಮ ಜ್ಞಾನವು ಉಪದೇಶಿಸಲ್ ಪಟ್ಟಿತು. ಇದನ್ನೆಲ್ಲಾ ಚನ್ನಾಗಿ ಪರ್ಯಾಲೋಚಿಸಿ, ನಿನಗೆ ಹ್ಯಾಗೆಮಾಡುವದು ಯುಕ್ತವಾಗಿ ತೋರಿಬರುವದೋ ಹಾಗೆ ಮಾಡಪ್ಪಾ ಅರ್ಜುನ! ರಹಸ್ಯಗಳಲ್ಲೆಲ್ಲಾ ಪರಮ ರಹಸ್ಯ ವಾದಂಥಾ ಶ್ರೇಷ್ಠವಾಗಿರುವ ನನ್ನ ಮಾತನ್ನು ಪುನಃ ಕೇಳು. ನೀನು ನನಗೆ ಬಹಳ ಪ್ರಿಯನಾಗಿಯೂ, ನನ್ನಲ್ಲಿ ದೃಢವಾದ ಭಕ್ತಿಯನ್ನು ಉಳ್ಳವನಾಗಿಯೂ, ಇರುವದ್ದರಿಂದ, ನಿನಗೆ ಯಾವ ಉಪದೇಶವು ಹಿತವಾದದ್ದೋ ಅದನ್ನು ಹೇಳುವೆನು,

ಕೇಳು. ನಿನ್ನ ಮನಸ್ಸನ್ನ ನನ್ನಲ್ಲಿ ಪ್ರೋಪ್ಪಿಸು. ನನ್ನ ಲ್ಲಿ ಭಕ್ತಿಯನ್ನು ಮಾಡು. ನನ್ನನ್ನು ಪೂಜಿಸು. ನನ್ನನ್ನು ನಮಸ್ಕರಿಸು. ನೀನು ಈ ಪ್ರಕಾರವಾಡಿದ್ದೇ ಆದರೆ ನನ್ನನ್ನೇ ಹೊಂದುವಿ. ಇದು ನಿಜವಾದವಾತು, ನಾನು ಖಂಡಿತವಾಗಿ ಹೇಳುವೆನು. ನೀನು ನನಗೆ ಪ್ರಿಯನಾದವನ್ನಾದ್ದರಿಂದ ನಿನಿಗೆಹಿತವಾದದ್ದನ್ನೇಉಪದೇಶಿಸಿರುವೆನು. ಆದ್ದರಿಂದ ಸಮಸ್ತಧರ್ಮಗಳಲ್ಲಿಯೂ, ಫಲತ್ಯಾಗ, ಕರ್ಮತ್ಯಾಗ, ಮಮತಾತ್ಯಾಗವನ್ನೂ, ಮಾಡಿ, ನನ್ನೊಬ್ಬನನ್ನೇ ರಕ್ಷಕನನ್ನಾಗಿ ಹೊಂದು. ನೀನು ಹೀಗೆ ಮಾಡಿದ ಪಕ್ಷದಲ್ಲಿ ನಾನು ನಿನ್ನನ್ನುಸಮಸ್ತ ಪಾಪಗಳಿಂದಲೂ ನಿವರ್ತಿಸುವೆನು. ಇದಕ್ಕಾಗಿ ನೀನು ಚಿಂತಿಸ ಕೆಲಸವಿಲ್ಲ. ಈ ನನ್ನ ಶ್ರೇಷ್ಠತಮವಾದ ಉಪದೇಶವನ್ನು ನೀನು ತಪಸ್ಸನ್ನು ಮಾಡದವನಿಗೂ, ನನ್ನಲ್ಲಿಭಕ್ತಿ ಇಲ್ಲದವನಿಗೂ, ನನ್ನನ್ನುಉಪಚರಿಸದವನಿಗೂ, ನನ್ನನ್ನು ದ್ವೇಷಿಸುವವನಿಗೂ, ಉಪದೇಶಿಸತಕ್ಕದ್ದಲ್ಲಾ. ಯಾವನಾದರೆ ಈ ಪರಮರಹಸ್ಯವನ್ನು ನನ್ನ ಭಕ್ತರಿಗೆ ಉಪದೇಶಿಸುವನೋ, ಅಂಥವನು ನನ್ನಲ್ಲಿ ಶ್ರೇಷ್ಟವಾದ ಭಕ್ತಿಯನ್ನು ಮಾಡಿದಂಥವನಾಗಿ, ನ್ನನ್ನನ್ನೇ ಹೊಂದುವನೆಂಬುವದಕ್ಕೆ ಸಂದೇಹವೇ ಇಲ್ಲ. ಇಂಥಾ ಮನುಷ್ಯನಿಗಿಂತಲೂ ಹೆಚ್ಚಾದ ಪ್ರೀತಿಪಾತ್ರನು ನನಿಗೆ ಇನ್ಯಾವನೂ ಇಲ್ಲ. ಅಂಥವನು ಈ ಭೂಮಂಡಲದಲ್ಲಿ ಮುಂದಕ್ಕೂ ಉಂ

ಟಾಗುವದಿಲ್ಲ. ಯಾವನಾದರೆ ಈ ನಮ್ಮಿಬ್ಬರ ಈ ಧರ್ಮಮಾರ್ಗ ಪ್ರವರ್ತಕವಾದಂಥಾ ಸಂವಾದವನ್ನು ಅಧ್ಯಯನ ಮಾಡುವನೋ, ಅಂಥವನಜ್ಞಾನಯಜ್ಞದಿಂದ ನಾನು ಪ್ರೀತನಾಗುವೆನೆಂದು ನನ್ನ ನಿಜವಾದ ಅಭಿಪ್ರಾಯವು. ಯಾವಮನುಷ್ಯನು ಶ್ರದ್ಧೆಯಿಂದ ಕೂಡಿದವನಾಗಿಯೂ, ಅಸೂಯೆ ಇಲ್ಲದ್ದವನಾಗಿಯೂ, ಈ ನಮ್ಮ ಧರ್ಮ ಸಂವಾದವನ್ನ ಕೇಳುವನೋ, ಅಂಥವನೂ ಕೂಡ ಸಮಸ್ತ ಪಾಪಗಳಿಂದಲೂ ಬಿಡಲ್ಪಟ್ಟವನಾಗಿ, ಪುಣ್ಯ ಕರ್ಮಾನುಷ್ಠಾನವನ್ನು ಮಾಡುವರಗೋಷ್ಠಿಯಲ್ಲಿ ಸೇರಿ, ಪುಣ್ಯಲೋಕಗಳನ್ನು ಹೊಂದುವನು. ಅಯ್ಯಾ ಅರ್ಜುನ ! ಈ ಸಂವಾದವನ್ನ ನೀನು ಏಕಾಗ್ರಚಿತ್ತನಾಗಿ ಕೇಳಿದೆಯಾ ಹ್ಯಾಗೆ? ನಿನ್ನ ಅಜ್ಞಾನ ರಾಶಿಯು ನಾಶವನ್ನು ಹೊಂದಿತೆ ಯಿನ್ನೂ ಇಲ್ಲವೆ, ತಿಳಿಸು ?

ಅರ್ಜುನ :—ಅಯ್ಯಾ ಶ್ರೀಕೃಷ್ಣ ! ನಿನ್ನ ಕಟಾಕ್ಷದಿಂದ ನನ್ನ ಅಜ್ಞಾನವು ನಿವೃತ್ತಿಯಾಗಿ, ಜ್ಞಾನವು ಚನ್ನಾಗಿ ಉಂಟಾಯಿತು. ನನ್ನ ಸಂದೇಹಗಳೆಲ್ಲಾ ನಿವೃತ್ತವಾದವು. ನಿನ್ನ ಆಜ್ಞಾನುಸಾರವಾಗಿ ನಡೆಯಲು ಸಿದ್ಧನಾಗಿದ್ದೇನೆ.

ಸಂಜಯ:-ಈಪ್ರಕಾರವಾಗಿ ಶ್ರೀಕೃಷ್ಣನಿಗೂ ಅರ್ಜುನನಿಗೂ ನಡೆದಂಥಾ ಅತ್ಯಾಶ್ಚರ್ಯಕರವಾದ ಸಂವಾದವನ್ನ ನಾನು ಕೇಳಿದೆನು. ವ್ಯಾಸಮಹರ್ಷಿಗ

ಳ ಅನುಗ್ರಹದ ದೆಸೆಇಂದ ಈ ಶ್ರೇಷ್ಠತಮವಾದ ಯೋಗರಹಸ್ಯವನ್ನ ನಾನು,ಸಮಸ್ತ ಯೋಗಗಳಿಗೂ ಅಧಿಪತಿಯಾಗಿರುವ ಶ್ರೀಕೃಷ್ಣನಿಂದಲೇಸಾಕ್ಷಾತ್ತಾಗಿ ಹೇಳಲ್ಪಟ್ಟಿದ್ದನ್ನು, ಕೇಳಿದೆನು. ಅಯ್ಯಾಧೃತರಾಷ್ಟ್ರಮಹಾರಾಯನೆ! ಶ್ರೀಕೃಷ್ಣನಿಗೂ ಅರ್ಜುನನಿಗೂ ನಡೆದ ಈ ಪರಮಪಾವನ ವಾಗಿಯೂ, ಪರಮಾಶ್ಚರ್ಯಕರವಾಗಿಯೂ, ಇರುವ ಈಸಂವಾದವನ್ನನೆನಿಸಿಕೊಂಡ ಹಾಗೆಲ್ಲಾ, ಬಾರಿಬಾರಿಗೂ ಅಧಿಕಸಂತೋಷವನ್ನು ಹೊಂದುವೆನು. ಶ್ರೀ ಕೃಷ್ಣನ ಆ ಅದ್ಭುತವಾದಂಥಾ ರೂಪವನ್ನ ಜ್ಞಾಪಕಮಾಡಿಕೊಂಡ ಹಾಗೆಲ್ಲಾ ನನಿಗೆ ವಿಶೇಷವಾದ ಆ ಶ್ಚರ್ಯ ಉಂಟಾಗುತ್ತದೆ. ಬಾರಿ ಬಾರಿಗೂ ಅದನ್ನ ನೆನಿಸಿಕೊಂಡು ಸಂತೋಷಿಸುವೆನು. ಯೋಗೇಶ್ವರನಾದ ಶ್ರೀಕೃಷ್ಣನೂ, ಧನುಸ್ಸನ್ನು ಹಿಡಿದಂಥಾ ಪಾರ್ಥನೂ, ಎಲ್ಲಿರುವರೊ ಅಲ್ಲಿ ಲಕ್ಷ್ಮಿಯೂ, ಜಯವೂ, ವೃದ್ಧಿಯೂ, ನೀತಿಯೂ, ಸ್ಥಿರವಾಗಿರುವುದೆಂದು ನಾನು ದೃಢವಾಗಿ ನಂಬಿದ್ದೇನೆ.

ಈ ಪ್ರಕಾರ ಸನ್ಯಾಸಯೋಗವೆಂಬ ಹದಿನೆಂಟನೇ ಅಧ್ಯಾಯವು ಸಮಾಪ್ತ ವಾಯಿತು.

ಸರ್ವಂ ಶ್ರೀ ಕೃಷ್ಣಾರ್ಪಣಮಸ್ತು.

ಹರಿಃ ಓಂ.

ವಿದ್ಯಾನಂದ ಬುಕ್ ಡಿಪೋ.

ವಿದ್ಯಾನಂದವೆಂಬ ಮಾಸಪತ್ರಿಕೆಯ ಚಂದಾ ವರ್ಷಕ್ಕೆ ೧—೮—೦ ರೂಪಾಯಿ.

ಮಾದರಿ ಸಂಚಿಕೆ ಬೇಕಾದರೆ ರವಾನಿಸುವೆವು.

ಮುಕುಂದಮಾಲಾ ಸ್ತೋತ್ರ ಸಟೀಕ	೦-೪-೦
ರಘುವಂಶಕಾವ್ಯ (೧ನೆಸರ್ಗ) ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ, ವಿಗ್ರಹ, ಧಾತುರೂಪ, ಧಾತ್ವರ್ಥ, ವಿಶೇಷ ವಿಷಯಸಹ	೧-೧-೦
ಚಮತ್ಕಾರಚಿಂತಾಮಣಿ ಕಥೆ. ಬಹಳ ಆಹ್ಲಾದಕರವಾದದ್ದು	೦-೧೦-೦
ಸೂರ್ಯನಮಸ್ಕಾರ (ತೃಚಕಲ್ಪರೀತ್ಯಾ ಸಮಂತ್ರಕ)	೦-೨-೧
ಟೀಕಾರಾಘವೇಂದ್ರ ಸ್ತೋತ್ರ	೦-೨-೦
ದೇವರಸೇವೆ (ಸರ್ವರಿಗೂ ಬೇಕಾದದ್ದು)	೦-೪-೦
ನಮಕ ಚಮಕ ಸ್ವರಸಹಿತ	೦-೨-೦
ವೈಜಯಂತಿ (ಉಪನಿಷತ್ಸೂಕ್ತಗಳು)	೦-೨-೦

ಬೇಕಾದಲ್ಲಿ ಕ್ಯಾಟಲಾಗಿನಸಹ ರವಾನಿಸುವೆವು.

ಈ ಪುಸ್ತಕದಲ್ಲಿ ತೋರಿಸಿರುವ ಎಲ್ಲಾಪುಸ್ತಕಗಳೂ ನಮ್ಮಲ್ಲಿಯೂ ಗ್ರಂಥಕರ್ತರಲ್ಲಿಯೂ ದೊರೆಯುತ್ತೆ.

ಬಿ. ಆದಿನಾರಾಯಣಶಾಸ್ತ್ರಿ,
ವಿದ್ಯಾನಂದ ಬುಕ್‌ಡಿಪೋ, ಶಂಕರಪುರ,
ಬೆಂಗಳೂರು ಸಿಟಿ.

ಸದರೀ ಗ್ರಂಥಕರ್ತನಿಂದ ರಚಿಸಲ್ಪಟ್ಟ ಇತರ ಪುಸ್ತಕಗಳ ಪಟ್ಟಿ.

---

೧. ಮಾರ್ಕೆಟ್ ಕಾಕ್ಯುಲೆಟರ್ ೧ನೇ ಭಾಗ. ರೂ. ೦-೧-೬

೨. .... ೨ನೇ .... ,, ೦-೧-೬

೩. .... ೩ನೇ .... ,, ೦-೧-೬

೪. .... ೪ನೇ .... ,, ೦-೧-೬

೫. .... ೫ನೇ .... ,, ೦-೧-೬

೬. ಅಬ್ಜರ್ವೇಷನ್ ಸ್ಕೆಚ್ ಪ್ರೆಂಡ್ಸ್ ಬುಕ್. ,, ೦-೦-೬

೭. ಮೊರಲ್ ಲೆಸನ್ಸ್. ೧ನೇ ಭಾಗ. ,, ೦-೧-೦

೮. ಶ್ರೀಭಗವದ್ಗೀತಾ (ಇಂಗ್ಲೀಷ್ ತರ್ಜುಮೆ) ೦-೬-೦

೯. .... (ಕನ್ನಡ) .... ,, ೦-೬-೦

೧೦. ನೀತಿಪಾಠಗಳು (೧. ೨. ೩. ೪ನೇ ಭಾಗಗಳು) ,, [೦-೪-೦]

೧೧. ನೀತಿಮಾಲ. (೧. ೨ನೇ ಭಾಗಗಳು) ೦-೨-೦

೧೨. ಶುಕ್ರನೀತಿ (ಇಂಗ್ಲೀಷ್ ತರ್ಜುಮೆ) [೧. ೨. ೩ನೇ ಭಾಗಗಳು] ,, ೦-೩-೦

೧೩. ವಿನೋದ ವಾಕ್ಯಮಂಜರಿ. (೧. ೨. ೩ನೇ ಭಾಗಗಳು) ,, ೦-೬-೦
